ಶ್ರೀಮದ್ರಾಮಾಯಣದೊಳಗಿನ

ಯಕ್ಷಗಾನ

ಮಕರಾಕ್ಷನ ಕಾಳಗವು

ಜತ್ತಿ ಈಶ್ವರ ಭಾಗವತರಿಂದ ರಚಿಸಲ್ಪಟ್ಟದ್ದು

ಪಾತ್ರವರ್ಗ:

ರಾಮ	ರಾವಣ
ಲಕ್ಷ್ಮಣ	ಇಂದ್ರಜಿತು
ಸುಗ್ರೀವ	ಕುಂಭ - ನಿಕುಂಭ
ಹನುಮಂತ	ಯೋಪಾಂಬಕ
ಜಾಂಬವ	ಶ್ರೋಣಿತಾಂಬಕ
ಅಂಗದ	ವಜ್ರಜ್ವಾಲೆ
ದ್ವಿವಿದ	ಕಾಲನೇಮಿ
ನೀಲ	ದೂತರು
ಸುಷೇಣ	ಮಕರಾಕ್ಷ
ವಿಭೀಷಣ	ಸಾರಥಿ
ಮಕರಿ	
ಬ್ರಹ್ಮ	

ಮುನ್ನುಡಿ

'ಮುಕರಾಕ್ಷನ ಕಾಳಗ' ಎಂಬ ಈ ಯಕ್ಷಗಾನ ಪ್ರಸಂಗವು ಕೈ. ವಾ. ಶ್ರೀಶ್ರೀ ಜತ್ತಿ ಈಶ್ವರ ಭಾಗವತರ (ಕ್ರಿ. ಶ. 1872-1945) ಕೃತಿ. ಇವರ ಸಂಪೂರ್ಣ ರಾಮಾಯಣ ಎಂಬ ಈ ಮೊದಲಿನ ಯಕ್ಷಗಾನ ಪ್ರಬಂಧವು ಪ್ರಕಟವಾಗಿ (1938) ಇಂದಿಗೆ ೨೦ ವರ್ಷಗಳು ಸಂದುವಾದರೂ, ಅವರ ಈ ಯಕ್ಷಗಾನ ಪ್ರಸಂಗವು ಇಷ್ಟರ ತನಕ ಬೆಳಕಿಗೆ ಬಾರದಿದ್ದರೆ ಆತಕ್ಕೆ ಹಣದ ಕೊರತೆಯೇ ಅಲ್ಲ, ನಮ್ಮ ಜಿಲ್ಲೆಯ ಮಟ್ಟಿಗಾದರೂ ಯಕ್ಷಗಾನ ಕೃತಿಗಳಿಗೆ ಬಹುತಕವಾಗಿ ಇದ್ದಿರುವ ತಾತ್ಸಾರ ಅಲ್ಲವಾದರೆ ಅನಾದರವು ಕಾರಣವೆನ್ನಬಹುದು. ನಮ್ಮ ಜಿಲ್ಲೆಯ ಮಟ್ಟಿಗಾದರೂ ಎಂದೆನೇಕೆ? ಎಂದರೆ, ನಮ್ಮ ನೆರೆಯ ಉತ್ತರ ಕನ್ನಡ ಜಿಲ್ಲೆಯಲ್ಲಾದರೆ ಯಕ್ಷಗಾನ ಕಲೆಯಲ್ಲಿ ಈಗಲೂ ಸ್ಪೃಹೆಯೂ ಇದೆ, ಆದರವೂ ಇದೆ ಎಂಬುದಕ್ಕೆ ಅಲ್ಲಿಯ ಕಾರವಾರದಿಂದ ಹೊರಡುತ್ತಿರುವ 'ಯಕ್ಷಗಾನ' ಎಂಬ ಚಲೋದಾದ ಮಾಸಪತ್ರಿಕೆ ತಕ್ಕ ಸಾಕ್ಷಿಯಾಗಿದೆ.

ಇದೊಬ್ಬ ಒಳ್ಳೇ ಹೆಸರುವಾಸಿಯಾದ ಲೇಖಕರ ರಚನೆ. ಶ್ರೀಶ್ರೀ ಜತ್ತಿ ಈಶ್ವರ ಭಟ್ಟರೆಂದರೆ ನಮ್ಮಲ್ಲಿಂದ ಅನತಿದೂರದಲ್ಲಿರುವ ಬಾಯಾರು ಗ್ರಾಮದವರು. ಅವರ ಹೆಸರೆಂದರೆ ಬಳಕೆಯ ಮಾತು, ಅವರೊಬ್ಬ ಮೆಚ್ಚಿನ ಭಾಗವತರು, ಸೊಗಸಾದ ಹರಿಕಥೆಗಾರರು, ಮೇಲಾಗಿ ಯಕ್ಷಗಾನಾದಿ ಹಾಡುಗಬ್ಬದ ಕವಿಗಳು, ಸಾಲದುದಕ್ಕೆ ಆಶುಕವಿಗಳು ಕೂಡಾ, ಎಂದು ನನ್ನ ಮಿತ್ರವರ್ಯರಾದ ಕನ್ನಡ ಪಂಡಿತ ಕೈ. ವಾ. ಮುಳಿಯದ ತಿಮ್ಮಪ್ಪಯ್ಯನವರು ಇವರ ಮೊದಲನೆಯ ಕೃತಿಯಾದ 'ಸಂಪೂರ್ಣ ರಾಮಾಯಣ'ಕ್ಕೆ ಬರೆದ ಮುನ್ನುಡಿಯಲ್ಲಿ ಹೇಳಿರುವ ಆ ಮಾತುಗಳನ್ನು ಸತ್ಯಂಕರಿಸುತ್ತದೆ ಅವರ ಈ ಯಕ್ಷಗಾನ ಕೃತಿ 'ಮುಕರಾಕ್ಷನ ಕಾಳಗ'.

ಈ ಪ್ರಬಂಧ ಬಹಳ ಚೆನ್ನಾಗಿದೆ, ಓದಿ ಮೆಚ್ಚತಕ್ಕಂತಿದೆ, ಮೆಚ್ಚಿ ಹಾಡತಕ್ಕಂತಿದೆ, ಹಾಡಿ ಕೇಳತಕ್ಕಂತಿದೆ, ಆಡತಕ್ಕಂತಿದೆ, ಆಡಿಸಿ ನೋಡತಕ್ಕಂತಿದೆ. ನಮ್ಮಿಂದಿನ ಯಕ್ಷಗಾನ ಕೃತಿಗಳ ಸಂಗಡ ಹೋಲಿಸುವಲ್ಲಿ ಈ ಪ್ರಸಂಗವೇನೂ ಕಡಮೆ ಎನಿಸುವುದಿಲ್ಲ. ಶ್ರೀಶ್ರೀ ಜತ್ತಿ ಈಶ್ವರ ಭಟ್ಟರವರ ಈ 'ಮುಕರಾಕ್ಷನ ಕಾಳಗ'ವು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಸಾಹಿತ್ಯದಲ್ಲಿ ಉನ್ನತವಾದ ಸ್ಥಾನವನ್ನೂ ಸುದೀರ್ಘವಾದ ಆಯುಷ್ಯವನ್ನೂ ಸಹೃದಯರ ಹಾಗೂ ರಸಿಕ ಮಹಾಶಯರ ಮೆಚ್ಚುಗೆಯನ್ನೂ ಮನ್ನಣೆಯನ್ನೂ ಪಡೆದು ವಿಶ್ರುತವಾಗಿ ಬಾಳುತ್ತಿರುವಂತೆ ಶ್ರೀದೇವರು ಅನುಗ್ರಹಿಸಲಿ! ಎಂದು ಆತನನ್ನು ಪ್ರಾರ್ಥಿಸುತ್ತೇನೆ.

ಇತಿ ಶಮ್,

ಗೋವಿಂದ ಪೈ,

ಮಂಜೇಶ್ವರ.

ಪೀಠಿಕೆ

ಮಹನೀಯರೆ,

ನನ್ನ ಪೂಜ್ಯ ತೀರ್ಥರೂಪರ ಈ 'ಮಕರಾಕ್ಷನ ಕಾಳಗ'ವೆಂಬ ಕೃತಿಯನ್ನು ಕನ್ನಡ ನಾಡಿನ ಯಕ್ಷಗಾನ ಕಲಾಭಿಜ್ಞರ ಮುಂದಿಡುವೀಸಂದರ್ಭದಲ್ಲಿ, ಈ ಗ್ರಂಥ ಕರ್ತೃಗಳ ಮತ್ತು ನನ್ನ ವಿಷಯ ಒಂದೆರಡು ಮಾತುಗಳನ್ನು ಅರಿಕೆಮಾಡಲು ನಿಮ್ಮ ಅನುಮತಿಯನ್ನು ಕೇಳಿಕೊಳ್ಳುತ್ತೇನೆ.

ಈ ಗ್ರಂಥಕರ್ತೃಗಳಾದ ನನ್ನ ಪೂಜ್ಯ ತೀರ್ಥರೂಪರು ಕ್ರಿಸ್ತಶಕ 1872ನೆಯ ಇಸವಿ ಅಗೋಸ್ತು ತಿಂಗಳಲ್ಲಿ ಕಾಸರಗೋಡು ತಾಲೂಕು ಬಾಯಾರು ಗ್ರಾಮದ ಜತ್ತಿ ಎಂಬಲ್ಲಿ ಕೃಷ್ಣಭಟ್ಟ ಮತ್ತು ಗೌರಮ್ಮ ಎಂಬಿವರ ಏಕಮಾತ್ರ ಪುತ್ರನಾಗಿ ಜನ್ಮವೆತ್ತಿದರು. ನಿರ್ಧನಿಕರಾದರೂ ಕಲಾಪ್ರೇಮಿಗಳಾದ ಆ ತಂದೆತಾಯಿಯವರಿಂದ ಪೋಷಿತರಾಗಿ ವಿದ್ಯಾಭ್ಯಾಸ ಪಡೆದು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ "ವರಾಹ ಚರಿತ್ರೆ" ಎಂಬ ಯಕ್ಷಗಾನ ಗ್ರಂಥವನ್ನು ರಚಿಸಿದರು. ಮುಂದೆ ಜೀವನನಿರ್ವಹಣೆಗಾಗಿ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಸರ್ವೆ ಉದ್ಯೋಗಕ್ಕೆ ಸೇರಿ, ಆ ಮೇಲೆ ಇಪ್ಪತ್ತೈದನೆಯ ವಯಸ್ಸಿನಲ್ಲಿ ಮುಂಡೆಕೋಲು ಗ್ರಾಮದ ಶ್ಯಾನುಭಾಗರಾಗಿ ಕೆಲಸ ಮಾಡಿದರು. ಅದೇ ವರ್ಷ ಸರಸ್ವತಿ ಅಮ್ಮ ಎಂಬವರೊಡನೆ ವಿವಾಹವಾಗಿ ಗೃಹಸ್ಥಾಶ್ರಮ ಪಡೆದು, ಅವರ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಕ್ರಿ. ಶ. 1900 ಇಸವಿ ದಶಂಬರ 24ರಂದು ದೌರ್ಭಾಗ್ಯನಾದ ನಾನು ಜನಿಸಿದೆನು.

ಯಕ್ಷಗಾನ ಕೃತಿರಚನೆಯಲ್ಲಿಯೂ, ಭಾಗವತಿಕೆಯಲ್ಲಿಯೂ ವಿಶೇಷ ಅಭಿರುಚಿಯಿದ್ದ ಕಾರಣ 1902ರಲ್ಲಿ ಶ್ಯಾನುಭಾಗ ಉದ್ಯೋಗವನ್ನು ಬಿಟ್ಟು ಯಕ್ಷಗಾನ ಮೇಳಗಳಲ್ಲಿ ಭಾಗವತರಾಗಿಯೂ, ಗ್ರಂಥಕರ್ತರಾಗಿಯೂ, ಹರಿಕಥಾ ವೃತ್ತಿಯಲ್ಲಿಯೂ ತನ್ನ ಶೇಷಾಯುಷ್ಯವನ್ನು ಕಳೆದರು. ಆಗ ಪ್ರಸಿದ್ಧ ಮೇಳಗಳಾಗಿದ್ದ ಕೆಲವು ಈಗಲೂ ಪ್ರಸಿದ್ಧವಾಗಿ ಉಳಿದಿರುವ, ಇಚ್ಲಂಪಾಡಿ, ಕೂಡ್ಲು, ಕಟೀಲು, ದೆಕ್ಕೆತೋಡಿ ಇಂತಹ ಮೇಳಗಳಲ್ಲಿ ಭಾಗವತಿಕೆ ವೃತ್ತಿಯನ್ನು ನೆರವೇರಿಸುತ್ತಿದ್ದು, ತಮ್ಮಧ್ವೈ, ಮಕರಾಕ್ಷನ ಕಾಳಗ, ಸಂಪೂರ್ಣ ರಾಮಾಯಣ, ಕೇತಕೀವಿಲಾಸ, ನಂದಿನೀ ವಿಲಾಸ, ಅಂಜನಾವಿಲಾಸ, ಮದನಮಂಜರೀ ಕಲ್ಯಾಣ, ಸತಿ ಸುಲೋಚನ, ಸೂರ್ಯ ಕಾಂತಿಕಲ್ಯಾಣಗಳೆಂಬ ಯಕ್ಷಗಾನ ಪ್ರಸಂಗಗಳನ್ನೂ, ಧರ್ಮಪಾಲ ಚರಿತ್ರೆ, ತಾರಾ ವಿಲಾಸ, ಚಂಡಕಿರಾತ, ಗಜೇಂದ್ರಮೋಕ್ಷ, ಪಾರಿಜಾತ, ಕೀರ್ತನಾತರಂಗ, ತುಳು ಕೀರ್ತನಮಾಲೆ ಎಂಬಿತ್ಯಾದಿ ಹಲವಾರು ಹರಿಕಥೋಪಯೋಗೀಗ್ರಂಥಗಳನ್ನೂ ಬರೆದರು. ಇವುಗಳಲ್ಲಿ ಕೆಲವು ಅವರ ಜೀವಮಾನಕಾಲದಲ್ಲಿ, ಎಂದರೆ ಕ್ರಿ. ಶ. 1938ನೇ ಇಸವಿಯಲ್ಲಿಯೇ ಮುದ್ರಿತವಾಗಿ ಜನಪ್ರಿಯವಾಗಿವೆ. ಇನ್ನೆಷ್ಟೋ ಗ್ರಂಥಗಳು ಮುದ್ರಣವಾಗಲು ಬಾಕಿಯುಳಿದಿವೆ. ಕ್ರಿ. ಶ. 1931ರಲ್ಲಿ ನನ್ನ ಮಾತೃಶ್ರೀಯವರು ಪರಂಧಾಮವನ್ನೈದಲು, ತಂದೆಯವರು, ವೈರಾಗ್ಯತಾಳಿ ದೇಶಯಾತ್ರೆ ಮಾಡುತ್ತ ಅನೇಕ ಭಕ್ತಿಪರವಾದ ಕೀರ್ತನೆಗಳನ್ನೂ ಗ್ರಂಥಗಳನ್ನೂ ರಚಿಸಿದರು. ಮುಂದೆ

ಕ್ರಿ. ಶ. 1945ನೇ ಇಸವಿ ಜೂನ್ ತಿಂಗಳ ೩ರಲ್ಲಿ ಅವರು ಇಹಲೋಕವನ್ನು ತ್ಯಜಿಸಲು ನಾನು ತಬ್ಬಲಿಯಾದೆನು.

ಬಾಲ್ಯಾರಭ್ಯ ಕಷ್ಟದಿಂದಲೇ ಜೀವನ ನಿರ್ವಹಣೆಮಾಡುತ್ತಿದ್ದರೂ ಪೂಜ್ಯ ತೀರ್ಥರೂಪರ ಆಶ್ರಯದಿಂದ ಯಕ್ಷಗಾನ ಹರಿಕಥಾಕಾಲಕ್ಷೇಪಗಳಲ್ಲಿ ಸಮಯ ವನ್ನು ಸದ್ವಿನಿಯೋಗಪಡಿಸುತ್ತ, ತಂದೆಯವರು ಮೃತರಾಗಿ ಹೋದಮೇಲೆ ಕೆಲ ಕಾಲ ಕೃಷಿಕನಾಗಿಯೂ, ಅಧ್ಯಾಪಕನಾಗಿಯೂ ಹರಿಕಥಾಕಾಲಕ್ಷೇಪಮಾಡುವವ ನಾಗಿಯೂ, ಜೀವನ ನಿರ್ವಹಿಸಿದೆನು.

ಇಬ್ಬರು ಹೆಣ್ಣುಮಕ್ಕಳನ್ನು ಪಡೆದು, ನನ್ನ ದಾರಿದ್ರ್ಯದಲ್ಲಿಯೂ ಪಿತೃಕರ್ತವ್ಯ ವಾದ ಕನ್ಯಾದಾನವನ್ನು ಪೂರೈಸಿ 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಮಾತಿನಂತೆ ಖಿನ್ನಮನಸ್ಕನಾದ ನಾನು ಶ್ರೀ ಶ್ರೀಧರಸ್ವಾಮಿಗಳಲ್ಲಿ ಸದುಪದೇಶವನ್ನು ಪಡೆದು ಸದ್ಯ ಪುಸ್ತಕವ್ಯಾಪಾರದಿಂದ ನನ್ನ ಕಷ್ಟಜೀವನವನ್ನು ಸಾಗಿಸುತ್ತಿದ್ದೇನೆ.

ತೀರ್ಥರೂಪರ ಕೊನೆಯ ಆಸೆಯಂತೆ, ಪಿತೃವಾಕ್ಯ ಪರಿಪಾಲನಾರ್ಥವಾ ಗಿಯೂ, ಆ ಮೂಲಕ ಅವರ ಸಂಪೂರ್ಣ ಆಶೀರ್ವಾದವನ್ನು ಪಡೆಯುವ ಪುಣ್ಯೋ ದ್ದೇಶದಿಂದಲೂ, ಇಂದಿಗೀ ನನ್ನ ಆರ್ಥಿಕ ದುರವಸ್ಥೆಯ ಸಂದರ್ಭದಲ್ಲಿಯೂ ಈ ಗ್ರಂಥವನ್ನು ಮುದ್ರಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಕೈಗೊಂಡಿದ್ದೇನೆ. ನನ್ನ ಪೂಜ್ಯ ಪಿತೃವರ್ಯರ ಯೋಗ್ಯತೆಯ ಪರಿಚಯವುಳ್ಳವರು ಹಾಗೂ ನನ್ನ ಪರಿಸ್ಥಿತಿಯ ಪರಿಚಯವುಳ್ಳ ನಾಡಿನ ಹಿರಿಯ ಕಿರಿಯ ಮಹನೀಯರೆಲ್ಲರೂ ನನ್ನೀ ಪ್ರಯತ್ನವನ್ನು ಮೆಚ್ಚಿ ಉದಾರ ಹೃದಯದಿಂದ ಪ್ರೋತ್ಸಾಹಿಸುವರಾಗಿ ನಂಬಿದ್ದೇನೆ.

ನಾನು ಈ ಗ್ರಂಥವನ್ನು ಪ್ರಕಟಿಸಲು ಸಹಾಯವಾಗುವಂತೆ ನನಗೆ ಇದರ ಉತ್ತಮ ಪ್ರತಿಯನ್ನು ತೆಗೆದು ನೆರವಾದ ಶ್ರೀ ಕಿಜೆಕಾರು ಮಹಾಬಲಭಟ್ಟರಿಗೂ, ಇದರ ಅಚ್ಚಿನ ಕರಡುಪ್ರತಿಯನ್ನು ನೋಡಿ ಸಹಾಯ ಮಾಡಿದ ಶ್ರೀ ಕಯ್ಯಾರ ಕಿಞ್ಞಣ್ಣರೈಗಳಿಗೂ, ನನ್ನ ಅಪೇಕ್ಷೆಯನ್ನು ಅಲ್ಲಗಳೆಯದೆ, ನನ್ನ ತೀರ್ಥರೂಪರ ಹಾಗೂ ಅವರ ಕೃತಿಗಳ ಮೇಲಿನ ಸದಭಿಪ್ರಾಯದಿಂದ ಇದಕ್ಕೆ ಒಪ್ಪುವ ಮುನ್ನುಡಿ ಯನ್ನಿತ್ತು ಪ್ರೋತ್ಸಾಹಿಸಿದ ರಾಷ್ಟ್ರಕವಿ ಶ್ರೀ. ಗೋವಿಂದ ಪೈಗಳಿಗೂ, ಈ ಪುಸ್ತಕ ವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿ ಉಪಕಾರ ಮಾಡಿದ ಮಂಗಳೂರು ಶಾರದಾ ಪ್ರೆಸ್ಸಿನ ಮಾಲಕರಿಗೂ ನನ್ನ ಕೃತಜ್ಞತೆಗಳು.

ಬದಿಯಡ್ಕ,
ಪೆರಡಾಲ ಪೋಸ್ಟು
9-11-1958

ಇತಿ ವಿದ್ವಜ್ಜನ ವಿಧೇಯ,

ಜತ್ತಿ ಕೃಷ್ಣಭಟ್ಟ

॥ ಶ್ರೀ ವಿಶ್ವೇಶ್ವರಃ ಪ್ರಸನ್ನಃ ॥

ಶ್ರೀಮದ್ರಾಮಾಯಣದೊಳಗಣ

ಯಕ್ಷಗಾನ

ಮಕರಾಕ್ಷನ ಕಾಳಗ

॥ ಶಾರ್ದೂಲ ವಿಕ್ರೀಡಿತ ವೃತ್ತ ॥

ಶ್ರೀಸೀತಾಸ್ಮಿತವಕ್ತ್ರಪದ್ಮಭ್ರಮರಂ ಬಾಲಾರ್ಕಕೋಟಿಪ್ರಭಂ । ಕೌಸಲ್ಯಾಜಠರಾರ್ಣವೇಂದುರುಚಿರಂ ಸಾಕೇತಸನ್ಮಂದಿರಂ ॥ ಆಶಾಪಾಶ ವಿನಾಶಶ್ಯಾಮಲವಪುಂ ರಾಜಾಧಿರಾಜಂ ನುತಂ । ವಾಸಿಷ್ಠಾದಿಭಿರರ್ಚಿತಂ ರಘುವರಂ ಧ್ಯಾಯೇತ್ಸದಾಮಾನಸೇ ॥ ೧ ॥

॥ ರಾಗನಾಟಿ-ರೂಪಕತಾಳ

ಶ್ರೀಗಣರಾಜಗಜಾನನ । ನೈಗಮತತಿನುತ ಸದ್ಗುಣ । ಸಾಗರ ಎಲ ರುಣಿವಸಿರಸ । ದಾಗಮ ಸರ್ವಜ್ಞ ॥ ಪೂಗೋಲಾರಿ ಕುಮಾರಕ । ಯೋಗಿ ಜನಾನತ ಸುಬೆನಕ । ನೀಗೆಮುಗುರೆ ನಿರ್ವಿಘ್ನತೆ । ಬೇಗದಿಕವಿ ಪ್ರಜ್ಞ ॥ ಜಯಜಯ ಜಯಜಯತು ॥ ೧ ॥ ವರ್ಣಿಸೆ ಶಿವ ಪೆರೆದಲೆ ಯನು । ಸೊನ್ನೆಯವೆಟ್ಟಂಬಿಲ್ಲನು । ಬಾನ್ನವಿರನು ಮಿಗಗ್ಯೆಯ್ಯನು । ಪೆಣ್ದೊ ಡೆಯನು ಸತತ ॥ ಎಣ್ಮೆಯ್ಯ ಸೊಡವಲಿ ವನೆಯನೆ । ಮನ್ಮಥ ಹರಮೇಣ್ ಪಿರಿತಿನಿ । ಯಾಣ್ಮನೆನಿಪ ವಿಶ್ವೇಶ್ವರ । ಮನ್ಮನದೊಳು ನಿಲುಗೆ ॥ ಜಯಜಯ ಜಯಜಯತು ॥ ೨ ॥ ಐಕಿಲ್‌ವೆಟ್ಟೆಣುಗಿಯಪದ । ಕೋಕನದಕ್ಕೆರಗುತ ಲಜ । ನಾಕೆಗೆ ಮಣಿದಲವೊರ್ಡೆಯನ । ಶ್ರೀಕರದಿಂ ನಮಿಸಿ ॥ ತಾಕುಡು ವಿಲ್ಲನ ಮಾತೆಗೆ । ನಾ ಕೈಮುಗಿವುತ ಹಿರಿಯರ । ನೇಕ ಸ್ತುತಿಸುತ ಪೇಳುವೆ । ನೀಕೃತಿ ಸಂಭ್ರಮದಿ ॥ ಜಯಜಯ ಜಯಜಯತು ॥ ೩ ॥

॥ ಭಾಮಿನಿ ॥

ಜಾಣಸಮರಧುರೀಣ ಕವಿಸ । ತ್ರಾಣ ನುತ ಗೀರ್ವಾಣ ಕವಿ ಪೂ । ಬಾಣಬಾಣ ಸುರಾದ್ರಿ ವೇದಪುರಾಣ ಬಲ್ ನಿಪುಣ ॥ ಊಣಯವು ತುಸಗಾಣದ್ವೈನಿ । ನ್ನಾಣುವಿಕೆಗೇನ್ ಕೇಣರಘುಪತಿ । ಪ್ರಾಣಮಿತ್ರ ಪ್ರವೀಣ ಭುವನ ಪ್ರಾಣಜಂವಂದೇ ॥ ೧ ॥

॥ ವಾರ್ಧಕ ॥

ಜಗದಕವಿ ಚೂತವನ ಚೈತ್ರ ವಾಲ್ಮೀಕಿಪದ । ಯುಗಕೆರಗುತಲಿ ನಮೋ ಎಂದು ಬುಧಜನರೊಲ್ಮೆ । ಮಿಗೆಯಾಂತು ರಾಮಾಯಣಾಖ್ಯ ಚರಿತಾಬ್ಧಿಯೊಳುಲಂಕೆಯ ಪುನರ್ದಹಿಸುತ ॥ ರಘುವೀರ ಮಕರಾಕ್ಷನಂ ಗೆಲ್ದ ಸತ್ಕಥಾ । ದಿಗಳ ಸಂಗ್ರಹಿಸಿ ಧಾತ್ರಿಯೊಳೆಕ್ಷಗಾನದಿಂ । ಜಗದುದಯ ಸ್ಥಿತಿಲಯಕೊಡೆಯ ವಿಶ್ವೇಶ್ವರನ ವರಕಟಾಕ್ಷದಿ ಪೇಳ್ವೆನು ॥ ೧ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ರವಿಕುಲೋದ್ಭವರಾದ ಕುಶಲವ । ಕುವರರಾ ವಾಲ್ಮೀಕಿ ಮುನಿ ಪದ । ಕುವಲಯಕ್ಕಭಿನಮಿಸಿ ಕೇಳ್ದರು । ತವಕದಿಂದ ॥ ೧ ॥ ಎಲೆ ಮುನೀಶ್ವರತವವಚೋದಿತ । ಲಲಿತರಾಮಕಥಾಸುಧೆಯ ಕುಡಿ । ದಲ ಸದೆಮ್ಮಯ ಕರ್ಣಗಳದೇನ್ । ಬಲುರುಚಿಪುದೈ ॥ ೨ ॥ ಅದುನಿಮಿತ್ತಾ ರಘುನೃಪಾಲನು । ಪದುಮಭಾನುವಿಭಾವರಿಯೊಳುರಿ । ಪದರಿಸಿದನುಗ ಡೇಕೆ ಲಂಕೆಗೆ । ಯದುಭುತದೊಳು ॥ ೩ ॥ ಹತ್ತುತಲೆಯವಗೈದನೇನನು । ಸತ್ತರೆಂತು ನಿಕುಂಭಮುಖ್ಯರು । ಮತ್ತ ಮಕರಾಕ್ಷನನು ರಘುವರ । ಕತ್ತರಿಸಿದ ॥ ೪ ॥ ಎಂತೆನುವಚಾರಿತ್ರಸಾಂಗದಿ । ನೀಂತಳುವದುಪಿ ರೆನಲುಯತಿವರ । ಕಂತುಜನಕನನೆನೆದುಪೇರ್ದನು । ಸಂತಸದಲಿ ॥ ೫ ॥

॥ ವಾರ್ಧಕ ॥

ದಿನನಾಥನನ್ವಯ ಶಿರೋಮಣಿಗಳಿರಕೇಳಿ । ವನಜಾಂಬಕಂ ಸುರರ ದೂರಿಂದ ದಶರಥನ । ತನುಜನೆಂದೆನಿಸಿ ಕುಶಿಕಜನಮುಖಮುದ್ಧರಿಸಿ ಶಿವ ಧನುವಮೇಣ್ ಖಂಡಿಸಿ ॥ ವನರುಹದಳಾಕ್ಷಿ ವೈದೇಹಿಯೊಡವೆರದು ಭೃಗು । ಜನಗೆಲ್ದುಪಿತನಾಜ್ಞೆಗನುವಾಗಿ ಸತಿಸಹಿತ । ವನವಾಸಕಂ ಪೊಕ್ಕು ಪಂಚವಟಿಗೈದಿ ಶೂರ್ಪನಖಿಯಂ ಭಂಗಗೊಳಿಸಿ ॥ ೧ ॥ ವನಿತೆ ಯಂಗಳೆದಿಂದ್ರಜನಮುರಿದು ಸುಗ್ರೀವ । ನನುಬೆರದು ಹನುಮನಿಂ ಸತಿ ಯಿರವ ತಿಳಿದಬ್ಧಿ । ಯನು ಕಟ್ಟಿ ಲಂಕೆಯಂ ಮುತ್ತಿ ಕಪಿಭಟರೊಡನೆ ದನುಜರನಿಬರಜೈಸಲು ॥ ಅನುವರಕ್ಕಿದಿರಾದ ಕುಂಭಕರ್ಣಾಸುರಾ । ದ್ಯನಿಮಿಷವಿರೋಧಿಗಳನುಗ್ಗರಿದನೆಂಬ ಕಥೆ । ಯಿನಿತು ಮುಂದಟವಾಯ್ತು ಲವನೆ ಕೇಳ್ ಮೇಲ್ಕಥೆಯುನನುಗೊಳಿಪೆನೆನುತಾಗಲು ॥ ೨ ॥ ನುಡಿದ ಮುನಿಶಾರ್ದೂಲ ಕೇಳಿರೈ ಕುಶಲವರು । ಮಡಿದನನುಜಾತನೆಂಬುದ ಕೇಳ್ದು ದಶಮುಖಂ । ಕಡುತಾಪವೆತ್ತಿರಲ್ಕತಿಕಾಯ ಪಿತನೊಡಂಬಡಿಸಿ

ಸಂಗರಕ್ಕೈದುತ ॥ ಕಡಿದಾಡಿ ರಾಮಾನುಜನಶರದಿದಿವದತ್ತ । ನಡೆಯಲಾ ಲಕ್ಷ್ಮಣಂ ವಿಕ್ಕಸುರರಂಗೆಲ್ದು । ಪಡೆಸಹಿತವಿಜಯೋತ್ಸವದೊಳಣ್ಣ ನೆಡೆಗೈದಿ ಮಣಿದಡರಸಂನೆಗಹುತ ॥ ೩ ॥

॥ ರಾಗ ಭೈರವಿ ಝುಂಪೆತಾಳ ॥

ಲವನೆಕೇಳ್ ಬಳಿಕ ಸಹ । ಭವನಬಿಗಿದಪ್ಪಿಯು । ತ್ಸವದೊಳಿನ ಸುತಗೆಂದ । ಕುವಲಯದಳಾಕ್ಷ ॥ ೧ ॥ ಧುರದೊಳಿಂದಿನಲಿಖಳ । ವರ ರನುಗ್ಗೊತ್ತಿದಿರಿ । ಸರಿಯಾರು ನಿಮಗೆ ಸುರ । ನರ ಭುಜಂಗರಲಿ ॥ ೨ ॥ ಒರ್ವರಿಂದೋರ್ವರತಿ । ಗರ್ವಿಗಳು ಸಾಹಸರು । ಸರ್ವಥಾ ಪೊಗಳುವರೆ । ಶರ್ವಗಸದಳವು ॥ ೩ ॥

॥ ಭಾಮಿಂನಿ ॥

ಎನುತರಘುರಾಜೇಂದ್ರ ಚಂದ್ರಮು । ನನುಜನೊಡನೈತಂದ ಶಿಬಿ ರಕೆ । ದಿನಪನೋಲಗಹರಿದುದತ್ತಲು ಮೆರೆಯೆನಿಶಿಯೋಗ ॥ ಅನಕದಶ ಮುಖನಿತ್ತನೋಲಗ । ವನುಸುರಾರಿಗಳೊಗ್ಗಿನಲಿನಿಜ । ತನಯನತಿಕಾ ಯಾಂಕನಳಿವನು ಕೇಳ್ದುಖಳನಾಗ ॥ ೧ ॥

॥ ರಾಗ ನಾದನಾಮಕ್ರಿಯೆ ಅಷ್ಟತಾಳ ॥

ಚಿತ್ತದಿಹಲವಹಂಬಲಿಸುತ್ತ । ಕಾಡ । ಹತ್ತಿದ ಕುರುಡನೋಲಲೆ ವುತ್ತ ॥ ಅತ್ತಿತ್ತ ನೋಡುತ್ತ ಸೊರಗಿದ । ರಣ । ಕುತ್ತರವೇನೆಂದು ಮರು ಗಿದ ॥ ೧ ॥ ಅನುಜನಧುರಕಟ್ಟಿಕಳಿದೆನು । ಮತ್ತೆ । ತನಯನರಾಂತಕ ನಳಿದನು ॥ ಘನಪರಾಕ್ರಮಶಾಲಿಯತಿಕಾಯ । ರಣಾ । ವನಿಯೊಳಿಂದಸ್ತ ಮಿದಪ್ರೀಯ ॥ ೨ ॥ ಅರಿಗಳುಪೆರ್ಚಿದರೆನ್ನುತ್ತ । ಮನ । ಕರಗಿ ರಕ್ಕಸ ರಾಯನಿರೆಮತ್ತ ॥ ಸುರರಾಯಜಿತು ನಡೆತಂದನು । ತಂದೆ । ಗೆರಗಿ ಪಲ್ಮೊರೆವುತ್ತನುಡಿದನು ॥ ೩ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಜನಕ ದುಗುಡವಿದೇಕೆ ನಾಳೆಯೊಳನುವರದಿ ನರಪ್ಲವಗರನು ಶಾ । ಕಿನಿಯರಿಂಗೀಯದಿರೆ ಕೇಳ್‌ತವ । ತನುಜನಲ್ಲ ॥ ೧ ॥ ಅಸುರಪತಿ ಕೇಳ್ ನಿನ್ನ ನೋಲದ । ಸಚಿಯಕಿತ್ತಿಕ್ಕುವೆನು ರಾಮನ । ಬಸುರಿನಲಿ ಬೆಳಗುವೆನು ಲಕ್ಷ್ಮಣ । ನುಸುರ ಜಲದಿ ॥ ೨ ॥ ಮತ್ತೆ ಸುಗ್ರೀವನ ಕಪಾಲವ । ನೊತ್ತಿ ಪಾತ್ರೆಯನೆಸಗಿ ಕಪಿಗಳ । ನೆತ್ತರನು ತುಂಬುವೆನು

ಬಿಡುಪರ। ರಿತ್ತ ವ್ಯಥೆಯ ॥ ೩ ॥ ಅಳಿದ ಧೂಮ್ರಾಕ್ಷಾದಿಸುಭಟಾ। ವಳಿಯ ನಿನ್ನೋಲಗದ ಸಭೆಯಲಿ। ಸುಳಿಸುವೆನು ಕೊಡದಿರೆ ಕೃತಾಂತನ। ನುಳಿಯ ಗೊಡೆನು ॥ ೪ ॥ ಅರಿಯೆಯಾ ಮಮಶೌರ್ಯದೇಳ್ಗೆಯ। ಧುರದೊಳಿಂದಾ ಸೋತುಬಂದರೆ। ಉರಿಯಕುಂಡವಪೊಗುವೆ ಕಳುಹೈ। ಭರದೊಳೆನ್ನ॥ ೫ ॥

॥ ಕಂದ ॥

ಮಣಿದಿಂತೆಂದಾಖಳ ರಾ। ವಣನಿಂ ನೇಮವಕೊಂಡಡರುತರಥಮಾ ಗಂ ॥ ಎಣಿಸುತ ರಾಕ್ಷಸಬುಧ ತಿಂ। ಥಿಣಿಯೊಡನೈದಿಯೆ ಪೊಕ್ಕನಿ ಕುಂ ಭಿಣಿಯೊಳಗಂ ॥ ೧ ॥

॥ ಭಾಮಿನಿ ॥

ಉರಿಯನುದರವ ಬಗಿದುತಾ ವಿ। ಸ್ತರಿಸಿದನು ಕುಂಡದಲಿ ಮಾಂಸ ದ। ಚರುವಿನರುಣಜಲಾಜ್ಯ ಧಾರೆಯನರದ ದರ್ಭೆಗಳ ॥ ಬೆರಳ ಸಮಿ ಧೆಯಲಾಭಿಚಾರಾ । ಧ್ವರವನಿರ್ವರ್ತಿಸಿಪನಾನಡು । ವಿರುಳೊಳಂಚೆಯ ನೇರಿಬಂದಜ ನುಡಿಸಿದನು ಖಳನ ॥ ೧ ॥

॥ ರಾಗ ನವರೋಜು ಏಕತಾಳ ॥

ಸಾಕುಸಾಕೆಲೆ ಮಗನೆ । ಇನಿತ್ಯಾಕೊ ರಾಕ್ಷಸವರನೆ ॥ ಈ ಕಠಿಣಾಧ್ವರ । ವೇಕೈ ಚಿತ್ತಕೆ । ಬೇಕಾದುದ ಕೇ। ಳಾ ಕೊಡುವೆನು ಭಲ ॥ ೧ ॥ ತಿಳಿದೆನು ನಿನ್ನಯ ಪರಿಯ। ಈ ಕೊಳುಗುಳ ಜೈಸುವ ಬಗೆಯ ॥ ಘಳಿಲನೆಯೋಚಿಸಿ। ತಳುವದೆಮುಖಮು। ನ್ನಿಳೆಯೊಳಗೆಸಗಿದೆ। ಭಳಿರೆ ಪರಾಕ್ರಮ ॥ ೨ ॥ ಇದಕೊರಥ ಬಲಹಯವ। ಮ। ತ್ತಿದಕೊ ಶರಾಸನಶರವ ॥ ಇದಕೊನಿಧಾನಿಸು। ಒದಗಿದ ಸಂಗರ। ವದ ಜೈಸೆನ್ನು ತ। ಪದುಮಜ ನಡೆದನು ॥ ೩ ॥

॥ ರಾಗ ಮಾರವಿ ಏಕತಾಳ ॥

ಕೆರಳುತಮಿಗೆ ಹುಂಕರಿಸುತ ರಾವಣಿ। ಪೊರಟು ನಿಕುಂಭಿಣಿಯ॥ ಧಿರುರೆಶಭಾಸೆಂ। ದರಿಗಳ ಮೊತ್ತವ। ತರಿದಾರಘುಪತಿಯ ॥ ೧॥ ಬಿಂಕವ ನಿಲಿಸುವೆ ಬಿಡೆ ಕೈತಡೆಯಲಿ। ಶಂಕರನುಗ್ರದೊಳು ॥ ಶಂಕಿಪೆನೇ ಫಡ ಶಾಕಿನಿಯುವರೆನ್ನ। ಕಿಂಕರರಿಂದಿನೊಳು॥ ೨॥ ತಾತನೊಳಾಡಿದ ಮಾತನು ಸಲಿಸಲಿ। ನ್ನೇತರ ಭಯವೆನುತ। ಖಾತಿಯೊಳುಬ್ಬಿರಿ ದಾತನುಲಿದಸುರ। ವ್ರಾತಬೆದರಲಿತ್ತ ॥ ೩ ॥

॥ ವಾರ್ಧಕ ॥

ತೋರಿದಂ ಶಕ್ರನಿನಕುಲಗಚ್ಛಮುಕುರಮೆನೆ । ಸಾರಿದಂ ಭಾನು ಪೂರ್ವಾಚಲದೊಳಾಗ ಖಳ । ಸಾರಿದಂ ಭಟರಿಂಗೆ ಕರ್ಪೂರ ವೀಳ್ಯಮಂ ಭುವನತ್ರಯುಂ ಬೆಚ್ಚಲು ॥ ಏರಿದಂ ಮಣಿರಥವರಿಪುರಾಯಮೋಹರಕೆ । ಹಾರಿದಂ ಭೀತಿಯುಂ ನಿಜಧನುರ್ನಾದದಿಂ । ಮೀರಿದಂ ಕಾಲಾಗ್ನಿಗೆಂಟು ಮಡಿ ಕೋಪದಿಂದೈತಂದನಿಳೆಯದುರಲು ॥ ೧ ॥

॥ ಭಾಮಿನಿ ॥

ಉಕ್ಕಿದವು ನದಿ ಧೂಮಕೇತುವಿ । ದಿಕ್ಕಿನಲಿ ತೋರಿದವು ನೆಲ ಬೊ । ಬ್ಬಿಕ್ಕಿದವು ವರಮಾನಗಂಗಳುಹಾರಲಗ್ನಿಕಣ ॥ ಮುಕ್ಕುರಿಕಿ ಸಿಡಿ ಲೊದರಿದವು ಕಾ । ಲಿಕ್ಕಿದುದು ಕಡುಭೀತಿಪರ ಬಲ । ಕಕ್ಕಜದೊಳದ ಕಂಡು ತರಣಿಜಗೆಂದ ಹರಿಶರಣ ॥ ೧ ॥

॥ ರಾಗ ಸಾರಂಗ ಏಕತಾಳ ॥

ನೋಡಿದೆಯಾ । ಇನಜ । ನೋಡಿದೆಯಾ ॥ ಪಲ್ಲವಿ ॥ ನೋಡಿ ದೆಯ ಇನಜಬಪ್ಪ । ಕೇಡಿನಸೂಚನೆಯ ಮುಂದೇ । ನ್ಮಾಡಿರಿವರೊ ಖಳರುನಾವ್ ಮಾ । ತಾಡಲವಧಿಯಿಲ್ಲವಯ್ಯ ॥ ೧ ॥ ಏನೇನ ಮಾಡಿ ದರು ಕೇಳ್ಳೆ । ಹಾನಿಬಲಕಿಂದಾಗದಿರದು । ನಾನೇನೆಂಬೆ ಕೇಳದರಿಂದ । ನೀನೀಗ ಪೋಗಿ ॥ ಭಾನುವಂಶ ತಿಲಕರಿಗೆ ಸ್ಕ । ಧಾನಕಿಟ್ಟು ಮತ್ತೆ ಧುರಕೆ । ಸೈನಿಕರನುನೆರಹಿಬಾರೈ । ನಾನು ಮುಂದಾಗಿ ॥ ೨ ॥ ಬರುವ ಭಟನತೇರ ತಡೆದು । ಮರಳಿಚುವೆನುತ್ಪಾತಶತಗ । ಳಿರವನು ಕಂಡೆನ್ನ ಮನಸು । ಜರುಗಿತಲ್ಲಯ್ಯ ॥ ಇರುಳೊಳು ಶಕ್ರಾರಿ ನಮಗೆ । ಅರಿಯ ದಂತೆಯಾಭಿಚಾರಾ । ಧ್ವರವಗೈದನೇನೊ ಬಪ್ಪ । ಬರವ ನೋಡಯ್ಯ ॥ ೩ ॥

॥ ಕಂದ ॥

ಎಂದು ವಿಭೀಷಣ ಗದೆಕೊಂ । ಡಂದದಿ ಮರಳಿದನತ್ತಲು ಮತ್ತಾ ರವಿಜಂ ॥ ಬಂದಭಿನಮಿಸುತಕೌಸಲೆ । ನಂದನಗುಸಿರಿದತಾ ಮುಗಿವುತ ಕರಯುಗವಂ ॥ ೧ ॥

॥ ರಾಗ ಸುರುಟಿ ಏಕತಾಳ ॥

ಲಾಲಿಸು ರಾಜೇಂದ್ರ । ದಶರಥ । ಬಾಲಸುಗುಣಸಾಂದ್ರ ॥ ಕಾಲಾಂತಕ ಕೆಮನೀಯಸುವಿಕ್ರಮ । ಬಾಲಾರ್ಕಾಮಿತತೇಜಸುಧಾ ರ್ವಿಕ ॥ ೧ ॥ ಇಂದಿನೊಳಾಜಿಯಲಿ । ಜೈಸುವ । ಡಿಂದುಧರನೆ ಬರಲಿ ॥

ಹೊಂದದುಗಡ ಖಳರಾವಣಿಯೊಡನೆನು । ತೊಂದರುಹಿದಪದಕಮಲಾರಾಧಕ॥ ೨॥ ತೆರಳಿದಧುರಕತ್ತ। ನಿರ್ಮ್ಮಳ। ಗೊರೆಯಲುತಾನಿತ್ತ॥ ಮರಳಿದೆ। ನೋಡತಿದುರ್ಧರ ಶಕುನವ। ಹರಿನಮ್ಮೆಲ್ಲರ। ಪೊರೆಯೆನುತೆರಗಿದ॥ ೩॥

॥ ಭಾಮಿನಿ ॥

ಇರಿಸಿದನು ಬಳಿಕವನಿಪತಿ ಹ। ತ್ತಿರಸವೀರನಸುತಸುಷೇಣರ। ಧುರದ ಮೂಡಣಬಾಗಿಲಲಿ ಶತಬಲಿಗವಾಕ್ಷರನು॥ ಪರುಠವಿಸಿ ಪಡುವಲಿಗೆ ಪನಸನ। ಶರಭ ಮೈಂದದ್ವಿವಿಧರನು ನಿಲಿ। ಸಿರದೆ ನೀಲಾಂಗದರು ಸಹ ನಡೆತಂದರಾ ಹವಕೆ॥ ೧॥

॥ ರಾಗ ಶಂಕರಾಭರಣ ಮಟ್ಟೆತಾಳ ॥

ಇತ್ತಲನಿತರೊಳಗೆರಣಸಂ । ವರ್ತ ಶಿಖಿಯ ಹೊರಳಿಯಂತೆ । ಮತ್ತಗಜತುರಂಗರಥಿಕ। ಮೊತ್ತದೊಗ್ಗಿಲಿ॥ ವೃತ್ರವೈರಿಜಿತನುಬರೆಕಾ । ಣುತ್ತಲಿದಿರು ಹ್ಯಾದುಶರಣ । ಎತ್ತಪೋಪೆ ಫಡಎನುತ್ತ। ಮತ್ತೆ ಭರದಲಿ॥ ೧॥ ಕುಲಕುಠಾರ ಭಳಿರೆ ಬಂದು। ಸಿಲುಕಿದೆಯಲ ನಿಂದು ನಿನ್ನ। ತಲೆಯಕಾವ ದೈವ ವಾವ। ನೆಲೊ ಮದಾಂಧನೆ। ತೊಲಗು ಫಡಫಡೆನುತ ಸರಳ। ನಿಲದೆ ತುಡುಕಿದನು ಮಹಾಂತ। ಬಲ ವಿಭೀಷಣಾಂಕ ನದರ। ಕಲಕಿಗಮ್ಮನೆ॥ ೨॥ ದುರುಳ ಕೇಳು ಬಾಯ್ಗೆ ಬಂದ। ತೆರದಿ ಬಗುಳ್ದರೆಲವೊ ನಿನ್ನ। ಪರಿಯನರಿಯುದವನೆ ತಾನು। ಧಿರುರೆ ಮೆಚ್ಚಿದೆ॥ ಕರದಬಲುಹ ನೋಡೆನುತ್ತ। ಲೆರಗಿದಡೆ ಗದಾಗ್ರದಿಂದ। ಭರಕೆತಪ್ಪಿ ಮುಗುಳೆ ಜರೆದನರಿಯಲೇನಿದೆ ॥ ೩ ॥ ಶಿರವತರಿವೆನೆನಲು ದ್ರೋಹಿ। ಕಿರಿಯ ಜನಕನಾದೆ ಸತ್ವ। ದಿರವನೋಡೆನುತ್ತ ತನ್ನೊ। ಳರಿದು ನಿಮಿಷಕೆ॥ ಮರುತ ಬಾಣವೆಚ್ಚಡಾಗ । ತೆರಳಿಚಿತುಮೇಣಭ್ರಕತ್ತ । ತಿರುಗಿದನು ಶಕ್ರಾರಿಯಿತ್ತ। ಲರಿಸಮೂಹಕೆ॥ ೪॥

॥ ಕಂದ ॥

ಅರಿಭಟನಂಗವ ಕಾಣುತ । ತರಣಿಜನತಿಶಯ ಕೋಪದಿ ಕಿಡಿಯಿಡುತಾಗಳ್ ॥ ಭರದಿಂದಾನೆಯ ಶಿರಕಂ। ಹರಿತಾಲಂಘಿಪ ಪೊಲು ಧಿಂಕಿಟ್ಟವಗೆಂದಂ॥ ೧॥

॥ ರಾಗ ಘಂಟಾರವ— ಅಷ್ಟತಾಳ ॥

ಎಲ್ಲಿಗೈದುವೆ ನಿಲ್ಲೆಲೊ ಶಕ್ರಾರಿ॥ ಮಲ್ಲಸಾಹಸದಂದಗಳನೆ। ನ್ನಲ್ಲಿತೋರಿಸೊ ತೋರಿಸೊ ॥ ೧ ॥ ತೋರಲೇನುಂಟುಫಡ ಕೋತಿನಿಲು

ನಿನ್ನ ॥ ಭಾರಿನೆತ್ತರಹೀರಿಸುವೆರಣ । ಮಾರಿಯುರೊಳಿಂದೆಲವೆಲ ॥ ೨ ॥ ಸಾಕುಸಾಕೆಲೊ ಬಗುಳದಿರೆನುತಲಿ ॥ ಪಾಕಶಾಸನ ಮೆಚ್ಚುವೋಲು । ದ್ರೇಕಬಲಖಳಗೆರಗಿದ ॥ ೩ ॥

॥ ವಾರ್ಧಕ ॥

ನೊರಜುರುಬೆಗಮರಾದ್ರಿ ಜರಿವುದೇ ತರಣಿಜನ । ಕರಹತಿಗೆ ಯುಳುಕುವನೆ ಶಕ್ರಾರಿಗಣಿಸದದ । ಕುರುಳಿಚಿದನಿನಜನಂ ಬಲುಬಾಣ ಘಾತದಿಂದೇನೆಂಬೆ ಸಾಕ್ಷಣದೊಳು ॥ ಹರಿಮೊಮ್ಮನಿದಿರಾಗಲಡಗೆಡಹಿ ಮೇಣ್ ಬಂದ । ಹರಿಜನಗಳಜ ವೃಷಭರಂ ಜೈಸಿಮುಂದೆರಥ । ಹರಿಸಿದಂ ಹರಿಯೆಡೆಗೆ ಹರಿಸುತಂಕಂಡಾಗ ಹರಿವೈರಿಯುಂಖತಿಯೊಳು ॥ ೧ ॥

॥ ರಾಗ ಸೌರಾಷ್ಟ—ತ್ರಿವುಡೆತಾಳ ॥

ಬಾರೆಲವೊರಕ್ಕಸನಪುಂಸನೆ । ತೋರುನಿನ್ನಯವಿಕ್ರಮಾದ್ರಿಯ । ಹೀರ ಮರುತಕುಮಾರ ನೆನ್ನೊಳು । ಸಾರುಮತ್ತೆ ॥ ೧ ॥ ಇನಿಬರೊಳು ನೀಪ್ರೌಢನೆಂಬುದ । ನೆನೆಸಿಕೊಂಡಿಹೆನಾದರಿಂ ದಿನ । ದಿನದೊಳೆನ್ನನು ತಡೆದುಬಾಳ್ವೆಯ । ಹನುಮನೀನು ॥ ೨ ॥ ಆದಡಿದಕೋ ಎನುತ ಮುಷ್ಟಿ ಯೊ । ಳಾದುರಾಗ್ರಹಗೆರಗೆತಪ್ಪಿಸಿ । ಮೇದಿನಿಯೊಳಜಶರದಿ ಹನುಮನ । ಕಾದನಂದು ॥ ೩ ॥

॥ ಕಂದ ॥

ನಿಂತುಮಹೋಗ್ರದಿತಾ ಮುಂ । ದಂತರಿಸುತಬಹಶಕ್ರಾರಿಯ ನಡ ಹಾಯ್ದುಂ ॥ ಅಂತಕಹರನೋಲೂರ್ವಿಳೆ । ಕಾಂತಂ ಕೂರ್ಗಣೆಸುರಿ ಸುತ ತೊಲತೊಲಗೆಂದಂ ॥ ೧ ॥

॥ ರಾಗ ಭೈರವಿ—ಅಷ್ಟತಾಳ ॥

ಎಲೆ ಮೇಘನಾದಕೇಳು । ಉಳ್ಳಡೆಭುಜ । ಬಲವ ತೋರದೆ ಯೆನ್ನೊಳು ॥ ಚಲಿಸುವೆ ಮುಂದೆಲ್ಲಿ । ನಿಲ್ಲೆಂದು ತೆಗೆದೆಚ್ಚ । ಬಲುತರ ಶರಗಳನು ॥ ೧ ॥ ಅತಿರಥನಂಬುಗಳ । ಕತ್ತರಿಸುತ್ತ । ಲತಿಪರಾಕ್ರಮಿ ದುರುಳ॥ ಅತಿಕಾಯನನುಗೆದ್ದು । ನ್ನತಿಯನ್ನು ತೋರ್ದರೆ । ಹತಿಸದಿರ್ಪನೆ ಪೋಗೆಲಾ ॥ ೨ ॥ ಬಗುಳದಿರೆಲವೊಹೇಡಿ । ಮಾಯಕ ಮಂತ್ರಾ । ದಿಗ ಳೊಳು ನೀಪ್ರೌಢಿ ॥ ಬಗೆಯೆಲ್ಲಬಲ್ಲೆಪ । ನ್ನಗಪಾಶದೊಳುಗೆದ್ದ । ಬಗೆ ತೋರೆಂದೆಚ್ಚಡಾಗ ॥ ೩ ॥

॥ ಭಾಮಿನಿ ॥

ಬಿದ್ದೊಡಸೆಲಯ ರುದ್ರನುಗ್ರವ । ಕದ್ದನೆನೆ ಭುಗುಭುಗಿಸೆಕ್ರೋಧ ದೊ । ಳೆದ್ದು ಖಳಲಕ್ಷ್ಮಣನಮುಳುಗಿಸಿ ಬಾಣವಾರ್ಧಿಯಲಿ ॥ ಹೊದ್ದಿ ಸಲುಕಂಡೊಡನೆ ಖತಿತಳೆ । ದೊದ್ದು ಬಿಲುಝೇವಡೆದುರಘುಪತಿ । ಬದ್ಧ ಶರಜಾಲಗಳ ಕೆದರಿದಸಿಹ್ಮನಾದದಲಿ ॥ ೧ ॥

॥ ರಾಗ ಮಾರವಿ—ಏಕತಾಳ ॥

ಬಲ್ಲಿದನಾದೆಯ ರಕ್ಕಸಕುನ್ನಿ ನ । ಮ್ಮೆಲ್ಲರಮಾರ್ಬಲವ ॥ ಚಲ್ಲ ಬಡಿದುಮೇಣೆಲ್ಲಿಗೆ ಗಮನವೊ । ನಿಲ್ಲೆನೆ ಕೇಳ್ದಾಗ ॥ ೧ ॥ ಪೂತುರೆ ರಾಘವ ಘಾತಿಸಿದೀಬಲ । ದಾತರ ಬೆಂಬಲಕೆ । ತಾತವೆ ಕಳುಹವೆ ನಿನ್ನನು ಬಿಡುನಡೆ । ಸೀತೆಯ ಬರಿಬಯಕೆ ॥ ೨ ॥ ಮಘವಾರಿಯೆ ಬಲುಬಗುಳುವ ನಾಲಿಗೆ । ಸಿಗಿದು ಮೊದಲೆ ನಿನ್ನ ॥ ಮುಗಿಸಿ ನಿನ್ನಯ್ಯನ ಮೃಗಮದ ಗಂಧಿಯ । ತೆಗೆವೆನುನೋಡೆನ್ನ ॥ ೩ ॥ ಧಿರುರೆಪರಾಕ್ರಮನಹೆಯೆನು ತಂಬಿನ । ಸುರಿಮಳೆ ಸುರಿಯಲ್ಕೆ ॥ ತರಿದೆಚ್ಚನುರಘುವರಹುಂಕರಿಸುತ । ಧರಣಿಗಗನಮುಸುಕೆ ॥ ೪ ॥

॥ ಭಾಮಿನಿ ॥

ಖಚರಿಯರ ಹೂಮುಡಿಗೆ ಸುರಪನ । ಶಚಿಯುಮುಖಸಾರಸಕೆ ರುದ್ರನ । ಕಚದ ಗಂಗಾಂಬುಧಿಗೆಸರಸಿಜಭವನ ಗದ್ದುಗೆಗೆ ॥ ಪ್ರಚುರ ದಿಗ್ವನಿತಾಬ್ಜ ಕುಟ್ಮಳ । ಕುಚಗಳಿಗೆ ಮೊಗಚುವ ಶಿಳೀಮುಖ । ನಿಚಯ ವೆನಲಡರಿದವುರಾಮ ಶಿಳೀಮುಖಗಳವಗೆ ॥ ೧ ॥

॥ ರಾಗ ಭೈರವಿ—ತ್ರಿವುಡೆತಾಳ ॥

ತರಳ ಕೇಳೀನೆಂಬೆನಂದಿನ । ಧುರವನೆಯುಸಂರಂಭವನುಖಳ । ನೊರೆದತನ್ನೊಳುತಾನೆ ರಾಮನ ॥ ಧುರವಜೈಸಲಸಾಧ್ಯನಾನಿಂ । ತಿರಲು ಹರಿಯುದೆನುತ್ತಕುಂಭಿಣಿ । ಪರಮದೇವತೆಯಂಘ್ರಿನೆನೆವಜ । ಕರುಣಿಸಿದ ಶರತೆಗೆದು ಮೈಗೊ । ಟ್ಟಿರದೆಮಾಯುವ ಕಪಿಸುತೆಸೆದನ । ದೇನನೆಂಬೆ॥ ೧ ॥ ಎಲೆಲೆ ಕಪಿತಿವಿಕೊಲ್ಲುಕಡಿಯೆಂ । ದುಲಿದುಬಿದ್ದಬಲೌಘಸಹರಘು । ಕುಲಜನಿದಿರೊಳು ಸುಳಿಯೆಕಾಣು । ತ್ತಲಘುಮತಿ ಶಕ್ರಾರಿಸುಳಿಸಿದ । ನೆಲರಮಿಗೆ ಕಲ್ಮಳೆಯುಸಿಡಿಲನು । ಬಲುಭಟರತನ್ನಂತ ರಕ್ಕಸ । ಬಲವನ ಯುತಾಯುತ ಕಪಿಸಿಕ । ಗ್ಗೊಲೆಗೆತೊಡಗಿದನಜಮಹಾಸ್ತ್ರದಿ ॥ ಏನ ನೆಂಬೆ ॥ ೨ ॥ ತಾಗಿದನುಟಗರಾಗಿಕರ್ಬೊಗೆ । ಯಾಗಿಕವಿದನು ಹೊಯ್ದ

ನಾಹರಿ । ಯಾಗಿ ಹೊರಳಿದನದ್ರಿಶರಧಿಗ । ಳಾಗಿ ಸೆಣಸಿದಕಾಲಭೈರವ । ನಾಗಿ ಜಟ್ಟಿಗನಾಗಿ ವಿಷದುರಿ । ಯಾಗಿ ಬೆಚ್ಚಿಸಿಗೆಲಿದನನಿಬರ । ಮೇಗೆರಾಘವಲಕ್ಷ್ಮಣಾಂಕನ । ತಾಗಿ ಖಳದಿಗ್ವಿಜಯಿಯಾದನ । ದೇನನೆಂಬೆ ॥ ೩ ॥

॥ ಭಾಮಿನಿ ॥

ಬಳಿಕಶಕ್ರಾರಾತಿ ರಥದಿಂ । ದಿಳಿದುರಣ ಶ್ರೀಗೆರಗಿ ಶೋಣಿತ । ದೊಳು ಲಲಾಟಕೆ ತಿಲಕವಿರಿಸುತಹರುಷ ಪೂರದಲಿ ॥ ಹೊಳಲಿಗಭಿಮುಖನಾದನಾದಶ । ಗಳನುವಾರ್ತೆಯ ಕೇಳಿಬಲು ಹೆ । ಕ್ಕಳದತೋಷದೊಳಾತ್ಮಜನನಿದಿರ್ಗೊಂಡನುಚಿತದಲಿ ॥ ೧ ॥

॥ ರಾಗ ಕಾಂಬೋಧಿ— ಝಂಪೆತಾಳ ॥

ಖಗವಂಶಜರುಕೇಳಿ ಮಗನ ಶಿರಮುಂಡಾಡಿ । ನಗುತ ದಶಕಂಠ ಮನ್ನಿಸುತ ॥ ಮಗನೆ ನೀಕೊಟ್ಟಭಾಷೆಗೆ ಹಾನಿಯಿಲ್ಲದತಿ । ಬಿಗಿದಛಲ ನಡೆಸಿದೆಯಜಾತ ॥ ೧ ॥ ನಿನ್ನಂಥ ವಿಕ್ರಮಸಂಪನ್ನರೇಳ್ಭುವನದೊಳ । ಗೆಣ್ಣಿಸಿದರುಂಟೆ ಮರಿಯಾನೆ ॥ ನಿನ್ನಂದ ದಾಪ್ತಸುತರಿನ್ನಾವರೆನಗೆನುತ । ಮನ್ನಿಸುತಮಿಗೆ ಕಳುಹಿತಾನೆ ॥ ೨ ॥

॥ ವಾರ್ಧಕ ॥

ದರಹಸಿತಮುಖದಿಂದ ಧುರಕಣವಭರದಿಂದ । ಪರಿವೇಷ್ಠಿಸಲು ಪೊರಟವರ ಪುಷ್ಪಕದೊಳ ಧಟ । ಬರುತಕಡಿ ಖಂಡದಿಂ ರುಂಡದಿಂ ಮುಂಡದಿಂ ದುರುಮುರಿಪನೆತ್ತರಿಂದ ॥ ಪರಿಪರಿಯೊಳಾಡುತ್ತ ಮರುಳ್ಗಳಿರೆ ಪಾಡುತ್ತ । ತರಳನಂ ಪೊಗಳುತ್ತ ದುರುಳಬರೆಮುಂದತ್ತ । ಲುರಿಕೆಂಡ ಕಾರುತ್ತ ನೆರೆಸುದರ್ಶನವತ್ತಮೊರೆವಟ್ಟಿಖಳನುಬಂದ ॥ ೧ ॥

॥ ಭಾಮಿನಿ ॥

ತೆರಳಿಖಳ ನಿಜಪುರಕೆ ಸಂತಸ । ಶರಧಿಯೊಳ ಗೋಲಾಡುತಿರ್ದನು । ತರುಣಕೇಳನಿತರೊಳಗಿತ್ತಲು ವರವಿಭೀಷಣನು ॥ ಮರುತಪಾಶವ ಹರಿದು ಶ್ರೀನರ । ಹರಿಯ ಪರಿಭವನೆಸೆದು ಸಂಗರ । ಧರಣಿಯಲಿ ನಡೆತಂದು ಹನುಮನಕಂಡು ನುಡಿಸಿದನು ॥ ೧ ॥

॥ ರಾಗ ಕೇತಾರಗೌಳ— ಅಷ್ಟತಾಳ ॥

ಏನಯ್ಯರಿಪು ಮದದಾನೆಯಂಕುಶಪವ । ಮಾನಸಂಭವನಿನಗೆ ॥ ಈನಕ್ತಂಚರನೆಚ್ಚ । ಬಾಣವೆಗ್ಗಳವೆ ಪೇಳ್ । ನೀನೊಂದನಿರವೆನಗೆ ॥ ೧ ॥

ನೆನೆಹರಿಹರಸುರೇಶ್ವರರಿತ್ತವರಗಳ । ದನುಜನಜಾಸ್ತ್ರವನು ॥ ಹನನವಮಾಡೆನ್ನಯುಮರಿಯಾನೆ ಕಂಡೆಯು । ಮನುವಂಶ ತಿಲಕರನ್ನು ॥ ೨ ॥ ಪುಡುಕಬೇಕಯ್ಯನಾವ್ ತಡೆಯದೆನ್ನಯುಮನ । ನಡುಕ ಹೆಚ್ಚಿತುಹನುಮ ॥ ಮೃಡಪರಾಕ್ರಮಿಯೆನಲೊಡನೆದ್ದು ರಿಪುಶರ। ಪುಡಿಗೈದಸಮರಭೀಮ ॥ ೩ ॥

॥ ಕಂದ ॥

ಮತ್ತವರೀರ್ವರು ಧುರದೊಳು.। ಸತ್ತವರಂಕಂಡತಿ ಮರುಗುತ ಬೀಳುತ್ತಂ ॥ ತತ್ತರಗೊಳ್ಳುತಲೇಳುತ । ನೆತ್ತರೊಳ್ ಬಳಲುತ ಬಂದಜ ಜನಕಾಣುತ್ತಂ ॥ ೧ ॥

॥ ರಾಗ ಸಾಂಗತ್ಯ—ರೂಪಕತಾಳ ॥

ವರವಿಭೀಷಣ ಹರಿಸ್ಮರಣೆಮಾಡುತ್ತ ನಿಂ। ದಿರಲರಿತನಿತರೊಳಾತ॥ ತರಣಿವಂಶಲಲಾಮ ನಿರತಸೇವಕಬಂದ್ಯೆ। ಮರುತಜಬಾರೆಂದಡೀತ ॥ ೧ ॥ ಜೀಯಕೇಳಾನುವಿಭೀಷಣನಹೆನಲ್ಲ । ವಾಯುಸಂಭವನೆನೆಕೇಳ್ದು ॥ ನೋಯದೈತಂದೆಯೂ ಮಗನೆಕಂಡೆಯ ರಘುರಾಯ ಸೇವಕನ ನೀನಿಂದು॥ ೨ ॥ ಮಗನೆ ಕೇಳುವನೊಬ್ಬನಿರ್ದಡೆಮ್ಮಯುಸೈನ್ಯ । ಖಗವಂಶೋದ್ಭವರು ಮುಂತಾದ ॥ ವಿಗಡವಿಕ್ರಮರಸುವಿಹುದೆಂದು ತಿಳಿಯೆನೆ । ಮಿಗೆಮಾತ ಶರಣನಿಂತೆಂದ ॥ ೩ ॥ ಪುಸಿಯಲ್ಲನೋಡಿ ಕೈಮುಗಿದುನಿಂದಿಹ ಬೇಗ। ಬೆಸಸಿರಿಹನುಮಂತನಿಂದ ॥ ಬಿಸಜಾಕ್ಷಾದಿಗಳಭಿವೃದ್ಧಿಯನೆನೆ ನೋಡಿ। ಶ್ವಸನಸಂಭವನೊಡನೆಂದ ॥ ೪ ॥ ಅಣುಗನೀನುಳಿದೆ ಭಾಗ್ಯದಕಣೆರಾಮಗಿ। ನ್ನಣುಮಾತ್ರ ಬಂದಸೋಲದೊಳು ॥ ಎಣಿಸಬೇಡೆನ್ನನೀ ಕ್ಷಣಕ್ಕೊದು ಮಾದಿನ । ಮಣಿವಂಶಜರತೋರಿರೆನಲು ॥ ೫ ॥

॥ ಕಂದ ॥

ಹನುಮವಿಭೀಷಣರಿಬ್ಬರು । ವನಜೋದ್ಭವನ ಕುಮಾರನ ನೆರೆ ಪೊಗಳುತ್ತಾಗಳ್ ॥ ಇನವಂಶಾಂಬುಧಿಚಂದ್ರಮ। ನನುವಿಂ ಸೇರಿದರುನ್ನತ ಖೇದದೊಳಾಗಳ್ ॥ ೧ ॥

॥ ಭಾಮಿನಿ ॥

ದೇವದೇವನ ಸಕಲದೇವರ। ದೇವ ಚಕ್ರೇಶ್ವರನನಾನಾ। ಜೀವನಾಟಕ ಸೂತ್ರಧಾರ ಚರಾಚರಾತ್ಮಕನ ॥ ಪಾವಕಾನಿಲ ಪೃಥ್ವಿಪುಷ್ಕರ । ಜೀವನಾಖಿಲತತ್ವಮಯ ಮಾ। ಯಾವಿಸೋದವಕಂಡು ಮರುಗಿದರೇನ ಬಣ್ಣಿಪೆನಾ ॥ ೧ ॥

॥ ರಾಗ ನೀಲಾಂಬರಿ—ರೂಪಕತಾಳ ॥

ಹಾರಘುರಾಜ ಶಿರೋಮಣಿ । ವೈರಿತಮೋದ್ಧತ ದಿನಮಣಿ । ಯಾರೊಡನೀಪರಿ ಮುನಿಸುವಿ । ಚಾರಿಸುನಮ್ಮರಸು ॥ ಪಲ್ಲವಿ ॥ ತಾಟಕಿ ಮುಖ್ಯರ ಮೊದಲಲಿ । ನಾಟಿದೆ ಎತ್ತಿದೆಯಾಶಿಶಿ । ಜೂಟನಧನುವನುಪಥ ದಲಿ । ದಾಟುತ ಭಾರ್ಗವನ ॥ ಓಟವಕೆಡಿಸಿದೆ ಮಿಗೆಖರ । ನಾಟವ ಜೈಸಿದೆ ಗಡಕಪಿ । ರಾಟನ ಮುರಿದನಿಗೇನು ನಿ । ಶಾಟನ ಶರಕಠಿಣ ॥ ೧ ॥ ನರನಾಟಕದ ವಿನೋದದ । ಪರಿಯಿನಿತೇತಕೆಲಕ್ಷ್ಮಿಮಿ । ಯುರಸಜಗನ್ಮ ಯಪರತರ । ಪರಮಾನಂದಕರ ॥ ಪರಿಕಿಸಲಾದಿ ಮಧ್ಯಾಂತರ । ವಿರದವನಹೆ ನೀನಮಗೀ । ತೆರಕ್ಕೈತೊರೆದರೆ ಬೇರಾರ್ । ಪೊರೆವರು ನುಡಿ ಮಧುರ ॥ ೨ ॥

॥ ಭಾಮಿನಿ ॥

ಕೊಟ್ಟ ಭಾಷೆಯಮರೆದು ತನ್ನನು । ಬಿಟ್ಟುವೈಕುಂಠಕ್ಕೆ ಪೋಪರೆ । ಹುಟ್ಟು ಒಂದೇ ನಿನಗೆ ಸೀತಾಕಾಂತನುಡಿಯೆಂದ ॥ ಜಿಟ್ಟರಿನ್ನಾನಾರ ಸೇರುವೆ । ನಟ್ಟಡವಿಯಲಿಹೊಲಬನಳಿದಗೆ । ಬಟ್ಟೆಯಾವುದೆನುತ್ತ ಶರಣಾ ಭರಣನಡೆಗೆಡೆದ ॥ ೧ ॥

॥ ಕಂದ ॥

ಇಂತು ಪ್ರಲಾಪಿಸಿಬಳಿಕ ವ । ರುಂ ತಡೆಯದೆ ಧೊಪ್ಪನೆಕೆಡೆದಿರ ದೇಳುತ್ತಂ ॥ ನಿಂತಿಹಹನುಮನ ಕಾಣುತ । ಮುಂತೆವಿರಿಂಚಿಕುಮಾರಕ ತಾನೆಂದನಣಂ ॥ ೧ ॥

॥ ರಾಗ ನೀಲಾಂಬರಿ—ತ್ರಿವುಡೆತಾಳ ॥

ಹರಿಕುಲಾಂಬುಧಿಪೂರ್ಣ ಶುಭ್ರಾಂಶು । ಶೌರ್ಯೋ । ದ್ಧರ ಸಾಧು ಗುಣಮಣಿ ಲಾಲಿಸು ॥ ತರಣಿಕುಲೇಂದ್ರರ ಪರಿಭವ । ವಿದ । ಸೆರೆಕಂಡೆ ಯಾವಾತಸಂಭವ ॥ ೧ ॥ ಅಂತರಂಗವನಾರೊಡನೆ ಪೇಳ್ವೆ । ವಾರ್ಧಿ । ಯಂತರಿಸಿದಕೇನಾಯ್ತೈ ಬಾಳ್ವೆ ॥ ಅಂತಕಾಂತಕ ನಿಲ್ಲದಿಹಪೀಠ । ಮೆರೆ । ವಂತಾಯಿತಲ್ಲಿಂದು ನಮ್ಮಾಟ ॥ ೨ ॥ ಅದರಿಂದ ನಿನ್ನೊಡನೀ ಗೊಂದ । ಪೇಳ್ವೆ । ನಿದರಂತೆಮ್ಮಯಬಲವನುಹಿಂದಾ ॥ ಮುದಮುಖ ಭುಜಗಾಸ್ತ್ರದೊಳುಗೆದ್ದ । ಡಾಗ । ಚಮುರಸುಷೇಣಪೇಳಿದಮುದ್ದ ॥ ೩ ॥

॥ ವಾರ್ಧಕ ॥

ಮರುತಭವಕೇಳು ಸಂಧ್ಯಾಕರಣಿಮೊದಲಾದ । ಮೆರೆವನಾಲ್ಕೌಷಧಿ ಗಳಿಹುದುಚಂದ್ರದ್ರೋಣ । ಗಿರಿಯೊಳಲ್ಲಿಗೆ ದಾರಿಯರಿವೈಪುರಾಂತಕನ

ಗಿರಿಯಿಂದೀಶಾನ್ಯಮಾಗಿ ॥ ತೆರಳುಪಥದೊಳಗೇಳು ಶರಧಿ ದ್ವೀಪಗಳೇಳು। ತ್ತರಿಸೆತದ್ಗಿರಿ ತೋರ್ಪುದ್ಯೆಯುದಯದೊಳಗೆ ನೀ । ಬರಬೇಕುಗಳಿಗೆ ಯೇಳಲ್ಲದಿಲ್ಲೆಲೆಮಗನೆ ಮರಿಯಾನೆಯೆಂದಡೆರಗಿ ॥ ೧ ॥

॥ ರಾಗ ಮಾರವಿ—ಏಕತಾಳ ॥

ನುಡಿದನು ಮುಖ್ಯಪ್ರಾಣನುಕೇಳ್ಳೆ । ಜಡಜಜನಂದನನೆ ॥ ನುಡಿಗಳನೆಲ್ಲವ ನಡೆಸುವೆ ನಾನೆ । ವ್ಮೊಡೆಯುನ ಪದದಾಣೆ ॥ ೧ ॥ ತರಹೇಳಿದರೆ ಕೃತಾಂತನ ಶಕ್ರನ । ಸರಸಿಜಸಂಭವನ ॥ ಪುರಸಂಹಾರನ ಸೂರ್ಯನ ಶೇಷನ । ತರುವೆನಿದೇನುಘನ ॥ ೨ ॥ ತಡೆಯೆಚತುರ್ದಶಭುವನವತಿಕ್ರಮಿವೆ। ಗಡಣಿಸೆನಣುವಿಂಗೆ ॥ ಕಡುಹನಿರೀಕ್ಷಿಸುತಪ್ಪಿದೆನಾದರೆ । ನುಡಿದಪೆನಾ ನಿನಗೆ ॥ ೩ ॥

॥ ಭಾಮಿನಿ ॥

ಕೇಳುಜಾಂಬವ ಭಾಷೆಯನು ಈ । ರೇಳು ಸಾಗರವಿರಲಿಮತ್ತೀ । ರೇಳು ದ್ವೀಪಗಳಿರಲಿ ದಾಟುವೆನವನು ಬಗೆಗೊಳದೆ ॥ ಕೀಳುವೆನು ಪರಮೌಷಧವ ತಹೆ । ನೇಳುಗಳಿಗೆಗೆ ಮುನ್ನತರದಿರೆ । ಬೀಳುವೆನುಶಿಖಿಕುಂಡ ಕೆಂದುದ್ಯೋಗಪರನಾದ ॥ ೧ ॥

॥ ವಾರ್ಧಕ ॥

ಗುರುಗಣಪಸಿರಿಶಕ್ರಹರದುರ್ಗೆಗುಹಧರಣಿ । ಯರಿಗೆರಗಿ ಮಾತೃಪಿತ ಶ್ರೀರಾಮಜಾಂಬವಾ । ದ್ಯರನುತಿಸಿ ಹಾರಿದಂ ಹರಿಗರುಡರಂ ಮಿಕ್ಕಿಗಮನದೊಳು ಹನುಮಂತನು ॥ ಭರಕೆ ಬ್ರಹ್ಮಾಂಡ ಘಟವಲ್ಲಾಡಿತಾಗ ದಶ । ಶಿರನರಿದುಖಳಕಾಲನೇಮಿಯಂ ಬರಿಸುತ್ತ । ಧುರದ ವೃತ್ತಾಂತಮಂ ಪೇಳಿ ಮಗುಳಾತನೊಡನರುಹಿದಂ ಯೊತೆರದೊಳು ॥ ೧ ॥

॥ ರಾಗ ತೋಡಿ— ಅಷ್ಟತಾಳ ॥

ಕೇಳುಕಾಲನೇಮಿಧುರದಿ । ಕಾಳುಗೆಡದ ಭಟರಿಗಿರದಿಂ । ದೇಳಿಸಬೇಕೆಂಬ ಚಿತ್ತದಿ ॥ ಗಾಳಿಯಾತ್ಮಜಾತದ್ರೋಣ । ಶೈಲಕಾಗಿ ಪೋಪನದಕೊ । ಕೀಳಿತಾರದಿರಮಹೌಷಧಿ ॥ ೧ ॥ ಪೋಗಿನೀನಾಗಿರಿಯ ಮೂಲ । ಕಾಗಿ ಬೇಗದಿಂದ ನಿನ್ನೊ । ಳಾಗುವಪ್ರಯತ್ನಸಾಧಿಸಿ ॥ ಹಾಗುಹೀಗು ಕಪಿಯಕಾರ್ಯ । ವಾಗಗೊಡಲುಬೇಡವೆನಗಿ । ದೀಗನಿನ್ನುಪಕಾರಸಾಹಸಿ ॥ ೨ ॥ ಈಸುಕಜ್ಜಕಾಗಿಯೆನ್ನ । ನೀಸುಘನತೆ ಮಾಳ್ಪುದೇತ । ಕಾ

ಸುರೇಂದ್ರ ನಿನ್ನಚಿತ್ತದ ॥ ಆಸರವನುತೀರಿಸುವೆ ಕೇ । ಳಾಸವಿೂರಸು ತನತಡೆದು । ಬಾಸೆಬೇರೇಕೆಂದು ಎರಗಿದ ॥ ೩ ॥

॥ ವಾರ್ಧಕ ॥

ಜಡಜಸಖಕುಲಜಾತಕೇಳ್ ಕಾಲನೇಮಿಖಳ । ನಡೆದುಂ ಮನೋವೇಗದಿಂದಾಮಹೀಧರದ । ಬುಡದಿನಿರ್ಮಿಸಿದನ್ಯೈನಂದನವಕೈತವದಿ ಖಗ ಮೃಗವಮೇಣ್ಗೈದನು ॥ ಜಡಜಕ್ಕೈರವಕೋಕ ಚೂತಮಾದಳಬದರಿ । ವಿಡಿದತಿಯತರುಗುಲ್ಮಸುಮಗಳಂ ರಚಿಸುತಲೆ । ಜಡೆತಲೆ ವಿಭೂತಿಜಪಸರ ವಾಂತು ಸಾಕ್ಷಾತು ಋಷಿಯಾಗಿ ತಾನಿರ್ದನು ॥ ೧ ॥

॥ ಕಂದ ॥

ಆಗ ಮರುತ್ಸುತನನ್ನೆಗ । ಮಾಗಸದೊಳುಬರುತಲಿಕಂಡ್ವನಮಂ ॥ ಸಾಗಿಮಕೌಳಿಕಮರಿಯದೆ । ಬೇಗದೊಳೆರಕದಿ ಮಣಿದೆಂದನು ಮುನಿ ಪತಿಗಂ ॥ ೧ ॥

॥ ರಾಗ ಸಾಂಗತ್ಯ—ರೂಪಕತಾಳ ॥

ಪರಮಸಂಯಮಿನಿನ್ನ ಚರಣಸೋಡಿದರಿಂದ । ನೆರೆಧನ್ಯನಾದೆನಾ ನಿಂದು ॥ ಇರದತಿದೂರದಿಂ ಬರುತಲಿಬಳಲಿದೆ । ನರಿದೊಂದುಕೊಳ ತೋರುನಿಂದು ॥ ೧ ॥

॥ ರಾಗ ಕೇತಾರಗೌಳ—ಅಷ್ಟತಾಳ ॥

ಎನೆಮೊಗವೆತ್ತಿಕೌಳಿಕ ಮುನಿನುಡಿದಕೇಳ್ । ವನಚರೋತ್ತಮನೆ ನಿನ್ನ ॥ ಮನದಿಷ್ಟವೀವೆನೀನೆಲ್ಲಿಂದ ಬಂದೇನು । ಘನಕಾರ್ಯವೆಲ್ಲಿ ಜಾಣ ॥ ೧ ॥

॥ ರಾಗ ಸಾಂಗತ್ಯ—ರೂಪಕತಾಳ ॥

ಪರಮ ಮುನೀಂದ್ರ ಕೇಳ್ ತರಣಿವಂಶಜ ರಾಮ । ದುರುಳ ರೊಳಿಂದಿನಾಹವದಿ । ನೆರೆ ಮೂರ್ಛಿಸಿದರಿಂದ ವರಸಂಜೀವನಿಗಾಗಿ । ಮರುತಜನಾ ಬಂದೆಭರದಿ ॥ ೧ ॥

॥ ರಾಗ ಕೇತಾರಗೌಳ—ಅಷ್ಟತಾಳ ॥

ಲೇಸುಲೇಸಲೆವೀರನೀಪುರ ಹೊರಟಿಂದಿ । ಗೇಸುದಿವಸವಾಯಿತು । ಆಸಮರದೊಳಳಿದವರು ಜೀವಿಸಲುಂಟೆ । ನೀಸುಡುಬಯಲಭ್ರಾಂತು ॥ ೧ ॥

॥ ರಾಗ ಸಾಂಗತ್ಯ—ರೂಪಕತಾಳ ॥

ಅವಧರಿಸಲೆಮುನಿ ದಿವಸವೆಷ್ಟೇಕೆ ಜಾಂ। ಬವರನುಳಿದು ಘಟೀಗರ್ಧ ॥ ಸವೆದುದೈತಡವ್ಯಾತು ತವೆತೋರು ಸರಸಿಯ। ಜವದೊಳಿನಲು ಬೆರಗಾದ ॥ ೧ ॥

॥ ವಾರ್ಧಕ ॥

ತತ್ತಬಲವಿಲ್ಲದಡೆ ವೈರಿಗಳ ಜೈಸುವಡೆ। ಮತ್ತೆ ಬಲಯುತರ ಬೆರೆದೊತ್ತಬೇಕಹಿತರೆಂ। ದುತ್ತಮರ ವಚನೀಯ ಮುಂಟಲಾವುದರಿಂದಲೀ ಸರಸಿಯಂ ಪೊಗಿಸಲು ॥ ಸತ್ತಲ್ಲದಿರನಿವಂನೆಗಳಿಂದಲೆನುತ ಖಳ। ಮತ್ತವನ ಕರೆತಂದು ವಿಷಸರೋವರಕಿಳಿಸೆ। ಚಿತ್ತದಾನಂದದಿಂ ಕಾಲ್ಮೊಗವ ತೊಳೆದಿರದೆ ನೀರ್ಗುಡಿಯಲನುವಾದನು ॥ ೧ ॥

॥ ಭಾಮಿನಿ ॥

ಬೇಡ ಕುಡಿಯದಿರನಿಲಜನೆ ವಿಷ । ಕೂಡಿದೀಜಲವಿದರೊಳಿಪ್ಪುದು । ಕೇಡು ಬಯಸಲು ಮೊಸಳೆಯೆಂದೆನಲಾಗಲಶರೀರ ॥ ಗಾಢ ಬಳಲಿಕೆಯಿಂದಲದಬಗೆ । ಗೂಡದಾಕೊಳಕಿಳಿದು ಸೇವಿಸೆ । ನೋಡಿ ನುಂಗಿತು ಮಕರಿವಾತೋದ್ಭವನಸಶರೀರ ॥ ೧ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಆಗ ಖಳನಿದು ಸಮಯವೆನುತಲಿ । ಬೇಗಕಿತ್ತೊಂದದ್ರಿಯನು ಕೊಳ। ಕಾಗಿ ಮುಚ್ಚಿದನೆಲರುಸಹತುಸ। ಹೋಗದಂತೆ ॥ ೧ ॥ ಇತ್ತಲಾಪವ ಮಾನಸಂಭವ। ನೊತ್ತಿ ಮಕರಿಯಸುತ್ತಿ ಬಾಲದಿ। ತತ್ತಳಕೆಮಿಗೆ ಬಂದ ಶಿಖರವ । ಪೊತ್ತುಕರದಿ ॥ ೨ ॥ ಅನಿತರೊಳಗಾನಕ್ರ ರೂಪಕ। ತನುವಕಳಚುತ ನಿರ್ಜರಾಂಗನೆ। ಯನಿಲಜನಪದಕೆರಗಿ ಪೇಳಿದ। ಳನುನಯದೊಳು ॥ ೩ ॥

॥ ರಾಗ ಸಾಂಗತ್ಯ—ಮಟ್ಟೆತಾಳ ॥

ಜಯನಮೋಕೃಪಾಲವಾಲನೆ । ಆಂಜನೇಯ। ಭಯನಿವಾರರಿಪು ಕುಠಾರನೆ ॥ ಪ್ರಿಯನ ಶಾಪದಿಂದ ನಿನ್ನನೆ। ಕಾದಿರ್ಪೆಯುಗ । ತ್ರಯದೊಳಿಂದು ದೊರೆದೆ ಜೀಯನೆ ॥ ೧ ॥ ಪತಿತಳಾದೆ ಮಕರಿ ಜನ್ಮದಿ। ನಾನಿಂದು ಪೋಪೆ। ಗತಿಗೆ ನೋಡು ಮೆರೆವ ವಿಪಿನದಿ ॥ ಯತಿಪನಂತೆ ಕುಳಿತುತೋಷದಿ। ಇರುವನವನೆ। ದಿತಿಜಕಾಲನೇಮಿಕೃತಕದಿ ॥ ೨ ॥

॥ ಕಂದ ॥

ತಕ್ಕುದನೆಸಗವಗೆನುತದಿ । ವಕ್ಕವಳ್ಳೆದಿದಡಿತ್ತಲು ಮರುತಜನಾ ಗಳ್ ॥ ಮುಕ್ಕಣ್ಣನ ಪೋಲ್‌ಬರೆ ಕಂ । ದಕ್ಕಜದಿಂ ತಾಪಸನಾಗಿರ್ದವ ನೆಂದಂ ॥ ೧ ॥

॥ ರಾಗ ಶಂಕರಾಭರಣ—ಮಟ್ಟೆತಾಳ ॥

ಮರುತಜಾತಸಹಸಿನೀನೇ । ನರಿಯದವನೆ ಗುರುದಕ್ಷಿಣೆಯ । ತೆರುವೆಯಾ ಮಂತ್ರೋಪದೇಶ । ಒರೆವೆಕೇಳಯ್ಯಾ ॥ ೧ ॥ ತೆರುವೆನಿನಗೆ ಗುರುದಕ್ಷಿಣೆಯ । ನಿರವೆ ಮೊದಲು ಮತ್ತೆ ಮಂತ್ರ । ಒರೆಯುಬಹುದು ಕುನ್ನಿಕೇಳೆಂ । ದೆರಗಲದ್ರಿಯ ॥ ೨ ॥ ತಡೆದುದನುಜ ನಿಜವ ತಾಳಿ । ಘನ ಸಮರ್ಥನಹೆಯೊಕೋತಿ । ಕೆಡಹಿನಿನ್ನ ಭೂತತತಿಗೆ । ಕೊಡುವೆನೆನ್ನುತ ॥ ೩ ॥ ದಡಿಗನಿಟ್ಟಹತಿಯ ತಡೆದು ನುಡಿದನೆಲೆ ಮದಾಂಧ ನೋಡು । ಕಡುಹನೆಂದು ಮುಷ್ಟಿಯಿಂದ । ಝುಡಿಯೆಗಜರುತ ॥ ೪ ॥

॥ ವಾರ್ಧಕ ॥

ಮರುತಜನ ಕರಹತಿಗೆಯುಳಿದರಾರ್ ಮುನ್ನಖಳ । ಸರಿದನಮರಾ ವತಿಗೆ ಮೇಣಂಜನೇಯಕಂ । ಡುರಿನಗೋತ್ತಮವಡರಿದಿವ್ಯೌಷಧಿಗಳ ತಾಕಾಣದತಿ ಬೆರಗಾಗುತ ॥ ಉರಿಮಸಗಿಯೋಚಿಸಿದ ಜಾಂಬವನ ಕಣ್ಣ ಮುಂ । ದಿರಿಸುವೆನು ಗಿರಿಯನಿದನವ್ವನರಸಿಕೊಳಲೆಂದು । ನೆರೆ ವಾಲ ಧಿಯುಸುತ್ತಿ ಕಿತ್ತದ್ರಿಯಂ ಪೊತ್ತು ತಿರುಗಿದಂಜವದೊಳಿತ್ತ ॥ ೧ ॥

॥ ಶರಷಟ್ಪದಿ ॥

ಮಿಗಧರಕಾಂತದಿ । ಮಿಗೆವಾತಜನಾ । ಮಿಗಧರಗೆಸಗಿದ ಮಣಿ ರಥವೋ ॥ ಬಗೆಯೇನೆನೆ ಹರಿ । ಮಗನುನ್ನತದಾ । ನಗ ಪೊತ್ತೈದಿದನೇನ್ ಬಲುವೋ ॥ ೧ ॥

॥ ರಾಗ ಸಾಂಗತ್ಯ—ರೂಪಕತಾಳ ॥

ಇತ್ತಲನ್ನೆಗಹರಿ ಶರಣ ಜಾಂಬವಗೆಂದ । ಹೊತ್ತೆಷ್ಟಾಯಿತು ನಮ್ಮ ಹನುಮ ॥ ಮತ್ತೇಳುಶರಧಿ ದಾಟುವನೆ ತದ್ಗಿರಿಯನ್ನು । ಹತ್ತುವನೇನೈ ನಿಸ್ಸೀಮ ॥ ೧ ॥ ತರುವನೆ ಮದ್ದನೆಂದರೆ ಜಾಂಬವಂತನು । ಒರೆದನು ಕೇಳ್ ವಿಭೀಷಣನೆ ॥ ಶರಧಿಬತ್ತಲಿಸುರ ಗಿರಿಜರಿಯಲಿಧರೆ । ಗುರುಳ ಲಾದಿತ್ಯನು ತಾನೆ ॥ ೨ ॥ ತಂದಲ್ಲದಿರಮದ್ದನದು ತಿಳಿಯದೆ ಹೋದೆ । ನಿಂದಪನಲ್ಲ ಬಲ್ಪಿನೊಳು ॥ ಸಾಂದ್ರನಗೋತ್ತಮವನೆ ತಪನೆಸುತ ವ ।

ರಂದು ಮಾತಾಡುತ್ತಲಿರಲು ॥ ೩ ॥ ಆ ಹಂಸೋದಯದಂತೆ ಹೊಳೆವ ತದ್ಗಿರಿ ಸಹಿ । ತಾಹರೀಶ್ವರಬರೆ ಕಂಡು॥ ಹೋಹೋ ಮಾತೇಕೆ ಬಂದನು ನೋಡಿ ಹನುಮನೆಂ । ದಾಹರಿಶರಣತಾನಂದು ॥ ೪ ॥

॥ ವಾರ್ಧಕ ॥

ಒರೆಯುಲಬ್ಜಜಜಾತ ದರಹಸಿತ ಮುಖದಿಂದ । ಮರುತ ಜನ ಕೊಂಡಾಡಿ ಧುರವಸೆಯುಹೊಗದಂತೆ । ಶರಣನಂ ಕಳುಹಿ ನಿಲಿಸುತ ಶರಧಿ ಸೇತುವಿನ ದಕ್ಷಿಣದಿಮಿಗೆಗಮಿಸುತ ॥ ಬರಸೆಳೆದು ಬಿಗಿಯಪ್ಪಿ ಬಳಲಿದೈ ಹನುಮ ಎಂ। ದಿರದೆ ತದ್ಗಿರಿಯಡರಿಯೌಷಧಿಯಕೊಂಡು ನಿಜ। ಕರದೊಳರಚುತ ಜಗನ್ಮಯನನಾಸಾಗ್ರದೊಳು ಹಿಂಡಿದಂಸಲೆ ಪೊಗಳುತ ॥ ೧ ॥

॥ ಭಾಮಿನಿ ॥

ಸ್ಥಾಣುಸಖನಲಿದೆದ್ದನೈಕಡು । ಜಾಣನಲ್ಲಾ ಜಾಂಬವನು ವರ । ಕ್ಷೋಣಿಜೆಯ ಮೈದುನನನೆತ್ತಿದನಮಲವೈದ್ಯದೊಳು ॥ ಕಾಣುತಜಭವ ರೊಸಗೆ ಪೂಮಳೆ। ಕ್ಷೋಣಿಮಂಡಲ ತುಂಬಿತಾಗಳು । ಮೇಣು ತಾರಾ ಪಿತನ ಘ್ರಾಣದೊಳೆರೆಯೆ ಮದ್ದುಗಳು ॥ ೧ ॥

॥ ರಾಗ ಮಾರವಿ—ಏಕತಾಳ ॥

ಆಗ ಸುಷುಪ್ತಿಯ । ನೀಗುತಲೇಳ್ವ ವೊ । ಲಾಗಸುಷೇಣಕನು ॥ ಬೇಗನೆ ನಿಂದಿರ । ಲಾಗಜಸುತನನು । ವಾಗಿದನರುಹಿದನು ॥ ೧ ॥ ಬಾರೆನ್ನಯಗುಣ । ವಾರಿಧಿ ಮದ್ದಿದ । ವೀರನೀಕೈಗೊಂಡು ॥ ಈರಸೆಗೊರಗಿದ । ಸೂರಿಯಜಾದ್ಯರ । ಭೋರನೆನೆಗಹೆಂದು ॥ ೨ ॥ ಒರೆದಡೆಯುವನಾ । ಪರಿವಿರಚಿಸಲೆ । ದ್ದರು ಮಡಿದೆಲ್ಲವರು ॥ ಶರಧಿಯ ಮೋಲ । ಬ್ಬರಿಸಲುಸುಮಮಳೆ । ಸುರಿದರು ಅನಿಮಿಷರು ॥ ೩ ॥

॥ ಕಂದ ॥

ಅನಿತರೊಳಾಗಿರಿಯಿಂದಂ । ಘನಮೂಲಿಕೆಯ ಸುಷೇಣನು ಸಂವರಿಸಲ್ಕಂ ॥ ಹನುಮನ ಹಸ್ತದೊಳಗಮೇ । ಣನುವಿಂಮಾಯಕವಾಯ್ತ್ಮೆಯಚ್ಚರಿಯೊಳಗಂ ॥ ೧ ॥

॥ ಭಾಮಿನಿ ॥

ಇದುಕಣಾನರನಾಟಕ ದರೂ। ಪದವಿನೋದವಲಾಜಗನ್ಮಯ । ನ ಘಟಿಗಾವನು ಸಾಟಿಯಾನಿಶಿಯಂತ್ಯ ಜಾವದೊಳು ॥ ಕದನಗಲಿ ಹನುಮಾದಿಕಪಿಭಟ । ರೊದಗಿ ಪೊಗಳಿದರುಡು ಸಮೂಹದ। ವಿಧುವಿನೋಲೆಸೆದಿರ್ದರಘುರಾಜೇಂದ್ರ ಚಂದ್ರಮನು ॥ ೧ ॥

॥ ರಾಗ ಕಾಂಬೋಧಿ—ಝಂಪೆತಾಳ ॥

ರಾಜಕುವರರು ಕೇಳಿ ರಾಜೇಂದ್ರ ರಾಘವನು । ರಾಜಿಸುವಕಪಿಗಳಾಳ್ತನದ ॥ ರಾಜಸಕೆ ತಲೆದೂಗಿ ರಾಜತೇಜದೊಳುದಿನ । ರಾಜನಣುಗನ ನೋಡಿನುಡಿದ ॥ ೧ ॥ ಧುರಧುರಂಧರಕೇಳು ದುರುಳಖಳರುಬ್ಬಟೆಯು । ಬಿರುಸಾಯಿತೇನಯ್ಯುಸಹಪಿ ॥ ಅರುಹುದುರ್ಜನರ ನಿಷ್ಠುರದಿಂದಿನಾಹವದ । ಪರಿಯದೇನೆನಲೆಂದನವಿುಪಿ ॥ ೨ ॥ ರಾಯರಾಘವ ಜಗದ ಮಾಯಗಾರರ ತೆರದಿ। ಜೀಯನೀನಾಡುವುದೆದೇವಾ ॥ ಮಾಯಕದಿ ಮೇಣುವಿಧಿ ಸಾಯಕದೊಳಿಂದ್ರಾರಿ । ಬೀಯುವಮಾಡಿದನ್ನೆಸೆಬಲವ ॥ ೩ ॥ ನೃಪಪರಾಕ್ರಮಿಹನುಮ ಜಡಜಜಸುತಸುತನಮತ । ವಿಡಿದ್ಯೆದಿಸಂಜೀವನವನು ॥ ಕಡುಸಾಹದಿತಂದು ತಡೆಯುದಿನಿಬರಪ್ರಾಣ। ವಿಡಿವನವನೆನೆಕೇಳ್ದು ನೃಪನು ॥ ೪ ॥ ವಾಯುಜನಕಂಡುಪುಳ ಕಾಯುಮಾನಿತನಾಗಿ । ಪ್ರೀಯದಲಿ ಬಿಗಿದಪ್ಪಿಕೊಳುತ ॥ ಬಾಯತೋಃನಿಧಿಯಹಿತರಾಯಮಸ್ತಕಶೂಲ। ಚಾಯೆನ್ನಮರಿಯಾಸೆಯಿತ್ತ ॥ ೫ ॥ ನೀನಿರ್ದರಿಂದ ಜಯಮಾನಿನಿಯವದನಾಬ್ಜ । ತಾನೆದರ್ಶನವೆಮಗೆ ಮುಂದೆ॥ ಏನಿತ್ತಡೆಯು ನೆರೆಯದ್ಯೆನಿನ್ನ ಸಾಹಸಕೆ। ತಾನಜನವರವಿತ್ತೆನಂದೆ॥ ೬ ॥ ಎಂದೆನುತ ಶ್ರೀರಾ। ಮಚಂದ್ರ ಕೊಂಡಾಡುತಿರೆ । ಗಂಧವಾಹಕುಮಾರನೆಂದ ॥ ತಂದೆ ಮಕ್ಕಳಪೊಗಳೆ ಚಂದವೇದೇವಮಾ । ತೊಂದಲಾಲಿಸೆನುತ್ತ ಮಣಿದ ॥ ೭ ॥

॥ ರಾಗ ಘಂಟಾರವ—ರೂಪಕತಾಳ ॥

ವನರುಹಾಂಬಕ । ಮನುಜಪಾಲಕ । ಚಿನುಮಯಾತ್ಮಕ । ದನುಜಘಾತಕ ॥ ಮನುಜನಾಟಕ । ತನಗಳೇತಳೆ । ಇನಿತುಪೊಗಳುವೆ । ನಿನಗೆ ಸಹಜವೆ ॥ ೧ ॥ ನಿಗಮತತಿಗಳಾ । ನಿನ್ನಪದಗಳ । ಬಗೆಯನರಿಯವು । ಪೊಗಳಿದಣಿಯವು ॥ ರಘುಕುಲೇಂದ್ರನೀ । ನಿಂತುಪೇಳಲು । ನಗದೆ ಲೋಕವು । ಪೇಳ್‌ವಿವೇಕವು ॥ ೨ ॥ ಮುಂದೆಮಾಡುವ ಕಾರ್ಯದಂದವ । ತಂದೆನೇಮಿಸೊ ಮಾತಲಾಲಿಸೊ ॥ ಎಂದುಚರಣದಿ । ಎರಗೆ ತೋಷದಿ । ನಿಂದುರಘುಜನು । ಸಹಜಗೆಂದನು ॥ ೩ ॥

॥ ರಾಗ ಕೇತಾರಗೌಳ—ಅಷ್ಟತಾಳ ॥

ಅನುಜಕೇಳಿದೆಯ ವಾನರಕುಲಕಮಲಾರ್ಕ । ಹನುಮನಾಡಿದ ಮಾತನು ॥ ಬಿನುಗುರಕ್ಕಸರಾಳು ತನಕೇನಕಂಡೆಯೆಂ। ದೆನಲೆಂದಲಕ್ಷ್ಮಣನು ॥ ೧ ॥ ಎನ್ನ ಕೇಳುವೆಯಸಂಪನ್ನ ಪರಾಕ್ರಮ । ನಿನ್ನೊಳವರಿಯ

ದೇನೈ॥ ಕುನ್ನಿಗಳುಬ್ಬಟೆ ನಿನ್ನೊಳುಸಲುವುದೆ। ಚೆನ್ನಿಗಬಿಡುಶಾಭಾಸೈ॥ ೨॥ ಧುರಪರಾಕ್ರಮನೆ ಕೇಳರಿತೆನ್ನಸಹಜಾತ । ದುರುಳರಿಗಜ ಮುಖ್ಯರು । ಪರಿಪರಿಶಕ್ತಿಗಳಿರದಿತ್ತು ನಮ್ಮಸಂ । ಗರಕೆನಿಷ್ಠುರರಹರು ॥ ೩ ॥ ಬರಿದೆ ವನೌಕಸ ವರರದಾನವರಿಂದ। ನೆರೆಹಣಿಸಲು ಫಲವೆ॥ ಅರೆನಿಮಿಷದಲಿ ಸಂ। ಹರಿಪೆನಜಾಂಡಮು। ತ್ತಿರದಾಗ ವಿರಚಿಸುವೆ ॥ ೪ ॥ ರುಂಡಮಾಲೆ ಯನಾಂತು ಕೊಂಡವಬರಲಿ ಯು। ದ್ದಂಡಮಾಯುಗಳಿರಲಿ॥ ಖಂಡಿಸದಿರೆ ಕಿಡಿ ಕೆಂಡವಾಗಲಿಲೋಕ । ತಂಡಗಳೆನುತಪೇಳಿ ॥ ೫ ॥

॥ ಭಾಮಿನಿ ॥

ಗಂಡುಗಲಿರಘುಸೂನು ತಾಕ್ಕೈ। ಗೊಂಡುಲಕ್ಷ್ಮಣನಿಂದ ನಿಜಕೋ। ಚಂಡವನುಝ್ಝೇಗೈದು ಕಮಲಭವಾಂಡಬಿರಿವಂತೆ ॥ ಚಂಡಭುಜಬಲನ ಹಿತಮುದವೇ। ತಂಡಕಂಠೀರವನು ವಡಬಪ್ರ। ಚಂಡ ಶಕ್ತಿಯನೆತ್ತಿ ಹುಂಕ ರಿಸುತ್ತಲಿಂತೆಂದ ॥ ೧ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಮೃಡವಿರಿಂಚಾದಿಗಳು ಶಕ್ತಿಯ। ಕೊಡುವವರು ಗಡಕೊಂಬವರು ಸುರ। ರೊಡೆಯಜಿತುದಶಕಂಠ ಮುಖ್ಯರು। ಗಡಯಿದೇನು ॥ ೧ ॥ ತಾನ ದಾರೆಂದರಿಯರ್‍ಕೈನಾ। ವೇನುಸದರವೊ ಶಿವಶಿವಾಖಳ । ರೇನಬ್ಬಗೆದರೊ ಚಿತ್ತದಲಿ ಸು। ಮ್ಮಾನದಿಂದ ॥ ೨ ॥ ತಡೆಯುಲ್ಕೆ ವಿಕ್ರಮರು ತನ್ನಯ। ಕಡುಹನಿದನೆಂದೆನುತಸಿಂಜಿನಿ । ತೊಡಿಸಿಧನುಝ್ಝೇಂಕರಿಸಿ ಶಕ್ತಿಯ । ಬಿಡುವಭರದಿ ॥ ೩ ॥ ಒಡನೆ ಕಾಲ್ದೆಗೆಯಲ್ಕೆ ಭೂತಳ । ನಡುಗಿತಹಿಪತಿ ಕುಸಿದಸುರಗಿರಿ । ತಡೆಯದೊಲೆದುದುನಾವೆಯುಂದದಿ । ನುಡಿಯಲೇ ನು ॥ ೪ ॥ ಉರಿಯಕರಡಿಗೆಯಂತೆ ಶಿಖಿಶಾ। ವರಿಸಿತಬುಜಭವಾಂಡವ ನುತಾ। ನಿರದೆಸಚರಾಚರವ ಬವಣೆಯ । ನೊರೆಯಲೇನೈ ॥ ೫ ॥

॥ ವಾರ್ಧಕ ॥

ನಡುಗಿದಂ ದಂಡಧರಮೃತ್ಯುಮೃಗಧರನ ಬೆ। ನ್ಹಿಡಿದರ ಮರರ್ಕಳುಂ ಧೃತಿಗೆಟ್ಟರಮರೇಂದ್ರ । ಜಡಜೋದ್ಭವನಮರೆಯ ಸಾರಿದಂ ಕಪಿಕಟಕ ರಾಮರಾಮೆನಲಿತ್ತಲು ॥ ಕಡೆಯಹುದಲಾಜಗಕೆ ಸಿತಪದ್ಮನೇತ್ರಖತಿ। ವಿಡಿದನೇಕಕಟೆಂದು ವಿಧಿಯುಂಚೆ ಗಮನದಿಂ। ಪೊಡವಿಗೈತಂದಾ ರಘೂ ದ್ವಹನಸನ್ನುತಿಸ ತೊಡಗಿದಂ ಜಯರವದೊಳು ॥ ೧ ॥

॥ ಭಾಮಿನಿ ॥

ದೇವದೇವೋತ್ತಮಕೃಪಾನಿಧೆ । ದೇವನರನಾಟಕ ವಿನೋದಕ । ಲಾವಿದನೆ ಕಮನೀಯ ಮೂರುತಿ ಜಾಹ್ನವೀಪಿತನೆ ॥ ಈ ವಿಧವದಾರೊಡನೆ ನಿಜಭುವ । ನಾವಳಿಯೊದಶಕಂಠನೋ ನಿನ । ಗಾವ ಹಗೆಯೆಲೆ ತಂದೆ ಜಯವೆಂದಜನುಮಣಿದೆಂದ ॥ ೧ ॥

॥ ರಾಗ ಬೇಗಡೆ—ಅಷ್ಟತಾಳ ॥

ಶೂರವೀರೋದ್ಧಾರ ರಘುವರ್ಯ । ಬಿಡುಸಾಕು ಕೋಪವಿ । ದಾರೊಡನೆ ಗಂಭೀರಘನಶೌರ್ಯ ॥ ಮೇರುವೆತ್ತಣವೆತ್ತ ಜಂಬುಕ । ನಾರುಭಟೆತಾನೆತ್ತ ನಿನಗೀ । ಕ್ರೂರನಿಶಿಚರರಿದಿರೆ ಬಿಡುಖತಿ । ಮೀರಿ ಹೋಮುದನೆಲ್ಲದೇವನೆ ॥ ಶೂರ ವೀರೋದ್ಧಾರ ॥ ೧ ॥ ಈ ಯಜಾಂಡವ ನಿರ್ಮಿಸಿದೆಯೆಂದು । ಸಚರಾಚರಂಗಳ । ಕಾಯುವನೆ ನೀನಾಗಿಮಿಗೆ ಯಿಂದು ॥ ಬೀಯಮಾಡಲು ಬೇಡಬೇಡೆಂ । ಬಾಯತಿಕೆಯವರುಂಟೆ ನೋಡೆಲೆ । ಜೀಯಮಕ್ಕಳ ತಾಯಿತಾನೇ । ನೋಯಿಸಲು ಜೀರಾರು ಕಾವರು ॥ ಶೂರವೀರೋದ್ಧಾರ ॥ ೨ ॥ ತಪ್ಪುಸಾವಿರವಿಪ್ಪುದೆಮ್ಮೊಳಗೆ । ನೀನಲ್ಲಮರೆ ಜೀ । ರೊಪ್ಪುಗೊಂಬವರುಂಟೆ ಪೇಳೆನಗೆ ॥ ಕಪ್ಪುಕಂಧರ ಮಿತ್ರ ಕೇಳೆಳ । ತಿಪ್ಪತೃಣಕಲ್ಪಾಂತವಹ್ನಿಯೊ । ಳೊಪ್ಪುವುದೆ ನಿನಗಿಪ್ಪರಾರ್ಸರಿ । ಯಪ್ಪನೀ ನೀತಪ್ಪಮೆರೆವರೆ ॥ ಶೂರವೀರೋದ್ಧಾರ ॥ ೩ ॥ ಉಗಿದಶರ ಮರುದ್ವೀಪದೊಳಗೆಸೆಯು । ಲಲ್ಲಿಯ ಪುಳಿಂದರು । ಮುಗಿಯಲ್ಕೆಮಾಸ್ವಾಮಿ ಖಳವಿಜಯ ॥ ಹಗುರವೈನಿನಗುಗ್ಗಡವೆ ನೀ । ನಗೆಯಬೀರದಿರಕಟ ಜಗಕೆನೆ । ರಘುಜಕಿರುನಗೆ ಸೂಸೆಕಮಲದ । ಮುಗವಿಯುತ್ತಳದತ್ತಸರಿದನು ॥ ೪ ॥

॥ ಭಾಮಿನಿ ॥

ನಡೆಯಲಬ್ಜಜನಿತ್ತಶರಜಿಡ । ಲೊಡನೆ ತದ್ವೀಪದಕಿರಾತರು । ಮಡಿದರೆಂಭತ್ತೈದುಕೋಟಿಯದೇನ ಬಣ್ಣಿಪೆನು ॥ ನುಡಿಗೆ ಜೋಡಿಗೆ ಕೃಪೆಗೆ ವಿಕ್ರಮ । ದೆಡೆಗೆ ಪಲ್ಲಟವುಂಟೆ ನಿಮ್ಮಯ । ಪೊಡವಿಪತಿಗೆಲೆ ಕೇಳಿದೈ ಕಾಕುಸ್ಥನೃಪಸೂನು ॥ ೧ ॥

॥ ವಾರ್ಧಕ ॥

ಆನೆರವಿಯೊಳು ವಿಭೀಷಣರವಿಜಪವಮಾನ । ಸೂನುಸೌಮಿತ್ರ ಜಾಂಬವರಿನಿಬರಾಪದ್ಮ । ಯೋನಿಯಂ ಕಂಡರ್ಕೈಯಾಗ ಸುಮ್ಮಾನದಿಂ

ರಾಘವನ ಸಿರಿಮುಡಿಯೊಳು ॥ ಆ ನಿಳಿಂಪೌಘಪೂವಳೆಗರೆದುದುಂದು ಭಿ । ಧ್ವಾನದಿಂ ಕೊಂಡಾಡುತಿರ್ದರಭ್ರದೊಳಿತ್ತ । ಭಾನುಕುಲಸಂಭವಂ ಮುಂದಪ್ಪಕಜ್ಜಮಂ ತಾನೆಂದನಿನಸುತನೊಳು ॥ ೧ ॥

॥ ರಾಗಶಂಕರಾಭರಣ—ಮಟ್ಟೆತಾಳ ॥

ವೀರಧೀರೋದ್ಧಾರಕೇಳು । ಭೋರನೀಗಮಾಳ್ಪ ರಾಜ । ಕಾರಿ ಯವನು ದನುಜರಿರ್ಪ । ಊರನಿದರನು ॥ ಮಾರುತಾತ್ಮಭವನು ಹಿಂದೆ । ಘೋರವಹ್ನಿಗಿತ್ತ ಪೋಲು । ಸೂರೆಗಾಗಿ ಸುಡುವಮುನನಿ । ರ್ಧಾರ ವೆನಗಲ್ಕೆ ॥ ೧ ॥ ಎಂದಡೆರಗಿ ಕಪಿಕುಲೇಂದ್ರ । ನೆಂದದೇವರಿಂತುನೆನಸಿ । ದಂದಲೇಸು ಹೊಂದದಿರದು । ಮುಂದೆ ಧುರದೊಳು ॥ ಮಂದಮತಿ ಗಳಾಯುತೀರ್ದು । ದೆಂದು ಗ್ರಹಿಸಿಕೊಳ್ಳಿರೆನಲು । ಗಂಧವಹಸುತಾದ್ಯರ ಹುದಿ । ದೆಂದು ಪೇಳಲು ॥ ೨ ॥ ಗಂಡುಗಲಿಸುಮಿತ್ರೆಯಣುಗ । ಕಂಡು ವರಧನಂಜಯಾಸ್ತ್ರ । ಗೊಂಡು ರಘುಜಗೆಂದಕೇಳ್ ಭೂ । ಮಂಡಲೇ ಶನೆ ॥ ಚಂಡತರಶರಪ್ರಯೋಗ । ಪಂಡಿತತ್ವ ತೋರ್ಪೆನಿದಿರು । ರುಂಡ ಮಾಲನಿಂದುಗೆಲಿದು । ಕೊಂಡು ಪೋಪನೆ ॥ ೩ ॥ ಧಿರುರೆಸಹಜಧೀರ ಭಳಿರೆ । ಖರೆಯುನಹೆಯೆನುತ್ತಲುಭಯ । ಧುರಧುರಂಧರುರುಸರೋಷ । ಭರದಿ ಧನುವನು ॥ ಕರದೊಳೆತ್ತುತುರಿಕಳಂಬ । ಸುರಿಯುಲಗ್ನಿವಿಸ್ಫು ಲಿಂಗ । ಧರಣಿಮುಸುಕೆತರು ವ್ರಜಂಗ । ಳುರಿದವೇಳ್ವಿನು ॥ ೪ ॥ ಅದನು ಕಂಡುರವಿಜನೀಲಾಂ । ಗದಸುಷೇಣ ಹನುಮಗವಯ । ದಧಿಮುಖಾದಿ ಕೀಶವೀರ । ರಧಿಕ ಭರದೊಳು ॥ ಮುದದಿಜ್ಯೋತಿಗೊಳ್ಳಿಗಳನು ॥ ಕದನ ಶೂರರಾಂತು ನಡೆದ । ರಧಟುತನಗಳೆಂತೊಬೆದರೆ । ತ್ರಿದಶರಾಗಲು ॥ ೫ ॥

॥ ಭಾಮಿನಿ ॥

ರಣಮುಹೀಮಂಡಲದ ಭೈರವ । ಗಣದ ದೀಪಾವಳಿಯೊ ಈಶನ । ಹಣೆಯುಹುತವಹನಟ್ಟಹಾಸವೊಶಿವಮುಹಾದೇವ ॥ ಸೆಣಸಿ ಜ್ಯೋತಿ ಲೋರ್ಕ ವೀರಾ । ವಣನಪಟ್ಟಣಕೈದಿಕದನವ । ಕೆಣಕುವುದೊಕಪಿ ವರರೊ ನೋಡುವನಾವನದ್ಭುತವ ॥ ೧ ॥

॥ ರಾಗ ಅಖಂಡಮಾರವಿ—ಏಕತಾಳ ॥

ಆರ್ಬಣ್ಣಿಪರೆಲೆ । ಯುರ್ಭಕರಿರಕೇ । ಳ । ರ್ಬುದ ಸಂಖ್ಯೆಯ । ಸರ್ಬವನೌಕಸ । ರುರ್ಭರದಿಂವರ । ಕರ್ಬುರಕೋಟಿಯ । ಪರ್ಬಿದರ್ಕೈ

ಯಜ । ಗರ್ಭವು ನಡುಗೆ ॥ ಏನನೆಂಬೆ ॥ ೧ ॥ ಏರಿದುದುರ್ಗವ । ವೀರ ವಲೀಮುಖ । ವಾರವುವಿಗೆ ಕಾ । ಲೂರುತನಿಂದುರೆ । ಬೀರಿದರಗ್ನಿಯ । ಕ್ರೂರನಿಶಾಚರ । ವಾರದ ಮನೆಮನೆ । ಗಾರುಭಟಿಸುತ । ಏನನೆಂಬೆ ॥ ೨ ॥ ಅಗ್ಗಳಹಯದುರು । ಲಾಯ್ಗಳ ಭಟರ ಪೊ । ಳಲ್ಗಳ ಶಸ್ತ್ರದ । ಸಾಲ್ಗಳ ನಿಭಸೊಂ । ಡಿಲ್ಗಳ ರಥಸಂ । ಕುಲ್ಗಳ ನುರಿಯೊಳು । ಗಾಲ್ಗಳ ಚಿದ ರುಮ । ಳಲ್ಗಳುತುಂಬಿದು । ದೇನನೆಂಬೆ ॥ ೩ ॥ ನಿದ್ದೆಯೊಳುರಿಯೊ । ಪ್ಪಿದ್ದ ಪರಾಕ್ರಮ । ರಿದ್ದಾಕೈದುವ । ತಿದ್ದುವುದಕೆ ಮೇಲ್ । ಬಿದ್ದಾಕಿಚ್ಚಿ ನೊ । ಳದ್ದಿಯುರುಹಿದರ್ । ದೊಡ್ಡೆಗರನುಯಿವ । ರುದ್ದುರುಟುಗಳಿಂ । ದೇನನೆಂಬೆ ॥ ೪ ॥ ಕಳಕಳವಲಿಬಲ್ । ಖಳಬಲನಿವನ । ಗ್ಗಳನುಸುಷೇಣ ಕ । ನಳನಿವನೆನ್ನು । ತ್ತೊಳಗೊಳ ಹೊಯ್ದುರೆ । ಕಳಚಿವರಸುಗಳ । ಪೊಳ ಲೊಳು ರಕ್ತದೋ । ಕುಳಿಯಾಯ್ತೆಂದದ । ನೇನನೆಂಬೆ ॥ ೫ ॥

॥ ವಾರ್ಧಕ ॥

ಭುಗಿಭುಗಿಲು ಭುಗಿಲೆಂಬ ದಳ್ಳುರಿಯೊಳಖಿಳಖಳ । ರಗಳುರಿದುದ್ಯೆ ಹೇಮಮಯಭವನರಾಜಿಗಳ್ । ಧಗಧಗಿಲು ಧಗಿಲೆಂದು ಸಿಂಧಸೀಗುರಿಪ ತಾಕಾವಳಿಗಳುರಿಗೊಂಡವು । ಮಿಗೆಯದೇನ್ ಬಣ್ಣಿಪೆಂ ಪರವಧೂವ್ಯಸನಿ ಗಳ । ಪಗೆತನಂಕಾನನದ ಬೆಳ್ದಿಂಗಳಂತಲಾ । ಬಗೆದಶಾನನಗಾಗದಿರ್ಪು ದೇಯೆಂದು ಕುಶಲವರಿಂಗೆ ಮುನಿನುಡಿದನು ॥ ೧ ॥

॥ ಭಾಮಿನಿ ॥

ಅಣುಗಕೇಳನಿತರೊಳುಶತದಿನ । ಮಣಿಯ ವೋಲ್‌ದೀಪ್ತಿಕೆಗಳೊ ಪ್ಪಿರೆ । ಮಣಿಖಚಿತಪೀಠದೊಳುಸುರದಲ್ಲಣದಶಗ್ರೀವ ॥ ಹಣಿದ ನಿದ್ರೆ ಯನುಗಿದುಖಳತಿಂ । ಥಿಣಿಯೊಳೋಲಗವಿತ್ತಡಾಗಲು । ಮಣಿದು ಮಣಿ ಹಾರರುಖಳಾಧಿಪಗೆಂದರಿಂತೆನುತ ॥ ೧ ॥

॥ ರಾಗ ಮುಖಾರಿ—ಏಕತಾಳ ॥

ಪುಣ್ಯಜನೇಶರಾವಣೇಶ । ಚಿತ್ತವಿಸಗ್ರ । ಗಣ್ಯನಮ್ಮಯ ಮಾತ ನೀಸ ॥ ಪಲ್ಲವಿ ॥ ಮಾತಾಡಲವಧಿಯಿಲ್ಲವಯ್ಯ । ಚೆನ್ನಟ್ಟಿಕೋತಿ । ಪೋತ ಗಳಿದೆ ಬಂದರ್ಜೀಯ ॥ ಭೂತಳವತಳತ । ಳಾತಳದೊಳುವಿ । ಖ್ಯಾತನೆ ಕೈಕಸೆ । ಜಾತನೆಧುರನಿ । ರ್ಭೀತನೆಯಿಂದಿನ । ರೀತಿಯು ಪೊಸಪರಿ । ಯಾತಗಳುಪಹತಿ । ಯೇತರ ಪೇಳಲಿ ॥ ೧ ॥ ಇಂದ್ರಾರಿರಣದ ದಿಗ್ವಿ

ಜಯ । ಎಣಿಸದಿರಯ್ಯ । ಬಂದಿದೆ ಮಾರಿನೋಡಯ್ಯ ॥ ಅಂದು ಹನುಮ ಸು । ಟ್ಟಂದದೊಳಾರಘು । ನಂದನನುರುಹುವ । ನಿಂದೀಕ್ಷಿಪುದುರಿ । ಯಿಂದಲಿ ತವಭಟ । ರಿಂದೊದಗಿದರದೊ । ಬಂದುದು ಕಿಚ್ಚೇ । ಳಿಂದು ಪರಾಕೆ॥ ೨ ॥ ಪಗೆಯುವರಿಂದು ಸುಡುವುದಲ್ಲಾ । ನೋಡಂದು ನಿನ್ನ । ಭಗಿನಿ ತಾನಿಟ್ಟಕಿಚ್ಚಿಂತೆಲ್ಲಾ ॥ ಮಿಗೆಯೇನೆಂಬೆವು । ಮುಗಿಸಿದುಕೋಟೆಯ । ಹಗರಣದಲಿ ಮು । ತ್ತಿಗೆಯಿಂದಗ್ನಿಯ । ಹೊಗಿಸಿದ ಕಪಿಪತಿ । ಹಗುರ ವೆನೋಡೆಂ । ಬಗೆಪೊರೆಯೆಮ್ಮನು । ವಿಗಡಪರಾಕ್ರಮ ॥ ೩ ॥

॥ ಭಾಮಿನಿ ॥

ನುಡಿಯನದ ಕೇಳುತ್ತ ಘುಡುಘುಡು । ಘುಡಿಸಿ ಮೃಡನೊಲಿದಿತ್ತ ಖಡ್ಗವ । ಝುಡಿದುಹುಂಕರಿಸಿದಡೆ ನಡುನಡು ನಡುಗಿತವನಿತಳ ॥ ಕಡೆಯಭೈರವನೋಲುಸಲೆಕೆಂ । ಗಿಡಿಗಳನು ಸೂಸುತ್ತ ಖತಿಯಲಿ । ನುಡಿದ ನೀಲಾಚಲನಿಭಾಂಗ ಖಳೇಶನಾರ್ಭಟಿಸಿ ॥ ೧ ॥

॥ ರಾಗ ಭೈರವಿ—ಏಕತಾಳ ॥

ಏನಚ್ಚರಿಯಿದು ಭಳಿರೆ । ರಿಪು । ಸೇನೆಯವರು ಹೆಚ್ಚಿದರೆ ॥ ತಾನಾರೆಂದರಿಯುರಲಾ । ಶಿವ । ತಾನೆ ಬರಲಿಬಿಡೆನಲ್ಲಾ ॥ ೧ ॥ ನಿನ್ನೆಯಧುರ ದಿಗ್ವಿಜಯ । ಕನ । ಸನ್ನೆರೆಕಂಡಾಪರಿಯ ॥ ಬಿನ್ನಣವಾಯ್ತಿನ್ನೇನು । ಸುಡ । ಲಿನ್ನಹಿತರ ಪಾಡೇನು ॥ ೨ ॥ ಫಡಫಡ ಮೃಗರಾಜನನು । ಕುರಿ । ಪಡೆತಾಗೆಲುವುದೆ ಮೇಣು ॥ ಕಡುಹಿನಸುತನಿಂದ್ರಾರಿ । ಎತ್ತ । ನಡೆದನೊ ಕಾಣೆನೀಬಾರಿ ॥ ೩ ॥ ಮುಕ್ಕುವೆ ವಾನರವರನ । ಮಿಗೆ । ತಿಕ್ಕುವೆ ರಘುಕುಲದವನ ॥ ಮಿಕ್ಕವರಿಂದೇನೆಂದು । ಗುಹಿ । ಲಿಕ್ಕಿದ ಭೋರ್ಗರೆದಂದು ॥ ೪ ॥ ಒಡನಾಪುಷ್ಪಕವೇರಿ । ಸತಿ । ಪಡೆಸಹಿತಿರದೆಸವಾರಿ ॥ ವಿಡಿದುತ್ತರ ಗೋಪುರದಿ । ನಿಂ ।ದೊಡನುಸಿರಿದನೀತೆರದಿ ॥ ೫ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಕರೆಯಿರೋಸುತ ಮೇಘನಾದನ । ಧುರವಿಜಯಮಕರಾಕ್ಷನನು ಮೇಣ್ । ಕರೆಯಿರೋ ಕಲಿಯುಹಸುಪಾರ್ಶ್ವಕ । ನಿರದೆಭರದಿ ॥ ೧ ॥ ಎಲ್ಲಿಯಾಶಶಕರ್ನದುರ್ಜಯ । ನೆಲ್ಲಿಯೂಪಾಂಬಕಸುಬಾಹುವು । ತ್ರೈಲ್ಲಿ ದುರ್ಮದನೆನುತ ಖಳನಿಂ । ದಲ್ಲಿ ನುಡಿಯೆ ॥ ೨ ॥ ಎಂಬ ನುಡಿಯಿಂ ಮುನ್ನರಕ್ಕಸ । ಕುಂಭಕರ್ಣಾತ್ಮಜನುಭುಜಸಂ । ರಂಭನಹಿತ ವಿಜೃಂಭ

ಕುಂಭನು । ತಾಂಭರದೊಳು ॥ ೩ ॥ ಕಿಡಿಯಿಡುತ ಕಲ್ಪಾಂತರುದ್ರನ । ಪಡಿಯೊಳಿರದೈತಂದು ರಾವಣ । ನಡಿಗೆರಗಿತಾಪೇಳ್ದ ತನ್ನಯ । ಕಡು ಹುತನವ ॥ ೪ ॥

॥ ರಾಗ ಮಾರವಿ—ಏಕತಾಳ ॥

ಹಿರಿಯಪ್ಪನೆ ನೀಲಾಲಿಪುದಿಂ ತ । ಚ್ಚರಿಯನುಬಡಲೇನು ॥ ಧುರ ಕಟ್ಟಿನ್ನನು ನಿಮಿಷದೊಳುರೆಸೊ । ಪ್ಪರವೆನುರಿಪುಗಳನು ॥ ೧ ॥ ಅಗ್ನಿ ಸ್ತಂಭನ ಬಲ್ಲೆನುಪುರವಿದ । ನಗ್ನಿಯೊಳುರುಹುವರು ॥ ಅಗ್ನಿನಿಧಿಯ ಪೊಗಲಗ್ನಿಯೊಳದ್ದುವೆ । ನಗ್ನಿನಯನನಾಣೆ ॥ ೨ ॥ ನೋಡಲಿಬರ್ದಿಲ ವಿತತಿಗಳತಿಕೊಂ । ಡಾಡಲಿಂದಿನಧುರದಿ ॥ ಬೇಡಬಾಯ್ಬೆರಳಿಂ ರಿಪು ಸಂಚಯ । ವಾಡಲುಜಿಡೆ ಭರದಿ ॥ ೩ ॥ ಹುಂಕರಿಸುವ ಮಿಂಚುಗಳಿದಿರೆ ಕೇಳ್ । ಪಂಕಜಬಾಂಧವಗೆ ॥ ಸಿಂಕೊಡು ವೀಳ್ಯವಪಡಮರ್ಕಟಗಳ । ಹಂಕೃತಿಯೆನಗಿದಿರೆ ॥ ೪ ॥ ಎನುತಲಿ ಹಿರಿಯುಬ್ಬಣವನುಝುಳಪಿಸಿ । ಘನಮುದದಲಿನಿಂದ ॥ ತನುಜನಬಿಗಿದಪ್ಪುತದಶಮುಖನಂ । ದನು ನಯ ದೊಳಗೆಂದ ॥ ೫ ॥

॥ ರಾಗ ಶಂಕರಾಭರಣ—ಅಷ್ಟತಾಳ ॥

ಚಿಣ್ಣನೀನೋರ್ವನೆ ಪೋಗಿ । ಮಿಣ್ಣನರಿಗಳ ತಾಗಿ । ಬಣ್ಣಗೆಡಿಸುವ ಮಾತಿ । ಗೆಣ್ಣಿಪೆ ನಾನು ॥ ೧ ॥ ಎಣ್ಣಿಸಬೇಡವೆ ತಾತ । ಚಿಣ್ಣನೆಂದು ಮೃಗೇಂದ್ರನು । ಬಣ್ಣದಾನೆಗಳುಕುವುದೆ । ಗಣ್ಯಮಾಡೆನು ॥ ೨ ॥ ಅತಿ ಶೂರನಿನ್ನಯ್ಯಪ್ರಬಲ । ನತಿಕಾಯಾದಿಭಟರು ಮಡಿದ । ವ್ಯಥೆಗುಂದ ಲಿಲ್ಲೇನ ಮಾಳ್ಪೆ । ಸುತನೆ ಕೇಳೊಂದ ॥ ೩ ॥ ಪಿತನೀನೆಂದನಿಬರಸಮರ । ಕತಿಶಯಾನೆನಿಸದ ಮೇಗೆ । ಸುತನೆ ನಿನ್ನನುಜಗೆದಿವಿಜ । ಮಥನಕೇಳೆಂದ ॥ ೪ ॥ ಧುರಧೀರನೀನಹುದುಕಂದ । ಉರಿಛಡಾಳಪೆರ್ಚಿತಿದಕೊ । ಪರಿಪಂಥಿಗಳ ಬಲುಹಿಗಾನೆ । ತೆರಳುವೆ ಕಾಣ್ಯೆ ॥ ೫ ॥ ತೆರಳುವುದಂತಿರಲಿ ಶಿಬಿಮುಂ । ದರಿವುದು ಹಾಗಿರಲಿ ಸುರ । ಗಿರಿಯುನುಸಿಗಳ್ಗಂಜಲುಂಟಿ ತೆರಳುವೆನಾನ್ನೈ ॥ ೬ ॥

॥ ಭಾಮಿನಿ ॥

ಮತ್ತೆ ಕೇಳಿನ್ನಧಟರಿಪುಗಳ । ಸೊತ್ತಿಹತ್ತಿದ ಶಿಬಿಯನಂದಿಸ । ದಿತ್ತ ಬಂದರೆನೋಡುಪಿತ ನೀನಿತ್ಯಲರ್ಚಿಸುವ ॥ ಕೃತ್ತಿವಾಸನ ಲಿಂಗವನು ಪೂ । ಜೋತ್ತಮದ ವೇಳೆಯಲಿಯೆಡಗಾ । ಲಿತ್ತು ಕೆದರಿದ ದೋಷಕುಂಭ ಕಗೆಂದು ಬೊಬ್ಬಿರಿದ ॥ ೧ ॥

॥ ವಾರ್ಧಕ ॥

ಅರ್ಗಳಪರಾಕ್ರಮಂ ನುಡಿದಿಂತುಬಲ್ಪಿಂದ । ಭರ್ಗಗಿರಿಧರನನು ಜ್ಞೆಯುಗೊಂಡು ನಡೆಗೊಂಡು । ಘೋರ್ಗರೆವುತಾಕ್ಕೆ ಪೀಟಿಯುಮಂತ್ರಮಂ ಜಪಿಸಿಪ್ರಳಯಾಗ್ನಿರೂಪಧರಿಸಿ ॥ ಮಾರ್ಗಣೋದ್ಧತವನುಂ ಸುರಗಿಶೂಲಂ ಗಳಂ । ನೀರ್ಗ್ಯೆಯೊಳಾಂತು ಧುರಕೈತಂದನೋಳ್ಪ ದಿವಿ । ಜರ್ಗಳೆದೆ ಕಾತರಿಸೆಕಪಿವರ್ಗತಲ್ಲಣಿಸೆ ಕೂರ್ಗಣೆಯುಮಳೆಯುಸುರಿಸಿ ॥ ೧ ॥

॥ ರಾಗ ಭೈರವಿ—ತ್ರಿವುಡೆತಾಳ ॥

ತರುಣಕೇಳೈಯುಮರ ಬಾಣಪ । ದುರುಳದಶಶಿರಗಂಜಿತಾನೇ । ತೆರಳುವನೊ ಸಂಗರಕೆವಹ್ನಿಯು । ವರವಮೇಣೆಂದೈದುವುದೊವಿ । ಸ್ತರವ ಬಣ್ಣಿಪನಾವಕುಂಭಾ। ಸುರಸುತಾನಾಸುರ ವಿಕಾರದೊ । ಉರಿಯ ಘುಧ್ಯದಿ ನಿಂದು ಶಸ್ತ್ರೋ । ತ್ಕರವ ತೂರುತ ಫಡಫಡೆನ್ನುತ । ಬಂದನಾಗ ॥ ೧ ॥ ಬಲ್ಲಿದರಲಾಭಳಿರೆಕೋತಿಗ। ಳೆಲ್ಲ ಕೈಗೊಳ್ಳಿಗಳ ಶಿಖಿಮೇ । ಣೆಲ್ಲಿ ಸುಡುವ ವರೆಲ್ಲಿ ಬನ್ನಿರೆ। ಕಲ್ಲುಮರದಣ್ಣಗಳೆನುತ್ತ । ಲ್ಲಲ್ಲಿ ಹರಿಹರಿದಖಿಳರಿಪುಗಳ । ಚಲ್ಲಬಡಿದುರುಳಿಚುತಲಾಘವ । ದಲ್ಲಿ ಶಿರಚೆಂಡಾಡೆ ಪ್ಯೊವುತ । ಬಲ್ಲಿದಾ ಸುರಮಲ್ಲಸಮರಕೆ ॥ ಬಂದನಾಗ ॥ ೨ ॥ ಭರಿತಬಲಕಪಿಭಟರು ರೋಷಾ । ತುರದೊಳಗ್ನಿಯು ಬೀರಿಬಹಸಂ । ಗರಭಯಂಕರಗಿರದೆ ಕಾಳುರಿ । ತುರುಕಿ ಮೋರೆಯು ಹರುಕಿ ನಾನಾ । ಪರಿವಿಧಾನದಿಸೆಣಸಿದಡೆ ನಿ । ಷ್ಠುರನು ಬಗೆ ಯದೆ ಮುಂದೆಮುಂದೈ । ತರಲು ಹರಿಯುದೆಸುತ್ತಲೋಡುವ । ವರನು ಬಡಿಬಡಿದ ರಚಿಯುರಚುತ ॥ ಬಂದನಾಗ ॥ ಧುರಕ್ಕೆ । ತಂದನಾಗ ॥ ೩ ॥

॥ ವಾರ್ಧಕ ॥

ಅಲ್ಲಿಗಲ್ಲಿಗೆ ತರುಬಿಕಾದುವರತೀದುವರ । ಖುಲ್ಲಕುಂಭಕನು ಬೆನ್ನಟ್ಟಿದಂ ಕುಟ್ಟಿದಂ। ಮಲ್ಲಕರಿಯುಾಥಾಧಿನಾಥರಂ ನಾಥರಂತಿನಜಾದಿಧುರ ವೀರರು ॥ ನಿಲ್ಲದವನುಪಟಳಕೆಪಾರಿದರ್ ಪಾರಿದರ್ । ಭಲ್ಲೂಕವಿತತಿ ಶಿಖಿಮಯದಿಂದ ಮಯದಿಂದ। ಚೆಲ್ವಾಂತು ನಿಮಿಷದೊಳ್ ಪುರವಧುಂ ಪುರವಧುಂ ಸೊಂಪೆತ್ತಳುಲಿಯೆಖಳರು ॥ ೧ ॥

॥ ಭಾಮಿನಿ ॥

ಮಿತ್ರಕುಲಜರುಕೇಳ್ವುದಿಂತಾ । ಶತ್ರುಗಳ ಬೆಂಬತ್ತಿಪದುಳದಿ । ನಿತ್ರಿಸಿದನುರಿತಣಿಸಿ ಪುರನಿಜಭಾಷೆಗನುವಾಗಿ ॥ ಗೋತ್ರರಿಪುಜಿತು ಮುಖ್ಯ

ರಾವಣ । ಪುತ್ರರುರೆಕೊಂಡಾಡಿದರು ಸುಪ । ವಿತ್ರನೀಭಳಿರೆಂದು ದುಂದುಭಿ ಮೊಳಗೆ ಬಲುವಾಗಿ ॥ ೧ ॥

॥ ವಾರ್ಧಕ ॥

ಅನಕಶ್ರೀಚಕ್ರಿ ಹೊಕ್ಕುಳಕುಶೇಷಯದೆಲರ । ಘನಶೋಣ ಸುಪ ರಾಗರುಚಿರ ಜ್ವಾಲೆಯದಭ್ರ । ವನುಬಿಂಬಿಸಿತೊ ಮೇಣುಪೂರ್ವದಿಗ್ಗಾಂಗ ನಾನನದ ಕುಂಕುಮರೇಖೆಯೊ ॥ ಎನುವಂತೆ ಪೊಂಬಿಸಿಲರ್ಘುಳದೊಡನೆ ಥಳಥಳಿಸು । ತಿನಸೋಲಗಂಗೊಟ್ಟಡಾಗನೇಸರ್ಕುವರ । ನನುವುತಿಯೊ ಳಾಹವಾಂಗಣದಿ ಭುಲ್ಲೈಸಿದರು ಹನುಮಾದಿಭಟರತ್ತಲು ॥ ೧ ॥

॥ ಕಂದ ॥

ಉದಯದೊಳಾದಶವದನಂ । ಮದನಾರಿಯನರ್ಚಿಸುತಿರೆ ಭರ ದಿಂದಾಗಳ್ ॥ ಮುದದಿಂದೋಲಗ ವಿತ್ತಿರೆ। ಕದನಾಗ್ರಣಿ ಕುಂಭಕರ್ಣೈದಿ ಯೆ ಮಣಿದೆಂದಂ ॥ ೧ ॥

॥ ರಾಗ ಸೌರಾಷ್ಟ್ರ—ಅಷ್ಟತಾಳ ॥

ಚಿತ್ತಾವಧಾನ ಪರಾಕುರಕ್ಕಸರಾಯ । ಮಾತಕೇಳು ॥ ಭಾಷೆ । ಯಿತ್ತವೋಲೈದಿಸಂಗ್ರಾಮದಿಸೆಣಸಿದೆ । ಮಾತಕೇಳು ॥ ೧ ॥ ಮೊದಲಗ್ನಿ ಸ್ತಂಭನ ಬಲಿದೆನು ಬಲವಂತ । ಮಾತಕೇಳು ॥ ಮತ್ತೆ । ಸದೆದೆನಲ್ಲಲ್ಲಿ ಹೊಕ್ಕಿರುವ ಮರ್ಕಟರನ್ನು । ಮಾತಕೇಳು ॥ ೨ ॥ ಇನಸೂನುಹನುಮಾದಿ ಗಳದೆತ್ತಪೋದರೊ । ಮಾತಕೇಳು ॥ ಪುರ । ವನುಸುತ್ತಿದಗ್ನಿಯ ತಣಿಸಿತ್ತ ಬಂದೆನು । ಮಾತಕೇಳು ॥ ೩ ॥

॥ ರಾಗ ಕೇತಾರಗೌಳ—ಝಂಪೆತಾಳ ॥

ಎಂದ ಮಾತನುಕೇಳುತ । ದಶಕಂಠ । ನಂದನನನಪ್ಪಿಕೊಳುತ ॥ ಕಂದಬಾ ವೀರಜಾರೈ । ಎನ್ನಕುಲ । ಚಂದ್ರಗುಣನಿಧಿಯೆ ಕುಳಿರೈ ॥ ೧ ॥ ಚನ್ನಿಗನುಮೇಘನಾದ । ಒಬ್ಬಕುಲ । ರನ್ನಗವಗೆಣೆಯಕಂದ ॥ ನಿನ್ನಂದ ದಾಪ್ತರೆನಗೆ । ಸುತವರ್ಗ । ದಿಂ ನೋಡಲುಂಟೆ ಕಡೆಗೆ ॥ ೨ ॥ ಮುಂದ ರಿಗಳಿಲ್ಲವೆನಿಸಿ । ಜಯವಧುವ । ನಂದದಿಂದಿರದೆವರಿಸಿ ॥ ಬಂದೆನ್ನವ್ಯಥೆಯ ಕಳೆದು । ಜಾನಕಿಯ । ಮುಂದಲೆಯಪಿಡಿವುತೆಳೆದು ॥ ೩ ॥ ರಮಿಸಿರಾಜ್ಯ ವನಾಳ್ವರೆ । ಹೊಣೆಯಿದಕೆ । ಮಮಸೂನುನೀನುಭಳಿರೆ । ಕ್ಷಮೆಯೊಳೆಣೆ ಗಾಣೆನೆನುತ । ಬಿಗಿದಪ್ಪ । ಲಮರಾರಿ ಮುದಪೆರ್ಚುತ ॥ ೪ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಬೊಪ್ಪನೀಸೆಲೆನೋಡು ಜಗದೊಳ । ಗಪ್ಪವೊಗಳಲುಸುತರು ನಗರೇ । ತಪ್ಪದುರೆಕಳುಹಿಂದುರಿಪುಗಳ । ಸೊಪ್ಪರವೆನು ॥ ೧ ॥ ಮೇಲೆ ವಾನರವರನ ಹನುಮನ। ಸೋಲಿಸಿದುವಿಗೆ ಮನುಜದಶರಥ। ಬಾಲರನು ಹೊಯ್ದಾಡುವೆನು ಸ । ಲ್ಲೀಲೆಯಿಂದ ॥ ೨ ॥ ಧುರದಿಜಯವಪಜಯವ ದೆಂಬುದ। ಹರನದಯು ತವಭಾಗ್ಯ ನಮ್ಮಯು । ಪರಮಪುಣ್ಯೋದಯ ವದರ ನಿ । ರ್ಧರಿಪರಾರೈ ॥ ೩ ॥ ತಾತಕೇಳಾದಡೆರಣಾಗ್ರದಿ । ಸೋತು ನಗರವ ಪೊಗೆನಿದಕೆಸುರ। ಘಾತನೀನೇಸಾಕ್ಷಿಕಳುಹೆಂ। ಬಾತರಳಗೆ ॥ ೪ ॥

॥ ಭಾಮಿನಿ ॥

ತರಿಸಿಪೊಂಬರಿವಾಣದಲಿಕ । ರ್ಪುರದ ವೀಳೆಯವಿತ್ತುರಿಪುಗಳ । ಮುರಿದುಬಿಸುಡೆಂದ್ಧರಸಿ ತಿರುಗಿದನಾದಶಗ್ರೀವ ॥ ಭರಿತದುಂದುಭಿರವವ ಝಾಂಡವ। ಛಿರಿಯಲಾಗಲೆಕುಂಭಯೋಚಿಸಿ। ಬರುತತಾಯ್ಪುವಿಜ್ವಾಲೆಯಳ ಮನೆಗೈದಿ ಮಣಿದೆಂದ ॥ ೧ ॥

॥ ರಾಗ ಸೌರಾಷ್ಟ್ರ—ಏಕತಾಳ ॥

ಲಾಲಿಸೆನ್ನಬಿನ್ನಪವ । ನೆಲೆತಾಯೆ । ರಘುನೃ । ಪಾಲಗೆವೊಳಿಹ ವಿವಾದ । ವೆಲೆತಾಯೆ ॥ ಶೀಲವಂತೆ ನೀನೆಬಲ್ಲೆ । ಯೆಲೆ ತಾಯೆ । ನಿನ್ನೆ । ಸೋಲಿಸಿದೆನಹಿತ ಬಲವ । ನೆಲೆತಾಯೆ ॥ ೧ ॥ ಪಂಥದಿಸಂಗರಕಿಂದು । ಎಲೆತಾಯೆ । ವೀಳ್ಯ । ವಾಂತೆ ಹಿರಿಯಯ್ಯನಿಂದ । ಎಲೆತಾಯೆ ॥ ಇಂತು ನಿನ್ನೊಳರುಹಬಂದೆ । ನೆಲೆತಾಯೆ । ಮನದಿ । ಚಿಂತಿಸದೆಪರಸಿಕಳುಹಿ । ಸೆಲೆತಾಯೆ ॥ ೨ ॥

॥ ರಾಗ ತೋಡಿ—ಅಷ್ಟತಾಳ ॥

ತರವೇನೋ । ಬಾಲ । ತರವೇನೋ ॥ ಪಲ್ಲವಿ ॥ ತರವೇನೋನೀ ಧುರಕೈದುವ ಮಾತು । ಅರುಹರುಹಿನ್ನೊಮ್ಮೆ ಕೇಳುವೆನಿಂತು ॥ ಅನು ಪಲ್ಲವಿ ॥ ಇರುಳುನಿಟ್ಟಿಸಿದ ಬಾವಿಯಕಂಡುದಿವದಿ । ನೆರೆಧುಮುಕುವ ರುಂಟೆ ವೈಕುಂಠ ನಿಜದಿ ॥ ತರಣಿಕುಲೇಂದ್ರಕೇಳ್ ದಿವಿಜರಾಯತವಿ । ಹರಿವಂಶರೈಸೆ ನೀಭ್ರಮಿಪೆಯ ಮನದಿ ॥ ೧ ॥ ಸೊರಜುಗಳುರುಬೆ ಮಂದರ ಜರಿದಪುದೆ । ಇರುವೆ ವಾರಿಧಿಯನ್ನು ಕುಡಿದುತೇಗುವುದೆ ॥ ಧುರಧೀರರ ನಿಬರುನಿನ್ನಿಂದಹಿಂದೆ । ತೆರಳಿದರ್ನೋಡಿಸಂಗರಕೈದು ಮುಂದೆ ॥ ೨ ॥

ಹೀನವಿಕ್ರಮನೆ ನಿನ್ನಪ್ಪಕೇಳ್ಮಗನೆ । ತಾನತಿಕಾಯನೋಡಿದಡಲ್ಪ ಬಲನೆ ॥ ನೀನೀಗ ಪೋಗೆ ರಾಘವ ಬೆದರುವನೆ । ಏನೆಂಬೆನಿಂಥದುರ್ಮತಿಗೆ ಸುಗುಣನೆ ॥ ೩ ॥

॥ ರಾಗ ಕೇತಾರಗೌಳ—ಅಷ್ಟತಾಳ ॥

ಮಾತೆ ಚಿತ್ತೈಸು ನೀ । ನೀತರ ಪೇಳ್ವುದು । ನೀತಿಯೆತಿಳಿಯೊಮ್ಮೆಗೆ। ತಾತನಕೊಂದ ದು । ರ್ನೀತಿಗಾರನಗೆಲ್ಲ। ದಾತರಳನೆ ಪಿತಗೆ॥ ೧ ॥ ಖರೆಯಹುವಹುದು ಕೇಳು । ತರಳನೀನೆಂದುದಾ । ದರು ಪೇಳ್ವೆ ಬಲವಂತರ॥ ನೆರೆತೊಡೆವುದು ದುರ್ಬ । ಲರಿಗೊಳ್ಳಿತೇ ಪೇಳು । ಮರುಳಾಟ ಬಿಡುಕುವರ ॥ ೨ ॥ ಭಳಿರೆ ಕೇಳಮ್ಮ ದು। ರ್ಬಲರೆನಾವಸುರರು। ತಳುವದೆ ಮಾನವರ॥ ಸುಳಿವಕಂಡಲ್ಲಿ ಗಂ। ಟಲಕೊಯ್ದು ನುಂಗುವ। ಕ್ರೀಳಿಯೆಂತು ಪೇಳುತ್ತರ ॥ ೩ ॥ ತಿಳಿದಕಾರಣದಿಂದ। ತಿಳುಹಿದೆ ಕಂದ ಕೇ । ಳಿಳೆಯ ಮಾನವನೆ ರಾಮು॥ ನಳಿನಾಕ್ಷನೊಳು ನಿನ್ನ। ಛಲಬೇಡಸಾರಿದೆ। ಖಳಕುಲ ಸಾರ್ವಭೌಮು ॥ ೪ ॥ ಸಾರಿಹುದಹುದಮ್ಮ ಕೇಳಿಂದುಧುರದಿನಾ । ವಿೂರಿ ದರಿಗಳನೊತ್ತ ॥ ಸೂರೆಗೊಳ್ಳದಿರೆ ಕು । ಮಾರನೆನಿನಗೆನ್ನ। ಭೋರನೆ ಕಳುಹೆಯತ್ತ ॥ ೫ ॥

॥ ವಾರ್ಧಕ ॥

ಮತ್ತೆ ಕೇಳಂಬೆ ಶ್ರೋತ್ರಿಯನಿಲ್ಲದಾಮುಖಂ । ಚಿತ್ತೋದ್ಭವನ ಕರುಣವೆತ್ತಿರದ ಸಂಮೋಹ । ಮತ್ತ ಕರಚರಣಗತ ಸಪ್ತಿಗಳು ವಿನಿತಿಳಿಯೊಳಿದ್ದೇನ್ಫಲಂ ವೀರನು ॥ ತತ್ತಬಲವಿರಲಹಿತರಂ ನಿರಿಯ ಲಿರಿಸಿಕೊಳ । ದೊತ್ತೆ ಪೌರುಷವಿರ್ದಲೇನಿಲ್ಲದಿರ್ದಲೇನ್ । ಚಿತ್ತಚಂಚಲವ ಬಿಡುಬಹೆನೆಂದು ಬಳ್ವಿನಿಂದೆದ್ದುನೇಮವಗೊಂಡನು ॥ ೧ ॥

॥ ಕಂದ ॥

ಅರ್ಬುದಸಂಖ್ಯೆಯಸರಿಭಟ । ಕರ್ಬುರದಳದೊಳುರಿಪುಸ್ತಂಭಂ ಕಲಿಕುಂಭಂ ॥ ಸರ್ಬಾಯತಘುರ ಕಣಕಂ । ಶರ್ಬನ ಪೊಲುವರೂಥವ ನಡರುತವಿುಗೆ ಪೊರಟಂ ॥ ೧ ॥

॥ ರಾಗ ಮಾರವಿ—ಏಕತಾಳ ॥

ಆಗಲೆ ಕಲಿಯೂಪಾಂಬಕರಣಕನು। ವಾಗುತಭರದಿಂದ ॥ ಬೇಗದಿರಥವನು ಹಾರಿಸುತವನೆಡ। ಭಾಗದಿನೆರೆನಿಂದ ॥ ೧ ॥ ಕುಂಭಾನುಜರು

ನಿಕುಂಭಕವಿಗೆ ಶೋಣಿ । ತಾಂಬಕರೆಂಬವರು ॥ ಸಂಭ್ರಮದಲಿಬಿಲು ಗೊಂಬಾತೇರ್ಗಳೊ । ಳುಂಬರುತಾಖಳರು ॥ ೨ ॥ ಅಗ್ರಭವನೆಕೇಳರಿ ಗಳೊಳಿಂದಿನ । ವಿಗ್ರಹಕೆನ್ನುವನು ॥ ಶೀಘ್ರದಿ ಕಳುಹಿಪರೀಕ್ಷಿಪುದಿನ್ನು ಸ । ಮಗ್ರದಸತ್ವವನು ॥ ೩ ॥ ಎಂಬ ನಿಕುಂಭನಮಾತಿಗೆ ಖಳಶೋಣಿ । ತಾಂಬಕ ನೆಲೆಯಣ್ಣ ॥ ಕೊಂಬೆನುಕಪಿಸೇನಾನಿಯಧುರ ಸಂ । ರಂಭಕೆ ಕಳುಹೆನ್ನ ॥ ೪ ॥ ತಕ್ಕುದನಾಡಿದಿರೆನ್ನಯನಡವಳಿ । ತಕ್ಕೆ ಸರಿಯುಮಾತ । ತಕ್ಕವರ್ಗೆ ಭಳಿರೆನುತವರೊಡವೆರ । ದುಕ್ಕಿತ ಉನ್ಮತ್ತ ॥ ೫ ॥

॥ ವಾರ್ಧಕ ॥

ಪೊಂದೇರಡರ್ದುನಾಲ್ವರುದೈತ್ಯರಬ್ಬರದಿ । ಮುಂದುಲಿವರಣಕಹಳೆ ಗಳನಿನಾದದಲಿ ಭೋ । ರೆಂದುರಿವಕಾಳರಕ್ಕಸ ಗಡಣದೊಳು ತೊಳಪ ಕಾರ್ಮುಗಿಲ ಮಿಂಚಿನಂತೆ॥ ಗೊಂದೆವಳವಿಗೆಯನೋಲುದ್ದಂಡ ಕಾರ್ಮುಕವ । ನುಂಧರಿಸಿ ಕಲಿಕುಂಭನ ಹಿತಗಿರಿವಜ್ರವೆಂ । ಬಂದದೊಳು ದುರ್ಗವಿಳಿದೈದಿದಂ ಖಳವರ್ಗಭೋರ್ಮೊರೆದುಪಿಂದೆ ಬರಲು ॥ ೧ ॥

॥ ಭಾಮಿನಿ ॥

ಅಸುರಬಲಬಲುಭಾರದಲಿಧರೆ । ಕುಸಿದುದೋಕುಲಶೈಲಜರಿದುದೊ । ಉಸಿರಲೆನ್ನಳವಲ್ಲಗಜರಥ ತುರಗಪಾದಾತಿ ॥ ವಿಸರವಬ್ಧಿಯೊಳುರೆತರಂಗ । ಪ್ರಸರಬಹವೋಲ್‌ಬಹುದಕಂಡಾ । ಬಿಸುಗದಿರಕುಲಭವನು ಕೇಳಿದನಾವಿಭೀಷಣನ ॥ ೧ ॥

॥ ರಾಗ ಕಾಂಭೋಧಿ—ಏಕತಾಳ ॥

ಎಲೆ ವಿಭೀಷಣಾಂಕಬರುವ । ಬಲುಭಟರನುನೋಡ ॥ ಜಲಧಿಯಿಂದ ತೆರೆಬಪ್ಪಂತೆ। ನಲಿದುಬರುವಪಾಡ ॥ ೧ ॥ ರಥದೊಳದಕೊ ಭರದಿ ತ್ರಿಪುರ । ಮಥನನಂತೆ ನಿಂದ ॥ ರಥಿಕನಾವನವನ ಹಿಂದೆ । ಪೃಥುಲ ಕಾರ್ಯದಿಂದ ॥ ೨ ॥ ವ್ಯಥೆಗೊಳಿಸುವರಾರುಪೇಳು । ಕಥೆಯನೆಂಬ ದನುಜ ॥ ಮಥನಗೆರಗಿಪೇಳ್ದಲಂಕಾ । ಪೃಥಿವಿಪಾಲನನುಜ ॥ ೩ ॥

॥ ರಾಗ ಕೇತಾರಗೌರ—ಅಷ್ಟತಾಳ ॥

ಚಿತ್ತಾವಧಾನಪರಾಕುರಕ್ಕಸವೈರಿ । ತತ್ತರಗೊಳದಿರಯ್ಯ ॥ ಚಿತ್ತಜಾರಿಗೆ ಸೋಲರಿವರು ಸಂಗರಮದ। ಹತ್ತಿದಸುಭಟರಯ್ಯ ॥ ೧ ॥ ಅಂಬುಜದಳನಿಭನೇತ್ರಕೇಳಾಖಳ । ಕುಂಭಕರ್ಣಾತ್ಮಜರು ॥ ಕುಂಭನಿಕುಂಭ

ಯೂಪಾಂಬಕವಿಗೆಶೋಣಿ । ತಾಂಬಕರೆಂಬವರು ॥ ೨ ॥ ಇರುಳಿನಾಜಿ ಯೊಳಿಂದು ಗೆಲಿದನಮ್ಮವರನೀ । ದುರುಳಕುಂಭಾಖ್ಯಕಾಣ್ಕೆ ॥ ಧುರಧೀರ ದಶಕಂಠಗತಿಹಿತಪ್ರಬಲ ನಿ । ಷ್ಠುರ ಜಾಣಮತ್ತೆ ಕೇಳ್ಕೆ ॥ ೩ ॥ ವೀತಿ ಹೋತ್ರನಜಪದಾತನು ಪ್ರತಿಯಗ್ನಿ । ಯಾತೆರಧುರರಂಗದಿ ॥ ಈತನಗೆಲು ವಂಥ । ರೀತಿಯೆಂತೆನಲಿನ । ಜಾತನೆರಗಿಪಾದದಿ ॥ ೪ ॥

॥ ರಾಗ ಮಾರವಿ—ಏಕತಾಳ ॥

ಯಾಕಿನಿತೆಂಬುದುಖಳ ಕುಲತಿಮಿರ ಪ್ರ । ಭಾಕರನಾನಿರಲು ॥ ಸಾಕೆನಿಸುವೆ ರಿಪುಗಳನುವಿಭಾಡಿಸಿ । ಶಾಕಿನಿಯರಿಗುಣಲು॥ ೧ ॥ ಕುಂಭಾ ಸುರನ ಬಲಾಂಬುಧಿಕುಂಭಜ। ನೆಂಬ ಬಿರುದನಿಂದೆ ॥ ಕುಂಭಿನಿಯೊಳುನಾ ತುಂಬುವೆ ಸೋಡಬು । ಜಾಂಬಕನೆನಲಿರದೆ॥ ೨ ॥ ಆದಡೆ ನೀನೀ ಬಾರಿ ಮದಾಂಧರ । ಛೇದಿಸಿಬಿಸುಡೆನುತ ॥ ಮಾಧವ ಪರಸುತಕಳುಹಲು ಕಪಿ ಪಡೆ । ಗೋದಿದನಿನಜಾತ ॥ ೩ ॥

॥ ರಾಗ ಮಧ್ಯಮಾವತಿ—ಏಕತಾಳ ॥

ಕೇಳಿವನೌಕಸವರರೆನ್ನಮಾತ । ಗಾಳಿನಂದನ ನೀಲಾದಿಗಳೆಲ್ಲನಿರತ ॥ ಪಲ್ಲವಿ ॥ ಇಂದಿನಾಹವ ಭಾರ । ಬಂದುದೆಮ್ಮಯಭಾಗ । ಕಂದದಿಂದಿರ ದೇಳಿ । ನಿಂದಿರಬೇಡಿ ॥ ಬಂದನಿಷ್ಠೂರಮ । ದಾಂಧಸಮುಗ್ರರೊ । ಳ್ಮುಂದೆ ನಿಮ್ಮಯಶೌರ್ಯ । ಮುಂದೋರಿ ಪೊಯ್ದಾಡಿ ॥ ೧ ॥ ಕೆಡಹಿರಣಾಂಗಣ । ದೆಡೆಯೊಳವರ ಕರು । ಳುಡಿಸಿ ತೋರಣದಿಂದ । ಲೆಡೆಬಿಡದುರಿದು ॥ ಪಿಡಿದೌಕಿಜಯಲಕ್ಷ್ಮಿ । ಗೊಡೆಯರೆನಿಸಿ ಸುಖ । ಕಡಲೊಳಾಳುವ ಬಲು । ಮಿಡುಕುಳ್ಳಭಟರಿಂದು ॥ ೨ ॥

॥ ರಾಗ ಶಂಕರಾಭರಣ—ಮಟ್ಟೆತಾಳ ॥

ಜಡಜಸಖಕುಮಾರನೆಂದ । ನುಡಿಯಕೇಳುತುರುಸಮರ್ಥ । ಪಡೆ ಗಳರಸಹನುಮಮುಖ್ಯ । ರೊಡನೆಗಜರುತ । ಮೃಡನಿವಾಸ ಶಿಖರಸರಿಯ । ಪೊಡವಿಧರಮಹೀಜ ಕಲ್ಲ । ಗಡಣಧರಿಸಿ ಯುದ್ಧಕಣದಿ । ಸಿಡಿಮ ಪರ್ಬುತ ॥ ೧ ॥ ಮೊರೆಯುಲಡನುಕಂಡು ದೈತ್ಯ । ತರಳಕುಂಭನಾಜ್ಞೆ ಯಿಂದ । ಉರುವಿರೋಧಪೆತ್ತು ದನುಜ । ರುರುಬುತಾಗಳು ॥ ಬಿರುಸ ತೋರಿರಿಲವೊ ಕಲ್ಲ । ಮರಗಳಣ್ಣರೆನುತ ಬಲುಕಾ । ಹುರತೆಯಿಂದ ಸರಳಮಳೆಯ । ಸುರಿದು ತಾಗಲು ॥ ೨ ॥ ಚೂಣಿಯಲ್ಲಿ ಮುಂದುವರಿವ ।

ಕೌಣಪರನುಹನುಮನೀಲ । ಜಾಣನಂಗದಾದಿಭಟರ । ಶ್ರೇಣಿ ಮುಸುಕುತ ॥ ಕೇಣದೊಳಗೆ ಸವರುತಿರಲು । ಕಾಣುತಲಿಯೂಪಾಕ್ಷನಾಗ । ಬಾಣಗೊಂಡು ತರಿವುತಿರದೆ । ಮೇಣುಕನಲುತ ॥ ೩ ॥

॥ ವಾರ್ಧಕ ॥

ಸೊಕ್ಕಿ ಕಪಿವಾಹಿನಿಯನಟ್ಟಿದಂ ಮೆಟ್ಟಿದಂ । ಮಿಕ್ಕ ಬಲಶಾಲಿಗಳ ಧಟ್ಟಿದಂ ಕುಟ್ಟಿದಂ । ಸಿಕ್ಕಿದರ ಹಿಡಿಹಿಡಿದು ತಿಕ್ಕಿದಂ ಮುಕ್ಕಿದಂ ದೆಕ್ಕತುಳ ಶೌರ್ಯದಿಂದ ॥ ಸೊಕ್ಕಾನೆ ಕೊಳಕದಡುವಂದದಿಂಬಂಧದಿಂ । ದುಕ್ಕಿ ಖಳನೈತಹುದ ಕಾಣುತ್ತ ಮೇಣತ್ತ । ತಕ್ಕಭಟಕಪಿ ದ್ವಿವಿಧ ತಡೆದೆಂದ ಕಡುಹಿಂದ ಮುಕ್ಕಣ್ಣನಂದದಿಂದ ॥ ೧ ॥

॥ ರಾಗ ಘಂಟಾರವ—ಅಷ್ಟತಾಳ ॥

ನಿಲ್ಲುನಿಲ್ಲೆಲೊ ಘಡನಕ್ತಂಚರವೀರ । ಎಲ್ಲಿಗೈದುವೆಮಲ್ಲ ಪ್ರತಿಭಟ । ರಲ್ಲವೇನಾವೆಂದನು ॥ ೧ ॥ ಮರುಳುಕೋಡಗ ನೀನೊಮ್ಮೆ ತಡೆವೆಯ ॥ ಸುರಪ ದ್ರುಹಿಣಾದ್ಯರುಗಳೆನ್ನುಂ । ತರಕೆ ನಡುಗುವರರಿಯೆಲಾ ॥ ೨ ॥ ಬಲ್ಲೆಬಲ್ಲೆ ದಿವೌ । ಕಸರನು ಗೆಲ್ದ ॥ ಬಲ್ಲವಿಕೆತೋರೀವನೌಕಸ । ನಲ್ಲಿಸೆಣಸಿದು ಬದುಕೆಲಾ ॥ ೩ ॥ ಈಸುವಿಕ್ರಮನಹೆಯು ನೋಡಾದಡೆ ॥ ಈಸುಸತ್ವವನೆನುತಖಳ ಶಶಿ । ಹಾಸವನು ಕೊಂಡೆರಗಿದ ॥ ೪ ॥ ತಡೆದು ಗಾಯುವ ಪುಟನೆಗೆದುರುಶೈಲ । ಝುಡಿಯೆರಿಪು ಶಿರ । ವೊಡೆದು ನೆತ್ತರು । ಬುಡುಬಡಿಸೆಸರ್ವಾಂಗದಿ ॥ ೫ ॥

॥ ಭಾಮಿನಿ ॥

ಸುರರು ಕಂಡುಬ್ಬರಿದು ಹೂವಿನ । ಸರಿಯ ಸುರಿದರುದ್ವಿವಿಧನಂಗದೊ । ಳಿರದೆ ಬಳಿಕದ ಕಂಡುನೆರೆಕ್ರೋಧಾಗ್ನಿ ಧಗಧಗಿಸೆ ॥ ಧರಣಿಮಂಡಲ ಬಿರಿಯುವೋಲ । ಬ್ಬರಿಸುತಗ್ಗದ ಶೋಣಿತಾಕ್ಷನು । ಧುರಕೆಮಿಂಚಲು ತಡೆದನಗ್ನಿಕುಮಾರನಿಂತೈಸೆ ॥ ೧ ॥

॥ ರಾಗ ಭೈರವಿ—ಏಕತಾಳ ॥

ಎಲೆರಾತ್ರಿಂಚರವರನೆ । ನಿ । ಲ್ಲಲಸದೆ ಧುರಕೆನ್ನೊಡನೆ ॥ ಚಲಿಸುವೆ ಮುಂದಾವಲ್ಲಿ । ಭುಜ । ಬಲವ ಪರೀಕ್ಷಿಪೆನಿಲ್ಲಿ ॥ ೧ ॥ ಮೆಚ್ಚಿದೆ ನಿನ್ನಯನುಡಿಗೆ । ಮದ । ಹೆಚ್ಚಿದಕರಿಯಹೆನೆನಗೆ ॥ ಬೆಚ್ಚಿಸುವೆಯ ಮಾತಿನೊಳು । ಶರ । ದಚ್ಚಸವಿಯನೋಡೆನಲು ॥ ೨ ॥ ಕೇಡಿಗರಾವಣ ಸೋರ್ವ ನಿ । ಷ್ಕೇಡಿಗರ್ಯೆನೀಸರ್ವ । ರೂಢಿಪತಿಯ ಮರೆಹೊಕ್ಕು । ಖಯು ।

ಖೋಡಿಲ್ಲದೆ ನೀ ಬದುಕು ॥ ೩ ॥ ಅಳುಕೆನು ತನು ನಿಶ್ಚಯವೆ । ಇಂ ।
ದುಳಿದರು ನಾಳೆಯೊಳಾವೆ ॥ ಅಳಿವುದೆ ಕೀರ್ತಿಯಶೇಷ । ಬಿಡೆ । ಕೊಳು
ಗುಳದಲಿಸೋಡೀಸ ॥ ೪ ॥ ನೋಡಾದಡೆ ಖಳಕಪಿಯು । ಧುರ । ಪಾಡನು
ಮಡಿದವರೆಡೆಯು ॥ ಬೇಡಿಕೊ ಬೇಗದೊಳೆನುತ । ಶಿರ । ಗಾಢದಿತಿವಿದನು
ಮತ್ತ ॥ ೫ ॥

॥ ಭಾಮಿನಿ ॥

ತಪ್ಪದೀನುಡಿಯೆಂದುಖಳದಿವ । ಕೊಪ್ಪಿದನು ಕೇಳಣುಗಲವನಿ ।
ನ್ನಪ್ಪಸಲೆ ಬಾಯ್ದಣಿಯೆ ಕೊಂಡಾಡುತಲಿದಳಪತಿಯು ॥ ಅಪ್ಪಲರಳನು
ಸುರಿದರಮರರು । ಕಪ್ಪಡವ ಸುತಗಿತ್ತ ಶಿಬಿಕಂ । ಡುಪ್ಪರಿಸಿ ಬರಲಾನಿ
ಕುಂಭನ ತಡೆದ ಹನುಮಂತ ॥ ೧ ॥

॥ ರಾಗ ಮಾರವಿ—ಏಕತಾಳ ॥

ಬಾರೆಲೊ ರಕ್ಕಸ ಪೋರನೆ ಹನುಮನ । ಭಾರಿಕರಾಯುತದ ॥
ಸಾರಪರೀಕ್ಷೆಗೆ ತಾರದೆ ಘಡಘಡ । ಸಾರದಿರೈಮುಂದಾ ॥ ೧ ॥ ಬಡ
ಮರ್ಕಟ ವಾಲಧಿಯನು ಸುಡಿಸಿಕೊಂ । ಡೊಡಸೋಡಿದಪ್ರೌಢ ॥ ಕಡು
ಹನುಮರೆಯುದಿರೆಸ್ನೊಳು ಕರೆನಿ । ಸ್ನೊಡೆಯನ ನಡೆಮೂಢ ॥ ೨ ॥
ಧಿರುರೆ ಶಾಭಾಸೆಲೆ ಪಾಮರ ಹೊಳೆಯು । ತ್ತರಿಸದೆ ಜಲನಿಧಿಯ ॥ ಪರಿ
ಲಂಘನಕಂಗೈಸೆಯುಗೆಲಿದೆನ್ನ । ನೆರೆಕೇಳ್ ರಘುಪತಿಯ ॥ ೩ ॥ ಎನುತ
ವನೆರಗಿದ ಹತಿಯನು ಸೈರಿಸಿ । ಹನುಮನ ವಕ್ಷವನು ॥ ಬಿನುಗನೆತೊಲ
ಗದಿರೆಂಪಾಗದೆಯಿಂ । ಕನಲಿಬಡಿದಖಳನು ॥ ೪ ॥ ಘಡಧಡಿಸುತಬಿಸ್ದೊಡನಾ
ವಿಲಯದ । ಸಿಡಿಲಂದದೊಳೆದ್ದು ॥ ಕಡೆನಿನಗೆಂದಾ ದಡಿಗನಶಿರ ತಿವಿ ।
ದಡೆಯುಸುಮೇಲ್ವಾಯ್ದು ॥ ೫ ॥

॥ ಭಾಮಿನಿ ॥

ನಡೆಯೆಸುರಪುರಿಗಾಗಸುರುಷೋ । ದ್ಧಡದಿಹನುಮನ ಹೊಗಳಿ
ಸುಮನುಳೆ । ಬಿಡುನಯುನರುರುಳಿಸಿದರಿನಿತನು ಕಂಡು ಕಲಿಕುಂಭ ॥
ಕಡೆಯ ಭೈರವನಂತೆಕಣ್ ಕೆಂ । ಪಡರೆರಥವೇರ್ದೊಡನೆ ಶರಗಳ ।
ಝುಡಿದುವಾತೋದ್ಭವನ ತಡೆದಿಂತೆಂದಖತಿಯಿಂದ ॥ ೧ ॥

॥ ರಾಗ ನಾದನಾಮಕ್ರಿಯೆ--ಅಷ್ಟತಾಳ ॥

ಫಡಫಡ ಪಟುಭಟನಾದೆಲಾ । ಮರ । ಗಿಡಗಳಚರಿಸುವುದುಳಿ
ದೆಲಾ ॥ ಕೆಡಹಿನಿಕುಂಭನರಣದೊಳು ॥ ಎತ್ತ । ನಡೆವೆಯ ಬಿಡುನಿಲ್ಲು

ಎನ್ನೊಳು ॥ ೧ ॥ ಅಹಹ ಮೆಚ್ಚಿದೆ ನಿನ್ನ ಮಾತಿಗೆ । ಮತ್ತೆ । ವಿಹಿತ ಸಂಗ್ರಾಮದ ರೀತಿಗೆ ॥ ಅಹಿಖಗರಾಜನ ಗೆಲುವುದೆ । ನಿನ್ನ । ಬಹುಶರ ವೆಮ್ಮನು ತಡೆವುದೆ ॥ ೨ ॥ ಇನಿತಪ್ಪಭಟನೆ ನಿಲ್ಲೆಲೊ ಕೋತಿ । ಎನ್ನ । ಅನುವರ ನೋಡೆನುತಲಿ ಖಾತಿ ॥ ಘನದಿಂದಶರತತಿಮುಸುಕಿದ । ಕಾದಿ । ಹನುಮನರಣದೊಳು ಮುಸುಕಿದ ॥ ೩ ॥

॥ ಕಂದ ॥

ಪರಿಭವಿಸಿದು ಮಾರುತಿಯಂ । ಧುರದೊಳು ನಳನೀಲರ ಪಲ್ಗಿರಿ ಸುತ ಮುಂದೈ ॥ ತರುವ ಭಟೋತ್ತಮನಂತಡೆ । ದುರೆ ಜರೆದನುರಿಪು ಕಾಲಗ್ರೀವ ಸುಗ್ರೀವಂ ॥ ೧ ॥

॥ ರಾಗ ಭೈರವಿ—ಅಷ್ಟತಾಳ ॥

ಕಲಿಕುಂಭನಹುದೊನೀನು । ಸಂಗ್ರಾಮದಿ । ಕಲಿತಸುಪ್ರೌಢಿಯನು ॥ ಸಲೆತೋರಿರಿಪು ಮೇಘ ಮರುತನಾಬಂದೆಕೋ । ಮಲಪದ್ಮ ಸಖಸುತನು ॥ ೧ ॥ ತರಣಿಜನ್ನೈಸೆನೀನು । ಭಾಸ್ಕರ ಕುಲ । ದರಪಿನ ಪ್ರಿಯಸಖನು ॥ ಮರುತಪಾವಕರಂತೆ ನೀವ್ ಮಿತ್ರರಾದುದ । ಚ್ಚರಿ ತೊಲಗದಿರೆಂದನು ॥ ೨ ॥ ಮೂಕ್ಯೊಕರ್ಕೈಖಳರು । ನಿನ್ನಪ್ಪನ । ಕ್ಯೊಕತನವ ಕಂಡಿರು ॥ ಯಾಕೆಲೊರಣಭಂಡನಿಲುನಿಲು ಶಿರಕೀಗ । ತಾಕ್ಯೊಕನಹೆನಿಂದಿರು ॥ ೩ ॥ ಅಕಟ ಮತ್ತಾತನನು । ಭಂಗಿಸಿದ ವೈ । ಪಿಕದ ಹೆಗ್ಗಳಿಕೆಯನು ॥ ಸಕಲ ತೋರಣ್ಣನ ಕೊಲಿಸಿದ ದ್ರೋಹಿ ನಾ । ಪಿಕಕೆ ಮಸ್ತಕಗೊಂಬೆನು ॥ ೪ ॥ ಬಗುಳದಿರೆಲವೊ ಮೂಢ । ನೋಡಾದರೊ । ವ್ಮೆಗೆನಮ್ಮ ಸಮರ ಪಾಡ ॥ ಹಗರಣದಿರುಳ ಗರ್ವವ ತೋರೆನುತ ಮುಷ್ಟಿ । ಬಿಗಿದೆರಗಿದ ಕುಂಭನ ॥ ೫ ॥ ಎಷ್ಟುಸಾಹಸಗೊಂಡರು । ನಿನ್ನನು ಫಡ । ಹುಟ್ಟು ಮರ್ಕಟನೆಂಬರು ॥ ದಿಟ್ಟತನವ ನೋಡೆನುತ ಗದೆಯಿಂದಿಡೆ । ಸೃಷ್ಟಿಗಿನಜಬಿದ್ದನು ॥ ೬ ॥

॥ ವಾರ್ಧಕ ॥

ಮೀರಿದಂಕಪಿಪತಿಯ ವಾನರ ಮಹಾಬ್ಧಿಯಂ । ಬೀರಿದಂತನ್ನಶರ ವಡಬಾಗ್ನಿಯಿಂ ಖಳಂ । ಏರಿದಂ ಖತಿಶಿಲೋಚ್ಚಯವಮಿಗೆ ರಘುಜನಂ ಸಾರಿದಂ ಬಲುಭರದೊಳು ॥ ತೂರಿದಂ ಬಾಣೌಘಮಾಗಸೀತಾಧವಂ । ಕಾರಿದಂ ಕಣ್ಕಿಡಿಯ ಕೋದಂಡ ಧ್ವಾನವಂ । ತೋರಿದಂ ಭುವನ ತ್ರಯಂ ನಡುಗೆ ಕುಂಭಜಂ ಜಾರಿದಂ ಕೊಳ್ಳೆಂವನು ॥ ೧ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಏನೆಲವೊರಿಪುವೆಂದು ಗಾಳವ । ಮಿಾನುನುಂಗಿದು ಬಾಳ್ವುದೇಖಳ । ನೀನು ನಮ್ಮಾಹವದೊಳುಳಿವ ವಿಧಾನಪೇಳ್ಳೈ ॥ ೧ ॥ ಎನಲು ರಘುವರ ಗೆಂದ ಕೇಳ್ ನರ । ಮನುಜಕುರಿಮದವೇರಲಾನೆಯ । ಹನನ ಗೈವುದೆ ಸೆಣಸಿನೋಡೆ । ನ್ನನುವರವನು ॥ ೨ ॥ ಆದಡಿದ ಕೊಳ್ಳೆಂದು ಬಾಣ ಮ । ಹೋದಧಿಯ ಕೆದರಿದನು ರಾಘವ । ಭೇದಿಸಿದ ಖಳನರಿಯಶರ ನಡು । ಹಾದಿಯಿಂದ ॥ ೩ ॥ ಚಂಡಬಲಸೌಮಿತ್ರಿಮಿಗೆಮುಂ । ಕೊಂಡೊ ದಗಿ ರಘುವರನಬೆಸ ಕೈ । ಕೊಂಡು ಧನುರ್ಝೇಂಕರಿಸಿ ವೈರಿಯ । ಕಂಡು ನುಡಿದ ॥ ೪ ॥ ಜಗದದೈವದ ಕೂಡೆ ಕದನವ । ನೆಗಳುವರೆ ಫಡಖೋಡಿ ರಕ್ಕಸ । ಬಗೆಯನೋಡಾಲಕ್ಷ್ಮಣಾಂಕನ ಖಗವಿದೆನಲು ॥ ೫ ॥

॥ ರಾಗ ಶಂಕರಾಭರಣ—ಅಷ್ಟತಾಳ ॥

ಪೋರಲೇಸಾಯ್ತೆನ್ನಕೈಗೆ । ಭೋರನೆ ಸಿಕ್ಕಿದೆಮತ್ತೆ । ನಾರಿ ಮೂಗ ಕೊಯ್ದ ಹಮ್ಮ । ತೋರುನೋಳ್ಪೆನು ॥ ೧ ॥ ತೋರಲೇನುಂಟಿಲೊಖುಲ್ಲ । ನಾರಿಮೂಗಕೊಯ್ದೆನೆಂದು । ವಿಾರಲಿಂದು ನಿನ್ನ ತಲೆ ಜ । ಜ್ಜಾರ ಮಾಳ್ಪೆನು ॥ ೨ ॥ ಭಳಿರೆ ಶೂರನಹುದೊ ಕೊಳು । ಗುಳದೊಳತಿಕಾಯ ನಸುವ । ಸೆಳೆದಗರ್ವತೋರೆ ನಿನ್ನ । ನುಳಿಯಗೊಡೆನೆಂದ ॥ ೩ ॥ ಉಳಿಯ ಗೊಡೆನೆಂಬಹಮ್ಮಿ । ಸೊಳವಬಲ್ಲೆ ರಾತ್ರಿ ಕೋತಿ । ಗಳನುಗೆದ್ದ ಪ್ರೌಢ ಕಯ್ಯ । ಚಳಕತೋರೆಂದ ॥ ೪ ॥ ನೋಡುನೋಡಾದಡೆನುತ್ತ । ಮೂಡಿ ಗೆಯಿಂ ಪೊಸಮಸೆ । ಗೂಡಿದನಾರಾಚಜಾಲ । ಕೂಡೆ ತೆಗೆದೆಚ್ಚ ॥ ೫ ॥ ಗಾಢದಿಂ ಸೌಮಿತ್ರಿ ತುಂಡು । ಮಾಡಿಯದಸರಳೆಚ್ಚು । ಝೂಡಿಸಿದ ವೈರಿತೇರ । ನಾಡಲೇನ್ ಪೇಚ್ಚು ॥ ೬ ॥

॥ ಭಾಮಿನಿ ॥

ರಥ ಮುರಿಯೆಬೇರೊಂದು ಪೊಸಮಣಿ । ರಥದಿಮಿಂಚಲುಕಡಿದ ನಿಂತರಿ । ರಥಸಹಸ್ರವತರಿದುವಿರಥನ ಗೈದಡಾಖಳನು ॥ ಪೃಥಿವಿಕಂಪಿಸು ವಂತೆ ಗರ್ಜಿಸಿ । ಪೃಥುಲಬಲನಿಂದೊಡನೆ ತ್ರಿಪುರರ । ಮಥನನೋಲ್ ಕಿಡಿಗೆದರುತೆಚ್ಚನಿಕುಂಭಿಳಾಸ್ತ್ರವನು ॥ ೧ ॥

॥ ರಾಗ ಮಾರವಿ—ಏಕತಾಳ ॥

ಅಚ್ಚರಿಯದನೇನೆಂಬೆನುಕುಶಕೇಳ್ । ಕಿಚ್ಚಿನಸಮಯದಿಂದ ॥ ಬೆಚ್ಚಿ ತುತ್ರಿಭುವನಖಳಹುಂಕರಿಸಿ ಕಾ । ಳ್ಕಿಚ್ಚಿನ ಪೋಲ್ನಿಂದ ॥ ೧ ॥ ಅದಕಾ

ಬೆಚ್ಚುವ ಚದುರನೆ ಲಕ್ಷ್ಮಣ । ನುದಧಿಯ ಮಂತ್ರಾಸ್ತ್ರ ॥ ಕೆದರಿದುಗೆಲಿ ದಾಶಿಖಿಯನು ನಿಲ್ಲೆಲೊ । ಮದಮುಖ ಏನೆಂದ ॥ ೨ ॥ ಏನೆಲೊನರ ಗುರಿಹೀನಿಪೆಶರಸಂ । ಧಾನ ವಿದೇಯೆನುತ ॥ ಆ ನಿಯತಿಯು ಶರವೆಚ್ಚಡೆ ಶಶಿಧರ । ಧ್ಯಾನದಿಗೆಲೆಧೂರ್ತ ॥ ೩ ॥ ಮತ್ತಾತಿಮಿರಭುಜಂಗಾಸ್ತ್ರಗಳನು । ಮುತ್ತಲುಹರಿಗರುಡ ॥ ಸತ್ವದಿಗೆಲಿದಾಖಳ ಕಾರ್ಮುಕವನು । ಕತ್ತರಿಸಲು ಜರೆದ ॥ ೪ ॥ ಪೂತುರೆಲಕ್ಷ್ಮಣ ಧನುಮುರಿದಡೆನಾ । ಸೋತೆನೆ ತೊಲಗದಿರು ॥ ಆತುಕೊಗದೆಯಿದರಾತಿಶಯವನೆಂ । ದಾತನುಲಿಯುಲಿದಿರು ॥ ೫ ॥

॥ ಭಾಮಿನಿ ॥

ಎದ್ದು ರವಿಸುತನನಿತರೊಳು ನಿಂ । ತಿದ್ದ ರಘುಜಾನುಜನ ಕಂಡಿದು । ಪೊದ್ದಿನೇಮವ ಹಾವಿಗೆರಗುವ ಹದ್ದಿನೋಲತ್ತ ॥ ಗದ್ದರಿಸುತೈತಂದು ಖೂಳನ । ಗುದ್ದಿದನು ಕೋಪದಲಿ ಧರೆದನಿ । ಹೊದ್ದಲವಬಿದ್ದೇಳ್ದು ನಿಂದಿರೆಪೇಳ್ದನರ್ಕಸುತ ॥ ೧ ॥

॥ ರಾಗ ಶಂಕರಾಭರಣ— ಅಷ್ಟತಾಳ ॥

ಎಲೆ ಮದಾಂಧನಿನ್ನಶೌರ್ಯ । ಜಲಧಿ ವಡಬನೆನ್ನನುಳಿದು । ಬಲುಹತೋರ್ಪೆಯಕಟ ಸೂರ್ಯ । ಕುಲಲಲಾಮರ ॥ ಗೆಲುವೆನೆಂದುನೆನೆಸಿದಿಷ್ಟ । ಫಲವನಿದೊ ಕಯ್ಯಾರೆ ಕೊಡುವೆ । ಗೆಲಿದೆಯೊಂದುಬಾರಿಗೆಂಬ । ಬಲುಮೆತೋರ್ತೋರ್ಽರ ॥ ೧ ॥ ತೋರಲೇನು ಸೋತುಮರಳಿ । ಸಾರಿದೆಯಲ ಕೋತಿನೊದಲೆ । ಮೀರಿಸುಧೆಯಕುಡಿಯೆ ಚೇಳು । ಗೀರೆಕಾಲಿಗೆ ॥ ಹಾರಿಕುಣಿಯುವಂತೆ ಕುಣಿದು । ಪಾರದಿರು ಕೃತಾಂತನೆಡೆಗೆ । ಸಾರಿನಿಲ್ಲೆನುತ್ತತಿವಿದ । ಜಾರದಿನಜಗೆ ॥ ೨ ॥ ಅಮ್ಮನುತ್ತಲುರುಳಿಯೊಡನೆ । ಘಮ್ಮನುತ್ತಲೆದ್ದು ಕೇಳೊ । ನಿಮ್ಮಹಣೆಯಲಿಖಿತವಿದೆಲ । ನಮ್ಮ ಕಯ್ಯೊಳು ॥ ಬೊಮ್ಮತಾನೆ ಬರಲಿಗೆಲುವ । ಹಮ್ಮನೋಳ್ಪೆನೆಂದು ಭರದಿ । ಸೊಮ್ಮಕರದಿ ಖಳನಶಿರವ । ನೆಮ್ಮೆಧರೆಯೊಳು ॥ ೩ ॥ ಬಿದ್ದುಕುಂಭನಾಗಲತಿಯು । ಬೈದ್ದು ಕಾಲಹಿಡಿದುತಿರುಹಿ । ಯದ್ದಲಿನಜನಬ್ಧಿಯಿಂದ । ಲೆದ್ದುಭರದಲಿ ॥ ಯುದ್ಧಸಾಕೆನಿಸುವೆ ಭಳಿರೆ । ಗೆದ್ದಗೆಲವ ಮಾಣುಮಾಣೆಂ । ದೊದ್ದರವಿಜಗೆಲಿದ ಮರಳಿ । ಗುದ್ದಿಧುರದಲಿ ॥ ೪ ॥ ಇಂತುನೂರು ಬಾರಿಸೆಣಸ್ಸಿ । ನಿಂತರವಿಜಗಾಗಶರಣ । ಗೊಂತುಗೊಳಿಸಿದನು ಕೈಸನ್ನೆ । ಯಾಂತುಮ

ರ್ಣವ ॥ ಹೊಂತಗಾರಿಕೆಂಡುಕೆರಳಿ । ಭ್ರಾಂತನಿಲ್ಲೆನುತ್ತಸೀಳಿ । ಯಂತ್ರಕನವೋೞ್ಸುರರ ಭವನ । ಕಂತುಭಾಗವ ॥ ೫ ॥

॥ ಭಾಮಿನಿ ॥

ಇಟ್ಟನೊಂದೊಂದಹಿತ ಕಾಯದ । ಘಟ್ಟಗೆಯ ಹೋಳೆರಡನಮರರು । ದಿಟ್ಟಿಸುತಭಾಪೆಂದು ಸುಮಮಳೆಸುರಿಸೆತನಯಂಗೆ ॥ ಕೊಟ್ಟು ಕಳುಹಿದ ಹನುಮನಯ್ಯನೊ । ಳಿಟ್ಟ ಮಣಿಹಾರವ ಪ್ರಭಾಕರ । ನಟ್ಟ ಹಾಸದಿ ಮರುತಜನುತಬ್ಬಿದ ಕಪೀಶ್ವರನ ॥ ೧ ॥

॥ ಕಂದ ॥

ಒಬ್ಬರು ಮುಳಿಯದ ತೆರದಿಂ । ಕೊಬ್ಬಿದ ರಕ್ಕಸದಳವವಿ ಭಾಡಿಸಿ ಬಳಿಕಂ ॥ ಉಬ್ಬಿದಹರುಷೋತ್ಕಟದಿಂ । ಸಬ್ಬಾಣಿಪ್ರಿಯಮಿತ್ರನ ಸಾರಿದು ಮಣಿಯಲ್ಕಂ ॥ ೧ ॥

॥ ರಾಗ ಭೈರವಿ—ಝಂಪೆತಾಳ ॥

ಕಂಡುಪುಳಕದಲಿ ಮಾ । ರ್ತಾಂಡಕುಲಭವನು ಸಲೆ । ಕೊಂಡಾಡಿದನು ಸುಪ್ರ । ಚಂಡ ಬಲರೆನುತ ॥ ೧ ॥ ವಾನರೇಶ್ವರ ಕೇಳು । ದಾನವಾಮರರೊಳಗೆ । ತಾನಾರುಸರಿನಮ್ಮ । ಸೈನಿಕರಿಗಹಹ ॥ ೨ ॥ ಸಮರಸಾಕೆಮಗಿಂದು । ಕುಮತಿಗಳ ದಿಗ್ವಿಜಯ । ನಮಗಾಯಿತಪರಾಬ್ಧಿ । ಗಮರ್ವಸೈಭಾನು ॥ ೩ ॥ ಅಬುಜಕೋರಕವ್ಯಾತು । ಸುಬಲರೀಕ್ಷಿಪುದೆನುತ । ಶಿಬಿರಕಭಿಮುಖನಾದ । ವಿಬುಧನುತರಾಮ ॥ ೪ ॥

॥ ವಾರ್ಧಕ ॥

ತರುಣಕೇಳಸ್ನೆಗಂ ಲೋಕದಿಲತಾಂಗಿಯರ್ । ಪುರುಷನಪರಾಂಗದೊಳಗಸ್ವರಂ ಸೆರೆವರತಿ । ಯಿರಬಹುದು ಕಣ್ಮುಂದೆಸತಿಕಮಲೆ ಚಾಂಚಲ್ಯೈಹಂಸಪುನ್ನಾಗದುಂಬಿ ॥ ದೊರೆಗಳೊಡವೆರವಳಿವಳುರಿ ಮಿತ್ರಳಾದುದಂ । ಗುರುಮಂಗಳೋಸ್ನತಿಯುಪಳಿದು ದ್ವಿಜರಂದಗೆಡಿ । ಸಿರುವ ಕಾರಣಮಿನ್ನು ಮಿವಳಗಲದಿರೆಸೆಂಬತೆರದೊಳಿನ ಮರಿಯಾದನು ॥ ೧ ॥

॥ ಭಾಮಿನಿ ॥

ಅಂದಿರುಳು ಲವಕೇಳುವಿಭವದಿ । ಮುಂದುಲಿವಸುರನರ ಭುಜಂಗಮ । ವೃಂದ ದೊಗ್ಗಿಸೊಳಿತ್ತಸೊಡ್ಡೋಲಗವ ದಶಕಂಠ ॥ ಬಂದುತತ್ಸಮಯದೊಳು ಖಳರಾ । ಜೇಂದ್ರನಡಿಗಳಿಗೆರಗಿ ಕಣ್ಣೀರಿಂದ ಕುಂಭನಸೂತ ಗದ್ಗದರವದೊಳಿಂತೆಂದ ॥ ೧ ॥

॥ ರಾಗ ನವರೋಜು—ಏಕತಾಳ ॥

ಯಾತುಧಾನಾಗ್ರಣಿಯೆ । ಕೇಳ್ । ಮಾತಸದ್ಗುಣಮಣಿಯೆ ॥ ಸೀತಾವಲ್ಲಭ । ನಾತಗಳುಪಹತಿ । ರೀತಿಯನೆಲ್ಲವ । ನೀತವೆಚಿತ್ತದಿ ॥ ಯಾತು ॥ ೧ ॥ ವರಯೂಪಾಕ್ಷಾದಿಗಳು । ಹೊ । ಕ್ಕರುಮುನ್ನಾಸಮರ ದೊಳು ॥ ಪರಿಪರಿಕೋಡಗ । ವರರೊಳು ಸೆಣಸಿದು । ತೆರಳಿದ ರೈಭವ । ದುರುಳಿಯ ಹರಿದೂ ॥ ಯಾತು ॥ ೨ ॥ ಏನೆಂಬೆಕಲಿಕುಂಭ । ಮು । ದ್ದಾನೆ ಯಾಹವ ರಂಭಾ ॥ ವಾನರಪತಿಮುಖ । ರಾನುತತೊಲಗಲು । ತಾನುರಿ ಕೆಣಕಿದ । ಭಾನುಕುಲಜನ ॥ ೩ ॥ ಆಗಲಕ್ಷ್ಮಣಪೋರ । ನನು । ವಾಗಲೀ ರಣಧೀರ ॥ ಬೇಗುದಿಗೊಳದಿರ । ಲಾಗಹರೀಶ್ವರ । ತಾಗಿಗೆಲಿದ ಧುರ । ದಾಗಮುವಿದುವೆ ॥ ೪ ॥

॥ ಭಾಮಿನಿ ॥

ನುಡಿಯನದಕೇಳುತ್ತ ಕಂಗಳೊ । ಳಿಡಿದ ವಶ್ರುಕಣಾಳಿವೈರಿಗ । ಳೊಡೆದರೇ ರಾಕ್ಷಸಚಮೂಪರ ವೀರರಸಕುಂಭ ॥ ಮಡಿದರೇಕುಂಭಾದಿ ಗಳು ಜಯ । ಗುಡಿಯುಹತ್ತಿದರೇ ವಿರೋಧಿಗಳ್ । ಪಿಡಿದರೇ ಛಲ ಸಂದುದೇಯೆಂದಸುರನಳವಳಿದ ॥ ೧ ॥

॥ ರಾಗ ನೀಲಾಂಬರಿ—ರೂಪಕತಾಳ ॥

ಪೇಳುವೆನಾರಿಗೆಯೆನ್ನ ವಿ । ಟಾಳಿಸಿದತಿಯು ವಿಪತ್ತಿನ । ಬೇಳಂಬವ ಪರಿಹರಿಪುದು । ಭಾಳಾಂಬಕಗರಿದು ॥ ಪಲ್ಲವಿ ॥ ತಂಗಿಯು ನುಡಿಯೆನ ಗಂದಿಗೆ । ಇಂಗೋಲಂತಾಯ್ತಿಂದಿಗೆ । ಸಿಂಗಿಯೋಲಾದುದು ಮುತ್ಕುಲ । ಭಂಗವಿದಾದುದಲಾ ॥ ಅಂಗದಿಪೋದ ವಿಭೀಷಣ । ಹಿಂಗದೆ ಕುಂಭಶ್ರವ ಣನು । ಹಿಂಗಿದರಿಂತಿಬ್ಬರುಸಹ । ಕಂಗೊಳಿಸರುಬರರು ॥ ೧ ॥ ಅತಿಕಾಯಾ ಖ್ಯನು ಮೊದಲೇ । ಗತಿಸಿದ ತಾನಿಂದಿನೊಳೇ । ಮತಿಯುತಕುಂಭಕ ಮಡಿ ದನು । ಜತೆಯಾರೆನಗಿನ್ನು ॥ ಸುತಶಕ್ರಾರಿಯುರಿಪುಗಳ । ಹತಿಸಿದನಹಿಯುಜ ರಾಸ್ತ್ರದೊ । ಳತಿಶಯುಜಯುವದು ಸ್ವಪ್ನದ । ಗತಿಯಾಯ್ತುದರಿಂದ ॥ ೨ ॥

॥ ಭಾಮಿನಿ ॥

ಅಳಲುತವನಿಂತಿರಲು ಬಳಿಕದ । ತಿಳಿದು ವಜ್ರಜ್ವಾಲೆ ಖಳದಶ । ಗಳನಸಭೆಗೈತಂದು ನೋಡಿದಡಾಗಲಾಸ್ಥಾನ ॥ ಮೊಳಗಿದಬ್ಬರವಿಳಿದ ಗಗನ । ಸ್ಥಳವೊ ಮೇಣ್ ಮುಂಗಾರ ಮೇಘದ । ಸುಳಿವು ನಿಂದಂಬುಧಿ ಯೊ ಯೆನಲಿರೆ ಬಿದ್ದು ಹಲುಬಿದಳು ॥ ೧ ॥

॥ ರಾಗ ನೀಲಾಂಬರಿ--ಆದಿತಾಳ ॥

ಅಕಟಕಟಿನ್ನಯ ಮಗನೆ । ಸಕಲಕಲಾಶೋಭಿತನೆ ॥ ಪ್ರಕೃತಿ ರಿಪು ಕುಲಸ್ತಂಭ । ಸುಕೃತನಿಧಿಬಾಕುಂಭ ॥ ೧ ॥ ಪರಿಪರಿಪೇಳಿದಮಾತ। ತೊರೆತೊರೆದೈದಿದೆಖ್ಯಾತ ॥ ಹರಣವ ಸೋದರರ್ಸಹಿತ । ಅರಿಗಳಿಗಿತ್ತಿರೆ ಜಾತ ॥ ೨ ॥ ಪತಿಯಳಿದಾಶೋಕವನು । ಸುತರನು ಕಂಡ್ಮರೆತಿಹೆನು ॥ ಗತಿಮತಿಯೇನೆನಗಿನ್ನು । ಕ್ಷಿತಿಯೊಳನಾಥೆಯು ನಾನು ॥ ೩ ॥

॥ ಕಂದ ॥

ಎನುತಲಿಘೊಪ್ಪನೆಕೆಡೆದಾ । ವನಿತಾಮಣಿ ಚೇತರಿಸುತ ಖೇದದೊಳಾಗಳ್ ॥ ಮನದಿಂಸ್ಥೈರಿಸಲಾರದೆ । ದನುಜೋತ್ತುಂಗನ ನೋಡುತ ಕಟಕಿಯುನುಡಿದಳ್ ॥ ೧ ॥

॥ ರಾಗ ನೀಲಾಂಬರಿ--ಏಕತಾಳ

ಕಂಡಿರೇಸುತರ ಹಬ್ಬವ । ಭಾವಯ್ಯ ಹರುಷ । ಗೊಂಡಿರೇ ಮುಂದೆ ರಾಜ್ಯವ ॥ ಕೊಂಡೇಕ ಭಾಗವಾಗಿ । ಪೊರೆಯಲಿ ನಿಮ್ಮ । ತಂಡ ಸಂಪೂರ್ತಿಯಾಗಿ ॥ ೧ ॥ ಪತಿಯನಂದಟ್ಟಿದಿರಿ । ಅಯ್ಯೊಯಿಂದೆನ್ನ । ಸುತರನಾಹುತಿಗೊಟ್ಟಿರಿ ॥ ಗತಿಹೀನೆಯಾದೆನಾನು । ನಿಮಗೇನು ಕುಂದು । ಸ್ಥಿತಿಯುಂಟುತಕ್ಕುದಿನ್ನು ॥ ೨ ॥ ದುಗುಡಭಾರವಿದೇತಕೆ । ಹತ್ತುಮುಸುಡೊಳು । ನಗೆಯೊಂದು ಬಾರದೇಕೆ ॥ ಮಿಗೆಯಿನಿತಾಗೆ ಬಾಳಿಂದು । ಇರೆನಯ್ಯೊನಿಮಿಷ । ಮುಗಿಸೆನ್ನ ಕಡುಮುಳಿದು ॥ ೩ ॥

॥ ರಾಗ ತೋಡಿ—ಅಷ್ಟತಾಳ ॥

ಎಂದು ಕಂಬನಿಯಿಂದ ಗೋಳಿ । ಟ್ಟಂದು ಮೂರ್ಛೆಗೆ ಸಂದು ಸಹಜನ । ಮುಂದಗಮುಸೆಯ ನಿಂದು ತೆಗೆದೆತ್ತಿ ॥ ಚಂದಿರಾನನೆಯಳಲದಿರುಮೇ । ಳಿಂದವರು ಸಾವ್ ನಾಳೆಮೆಂಜೀ । ದೊಂದವನರಿಯದೆ ಭ್ರಾಂತು ತಲೆಗ್ಗುತ್ತಿ ॥ ೧ ॥ ಗಜಭುಜಂಗವಿಹಂಗಗಳು ಸೆರೆ । ರುಜೆಗೆಮೈಗೊಡುವುದು ದಿವಾಕರ । ದ್ವಿಜಪರಾಸ್ವರ್ಭಾನುಪಗೆಯೊಳಗೆ ॥ ನಿಜಕಲಾಸುಪ್ರಾಥಿಗೆಡುವುದಿ । ವಜನಲಿಖಿತಕಣಾನಿಧಾನಿಸೆ । ಭುಜಗವೇಣಿಯೆಚಿಂತೆ ಸಾಕೆಲೆಗೆ ॥ ೨ ॥

॥ ಭಾಮಿನಿ ॥

ಅಂದರೆಲೆತಾಲೀಶಮುಖಿಕೇಳ್ । ಬೆಂದಹುಣ್ಣಿಗೆದೊಂದಿ ಮದ್ದೇ । ಮುಂದುಗೆಡಿಸದಿರೆನ್ನ ನೀನಡೆನಾಳಿನಾಜಿಯಲಿ ॥ ಕೊಂದವರನೆರೆಕೊಲ್ಲು

ವೆನುಹೋ। ಗೆಂದವಳ ಕಳುಹಿತಿರಲಲ್ಲಿಗೆ। ಬಂದನಾಮಕರಾಕ್ಷರಿಪುಕುಲದ ಕ್ಷತ್ರೈಯಕ್ಷ ॥ ೧ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಖೇದವೇಕೆಲೆ ಜೀಯ ಚಿತ್ತದೊ। ಳಾದುರಾಗ್ರಹರಾಹವಕೆಹಿಮು। ಕಾದಿವಾಕರ ನಂಜುವನೆ ನಿನ। ಗಾದುದೇನೈ ॥ ೧ ॥ ದೇವರಿಪು ಚಿತ್ತೈಸು ನವುಗಿ। ನ್ನಾವುದತಿಶಯು ನಾಳೆಧುರದಲಿ। ರಾವಣಾಸುರ ವೀರನೇಕೋ। ದೇವನೆಂದು ॥ ೨ ॥ ದೇವತತಿಬಾಯಿಂದ ನುಡಿಸುವೆ। ಸೇವಿಸಲಿಸುಧೆ ರಿಪುಗಳಾ ವುರು। ಜೀವಣೆಯೊಳೆಬ್ಬಿಸಲಿ ಬಿಡೆನುರ। ಣಾವನಿಯೊಳು ॥ ೩ ॥ ತಿಂಬೆನಗ್ಗದಕದನಕೀಶಕ। ದಂಬವನು ಕಪಿಪತಿಯ ಜೀವವ। ಕೊಂಬೆ ಕೊಡುವೀಳೆಯುವ ಘನ ಸಂ। ರಂಭದಿಂದ ॥ ೪ ॥ ಅಂದುವನದಲಿತನ್ನ ತಂದೆಯು। ಕೊಂದರಾಮನ ಕೊಲುವೆ ಮೊದಲಲಿ। ಬಂದಸೋಲಾಂಬುಧಿಗೆಸೇತುವೆ। ಯುಂದವಹೆನು ॥ ೫ ॥

॥ ಭಾಮಿನಿ ॥

ಧುರಧುರಂಧರ ಕೇಳು ಎನ್ನೀ। ವರೆಗೆನೀಸಾಕಿದಕೆ ನಾಳೆಯೊ। ಳರಿಗಳತಿ ಬಿಸಿರಕುತದಿಂಕುಲದೇವಿ ಕುಂಭಿಣಿಗೆ ॥ ಭರಿತತರ್ಪಣವೀವೆ ಕಳುಹೆಂ। ಬುರುಪರಾಕ್ರಮಿಗಪ್ಪಿಮುದ್ದಿಸಿ। ಧುರವಜೈಸೆಂದಿತ್ತಕರ್ಪುರ ಕವಳನಗೆಮಿನುಗೆ ॥ ೧ ॥

॥ ಕಂದ ॥

ಹರಿದುದುವೋಲಗವಾಗಂ। ಬರತುದುನಿಶಿಯುನ್ನೆಗಾರಾಮಾರ್ಜನೆಗಂ॥
ನೆರೆಕೆಂದಾವರೆಯುಲರಂ। ತರುವಳೊಪೂರ್ವದಿಶಾಂಗನೆಯೆ ನಲಿನನೆಸೆದಂ ॥

॥ ವಾರ್ಧಕ ॥

ಆಹಂಸನುದಯದೊಳ್ ಮಕರಾಕ್ಷ ತನ್ನ ಸರಿ। ಯಾಹವಸಮರ್ಥರಂ ನೆರಹಿದಂತಾನೂರ। ಕ್ಷೋಹಿಣಿಯ ಝುಗಝುಗಿಪರತುನವುಯ ರಥಗಳಂ ಗಜತುರಗಪದಚರರನು॥ ಆಹರಂಗರಿದುಲೆಕ್ಕಿಪಡೆ ಮಿಗೆ ಭೋರೆಂಬ। ವಾಹಿನೀರವಕಮುಲಜಾಂಡ ಜರಿವಂತಾಗೆ। ಮೋಹರಕೆ ಬಲಸಹಿತಲಂಕಾಮುಹಾದುರ್ಗವಿಳಿದೈದಿದರ್ ಭರದೊಳು ॥ ೧ ॥

॥ ರಾಗ ಆಹೇರಿ—ಝಂಪೆತಾಳ ॥

ಬವರಕೈತಂದನಾಗ। ಮಕರಾಕ್ಷ। ಜವನಭಟದಂಥಬಲವವರೊಳುಲಿದಾಗ ॥ ಪಲ್ಲವಿ ॥ ಹೇಳಲೇನ್ ವಿಲಯುಶಿವ। ನಾಳುಗಳೊ

ರಕ್ಕಸರೊ । ವ್ಯಾಳದಂತಿಗಳೊ ಖಳ । ನಾಳದಂತಿಗಳೊ ಇದ । ಪೇಳಲಾ ರಳವೊ ಕೆಂ । ಧೂಳಿದ್ದು ಪದಹತಿಗೆ । ತೂಳಿತೇಳ್ ಭುವನ ದರೆ । ಯೂಳಿ ತಬ್ಧಿಯೊಳೆನಲು ॥ ೧ ॥ ಕರಿಯುದಾರ್ಶ್ಯೆ ಬರಲಿ । ಕರಿಗೊರಳಸೆವ್ಮು ಧುರ । ಕರಿದೆನುತಭೋರೆಂದು । ಕರಿವೈಯ್ಯ ವರಕಹಳೆ । ಕರಿಯುಕೇತುಕದಂಬ । ಕರಿಲೆಂದು ಕೇತುವಂ । ಕರಿದುಡುಕೆ ಕೂರ್ಮಫಣಿ । ಕರಿಗೆಯುಬ್ಬಸ ವೆನಲು ॥ ಬವರ ॥ ೨ ॥

॥ ವಾರ್ಧಕ ॥

ಭೋರೆಂಬಭೂರಿಭೇರಿಗಳ ಘನನಾದದಿಂ । ಸಾರೆಂಬಭಟರ ಬಾಹಾ ರವ ವಿಶೇಷದಿಂ । ಧೀರಂಬಲೋತ್ಕರದ ಧೃತಧನುರ್ನಾದದಿಂ ನಿತ್ರಾಣ ಜವಗಾಗಲು ॥ ಆರಂಭಮಿಂದಾಗುವಂತಾಗದಿರದಜಗೆ । ಭೂರಂಭೆ ಮೇಲೆ ಯಾಪತ್ತಿನಿಂದಮರಗಣ । ಬೇರೆಂಬವೋಲ್‌ಸುರಗಿ ಶೂಲಗಳ ಪಿಡಿ ದೈದಿಮುತ್ತಿದರ್ ಧುರಕಣಸೊಳು ॥ ೧ ॥

॥ ಭಾಮಿನಿ ॥

ನಿಂದನಾನಿಜಸಕಲ ಸೇನೆಯು । ಮುಂದುಗಡೆಯಲಿ ತಾರಕಾಗ್ರಹ । ವೃಂದಮಧ್ಯದರವಿಯ ವೋಲ್‌ರಥದೊಳಗೆ ಮಕರಾಕ್ಷ ॥ ಹಿಂದಣತಿರ ಕ್ಕಸರಿಗಿವಹ । ನ್ನೊಂದುಮುದಿ ಕಾಣಿಸಲು ದಶರಥ । ನಂದನನು ನಿಜ ಚರಣಕಮಲಾರಾಧಕಸೊಳೆಂದ ॥ ೧ ॥

॥ ರಾಗ ಕಾಪಿ—ಅಷ್ಟತಾಳ ॥

ಬಂದವನಿವನ್ಯಾವಪೀರ । ಗುಣ । ಸಾಂದ್ರನೀನೆನಗಿದ ಪೇಳುಗಂಭೀ ರ ॥ ಪಲ್ಲವಿ ॥ ಇವನಂದಿಸಂಧಕಸೇನ್ಯೆ । ಮೇಣೆ । ನ್ನಿವಕೈಟಭಾಸುರನ ಹುದೇನೀಕಾಣ್ಯೆ ॥ ಭುವನದೊಳೆಣೆಗಾಣೆನಲ್ಲೈ । ಇಂಥ । ಹವಣಿಗರಿ ಸ್ನಂಟಿಖಳರೊಳ್ ನೀಪೇಳ್ಯೆ ॥ ೧ ॥

॥ ರಾಗ ಬೇಗಡೆ—ಏಕತಾಳ ॥

ಲಾಲಿಸೈ ರಾಜೇಂದ್ರಕುಲದೀಪ । ಎನ್ನರಿಕೆಯನು ಕರು । ಣಾಲ ವಾಲಸುಶೀಲ ಕುಲದೀಪ ॥ ನೀಲಮೇಘ ನಿಭಾಂಗಸಜ್ಜನ । ಪಾಲದಶ ರಥ ಬಾಲಸೀತಾ । ಲೋಲನಿತ್ಯನಿರಾಳನಿರ್ಗುಣ । ಕಾಲಕಾಲಾತೀತ ನಿರ್ಮಲ ॥ ಪಲ್ಲವಿ ॥ ಜೀಯಕೇಳಿವ । ನಾಯತವ ಪೂ । ರಾಯಚಿತ್ತ ದಲಿ । ಜಯಯುವ । ತೀಯಶಶ್ರುತಿ । ಸ್ಥಾಯಿಮೇಣತಿ । ಕಾಯನಿಂದಲ್ಲಿ । ಸುಮನಸ । ರಾಯಜಿತುವಿಂ । ಜೇಯನಿವಖಳ । ರಾಯತಂಡದಲಿ । ಬಹಳ

ಸು । ಪ್ರೀಯ ನೆಮ್ಮಣ್ಣನಿಗೆ ಧುರದಿವ । ಜ್ರಾಯುಧಗೆ ಗಿರಿ । ರಾಯನಳಿಯಗೆ । ತಾಯಿವನೆಯೆನಿಸುವನು ನಾಸೋ । ಪಾಯದಲಿ ನೋಡೈಜಗದ್ವಿಭು ॥ ೧ ॥ ಅಂದುವನದಿ ಮ । ದಾಂಧತನದಲಿ । ಹೊಂದಿ ಯುದ್ಧದಲಿ । ನಿಮ್ಮನು । ಮುಂದುಗೆಡಿಸಿ ಸು । ರೇಂದ್ರ ಭವನಕೆ । ಸಂದ ಖರನಲ್ಲಿ । ಆತನ । ಕಂದನಿವಗುಣ । ವೃಂದಝುಶದೃಶ । ನೆಂದುಪೆಸರಿನಲಿ । ಕರೆವರು । ತಂದೆಯಿಂ ಬಾಲ್ಯದಲಿ ಕಳುಹಿಸಿ । ಬಂದು ದಶಕಂಧರನ ಸೇರಿಹ । ನಿಂದಿನಾಜಿಯೊಳಿವನಗೆಲಿದಡೆ । ಮುಂದೆ ವಿಜಯಿಗಳಾವು ಧಾರ್ಮಿಕ ॥ ೨ ॥

॥ ರಾಗ ಕೇತಾರಗೌಳ—ಅಷ್ಟತಾಳ ॥

ಆದರೇನೆಂಬೆ ತಪ್ಪಿಲ್ಲಿವನೆಮ್ಮೊಳ । ಗೈದಲುಳ್ಳವಧುರದಿ ॥ ಆದಿವೀರರೊಳೀತನಯ್ಯಗೆ ಸರಿಯಾರು । ಕಾದಿದಡಾಹವದಿ ॥ ೧ ॥ ಮುರಿಯೆಚ್ಚುಬಿಲ್ಲ ಮೂವತ್ತೈದು ಹಜ್ಜೆಹಿಂ । ದಿರುಗಿಸಿದನು ನಮ್ಮನು ॥ ಅರಿಗಳಾವಿದರಿಂದಲಿವಗೆ ನಿಶ್ಚಯವು ಇಂ । ತರಿದಮೇಲ್ ಕಪಿಗಳನು ॥ ೨ ॥ ಹಗೆಯುವನಿದಿರಿಕ್ಕಿಗಗನ ಪಥಿಕರಾಗಿ । ನೆಗಳಿಚುವುದು ಗುಣವೆ ॥ ಸಗರವಂಶಜನಿಂತು ಬಗೆಗೈದನೆಂದೆಮ್ಮ । ನಗುವರು ಜಗದೊಳಗೆ ॥ ೩ ॥ ತಮ್ಮನೀನಡೆಖಳ ಬಲವನಿರ್ಣೈಸುನಾ । ನೊಮ್ಮೆಗೀರಕ್ಕಸನ ॥ ಹಮ್ಮನೋಡುವೆನೆಂದು ಧನುಶರಗಳ ಪರ । ಬೊಮ್ಮತಾ ಕೈಗೊಂಡನು ॥ ೪ ॥ ಅನಿತರೊಳಿತ್ತ ಸುಗ್ರೀವನಾಜ್ಞಾವರ್ತ । ವನಚರರಬ್ಬರದಿ ॥ ದನುಜಸೈನಿಕಪೊಕ್ಕುಸದೆದರು ಗಿರಿತರು । ಗೊನೆಯಿಂದ ಸಂಗರದಿ ॥ ೫ ॥

॥ ವಾರ್ಧಕ ॥

ಒತ್ತಿಬಹರಥಿಕರಂ ವ್ಯಥಿಕರಂ ಮಾಡಿದರು । ಮುತ್ತುವ ತುರಂಗಮದತುಂಗ ಮದದಂತಿಗಳ । ವೊತ್ತಮಂ ಪೋಳಾಗಿ ಸೀಳಾಗಿ ಕೆಡಹಿದರ್ ಕೊಡಹಿದರ್ ವಾಹಕರನು ॥ ಮತ್ತೆ ಭಟರಂಗಮಂ ಭಂಗಮುಂಬರಿಸಿದು ಮರುತ್ತನಯ ಮುಖ್ಯರುಂ ಮುಖ್ಯರಂ ಕಾಳ್ಗೆಡಿಸಿ । ನೆತ್ತರಂ ಪರಪಿದರ್ ನೆರಪಿದರ್ ಮರುಳ್ಪಡೆಗೆ ಧುರಭಯಂಕರಮಾಗಲು ॥ ೧ ॥

॥ ಕಂದ ॥

ಈಪರಿಕಂಪಾಖರಜಂ । ಕೋಪದಿ ಶರಮಳೆ ಸುರಿಸುತನೇಕರ ತರಿದುಂ ॥ ತ್ರೈಪುರಹರನೊಲು ಮುಂದಾ । ಟೋಪದಿಬರುತಾ ಹನುಮನ ತಡೆಗೊಂಡೆಂದಂ ॥ ೧ ॥

॥ ರಾಗ ಭೈರವಿ— ಅಷ್ಟತಾಳ ॥

ಹನುಮನೆಂಬವನೆ ನೀನು । ಬಾಲ್ಯದಿಸೂರ್ಯ । ನನು ನುಂಗಲೆ ನುತಮೇಣು ॥ ಮನಕೊಟ್ಟುಲಂಘಿಸಿ ಶಕ್ರನಿಂದಳಿದು ಬಂ । ದನಘಶಾ ಭಾಸೆಂದನು ॥ ೧ ॥ ಒರಲದಿರೆಲವೊಧೂರ್ತ । ತಂದೆಯ ಮಕ್ಕ । ಳಿರವಿ ನೊಳುಳಿದುಮತ್ತಾ ॥ ಪರರತಾಂಬೂಲಕ್ಕೆ ಕೈಯೊಡ್ಡಿ ಬಾಳುವ । ದುರುಳ ನೀತೆರಳೆಂದನು ॥ ೨ ॥ ಏನೆಂದೆಘಡಯೆನ್ನನು । ಸಂಗ್ರಾಮದಿ । ಹೀನ ವಿಕ್ರಮನೆ ತಾನು ॥ ತಾನಿಕೊಳ್ಳಾದಡೆನ್ನುತಲಸ್ತ್ರಸಾರದಿ । ವಾನರನನು ಝುಡಿದ ॥ ೩ ॥ ಗಣಿಸದೆ ಹನುಮಂತನು । ನಿಂತುಗ್ರದಿ । ಸೆಣಸಲುಮಕ ರಾಕ್ಷನು ॥ ಬಣಗುಮರ್ಕಟ ತೊಲಗೆಂದಜಶರದಿಕುಂ । ಭಿನಿಗುರುಳಿಸಿದ ನಾಗ ॥ ೪ ॥ ಆತನ ಹರಿಬಕೆಂದು । ಅಂಗದನೀಲ । ರಾತು ಸಂಗರದಿ ನೊಂದು ॥ ಭೂತಳಕೊರಗೆ ಕಂಡಿನಜಲಂಘಿಸಿಸುರಾ । ರಾತಿಯ ತಡೆ ದೆಂದನು ॥ ೫ ॥

॥ ರಾಗ ಘಂಟಾರವ— ಅಷ್ಟತಾಳ ॥

ನಿಲ್ಲು ನಿಲ್ಲೆಲೊ ಮಕರಾಕ್ಷಘಡನಿನ್ನ ॥ ಝಲ್ಲಿಗಳ ತೋರೆಲ್ಲ ಬೇಗೆಂ । ದ್ಘಲ್ಲ ಕಿರಿವೋಲೆರಗಿದ ॥ ೧ ॥ ಹೇವನೌಕಸವರನೆ ಹೆಬ್ಬುಲಿ ಬಾಯ ॥ ಗೋವುತಾ ಬಾಳುವುದೆ ಸಿಕ್ಕಿದೆ । ಜೀವಿಸಲು ಜಿಡೆನಿನ್ನನು ॥ ೨ ॥ ಬಾಯಪೌರುಷದಾಯುವೆ ಸುಡುಸುಡು । ನಾಯಿಹೋಗೆಂದದ್ರಿಯಿಂದವ । ನಾಯುಮುಗಿವೋಲೆರಗಿದ ॥ ೩ ॥ ಕೆರಳಿಕೆಂಗಿಡಿ ಕಾರುತ್ತ ಬಹಗಿರಿ ॥ ತರಿದುಬಹುಶರ ಸುರಿದುಮಿಗೆ ಜ । ರ್ಝರಿತಮಾಡಿದ ನಿನಜನ ॥ ೪ ॥ ಒಡನೆರಕ್ಕಸ ಹಾಯ್ದು ಮುಂದಲೆಯೊತ್ತಿ ॥ ಪಿಡಿದುಖಡುಗವಝುಮ್ಮೆ ಕೊರಳಿಗೆ । ನುಡಿದ ಜಾಂಬವಜಾಣನು ॥ ೫ ॥

॥ ರಾಗ ಮಧುಮಾಧವಿ— ಅಷ್ಟತಾಳ ॥

ಖರಸೂನುಕೇಳೆನ್ನ ಮಾತನೀನಿಂದು । ತರಣಿಜನೇತರಸಹಸಿಗ ನೆಂದು ॥ ತರಿವೆಹೆಬ್ಬುಲಿಯ ಮೇಲುರಿಕೋಪತಳೆದು । ಕುರಿಯಕೊಂದನ ಗಾದೆ ಮಾಡದಿರರಿದು ॥ ೧ ॥ ಕಡುಪರಾಕ್ರಮಶಾಲಿಯಾಗಿನೀನಬಲ । ಬಡವನಚರಮೂರ್ಛೆಗೈದನಕೊರಳ ॥ ಕಡಿವುದುನೀತಿಯೆ ದುರುಳತನಗಳ । ಬಿಡು ಕೇಳುಪೇಳುವೆ ವಿಹಿತಕಾರ್ಯಗಳ ॥ ೨ ॥ ಸಂಗರಶೂರನುರಾಮ ನೆಂಬರಸು । ಹಿಂಗದೆ ನಿಮ್ಮವಂಶಾಂತಕನೆಣಿಸು ॥ ತುಂಗವಿಕ್ರಮವ ತೋರವನೊಳು ಸೆಣಸು । ಮಂಗನಕೊಲುವುದಿದಾವ ಶಾಭಾಸು ॥ ೩ ॥

॥ ಭಾಮಿನಿ ॥

ಏನೆಲವೊ ಮುದಿಕೋತಿನೀತಿ ವಿ। ಧಾನ ತಾನರಿಯದನೆ ಪೋಗೆಂ। ದಾನಿ ಶಾಚರಖಡುಗಮಂ ಝುಳಪಿಸಿದಡನಿತರೊಳು ॥ ಏನುಭಕ್ತಾಧೀನ ರೋ ರಘು। ಸೂನುಲಕ್ಷ್ಮಣರುಗಳು ಜ್ಯೇಷ್ಠನ। ತಾನುಳಿದುಬರುತಿತ್ತ ನೋಡಿದನದರಸೌಮಿತ್ರ॥ ೧ ॥

॥ ಕಂದ ॥

ಎಸುಗೆಯನೋಡಿದು ದಿಲ್ಲಾ। ಗಸಿಯಿಕ್ಕಡಿಯಿಂದಭ್ರದಿಹೊಳಕಿದು ದಾಗಳ್॥ ಪೊಸಸುಮಮಳೆಯಂಮಿಗೆಸುಮ। ನಸರುಂ ಲಕ್ಷ್ಮಣನಂಗದಿಸು ರಿಯಲ್ಕಾಗಳ್ ॥ ೧ ॥

॥ ರಾಗ ದೇಸಿ— ಅಷ್ಟತಾಳ ॥

ಏನಯ್ಯಾ। ಖೂಳ। ಏನಯ್ಯ ॥ ಪಲ್ಲವಿ ॥ ಏನಯ್ಯ ಖೂಳ ಸಂಗ ರದಿಕೈಸೋತ। ವಾನರವರನ ಕೊಲ್ಲುವುದುದುರ್ನೀತ ॥ ಅನುಪಲ್ಲವಿ ॥ ಇನಿಬರಪ್ರಾಣಕ್ಕೆ ಹೊಣೆನಾನಾಗಿರುತ । ಮುನಿದುಕೃತಾಂತ ಬಂದರು ಕೊಲ್ವೆನೆನುತ ॥ ಕೊನೆಸೇರದ್ಧೈಯಿಷ್ಟನಿಲುಧುರಕೆಂದು । ಘನಶರವ್ರಾತ ದಿಮುಸುಕಿದ ನಂದು ॥ ೧ ॥ ಬರುವಶರಂಗಳ ತರಿದುದಾನವನು। ಉರಿ ಮುಸಗುತಲಕ್ಷ್ಮಣಗುಸಿರಿದನು ॥ ಧಿರುರೆಸಮರ್ಥನೆ ನರಗುರಿನೀನು। ಬರಿದೇಕೆಕೆಡುವೆ ಸಾರೆನುತೆಚ್ಚಡದನು ॥ ೨ ॥ ಬಗೆವನೆಶೂರಪರಾಕ್ರಮ ಶಾಲಿ। ಬಗೆಯಾದಡಿದಕೊನಿಲ್ಲೆನುತಲಿ ಪೇಳಿ। ತೆಗೆದೆಚ್ಚಡಿರದೆ ಲಕ್ಷ್ಮಣನ ಶರಾಳಿ। ಮುಗಿಸಿತು ಖಳನೇರ್ದರಥತುರಗಾಳಿ ॥ ೩ ॥ ಕದನಪ್ರಚಂಡನು ನರನಾದಡೆಂದು। ಬದಲೊಂದುರಥವೇರಿಬರೆ ಖಳಮುಂದು ॥ ಅದಕೊ ರಾಘವನಿನ್ನಮೃತ್ಯು ಹೋಗೆಂದು । ಮುದದಿಂದಲೆಚ್ಚಡಾತನು ಸಹಿ ತಂದು ॥ ೪ ॥

॥ ಭಾಮಿನಿ ॥

ತೇರುಶತಬಿಲ್ಲಂತರಕೆಹಿಂ। ಜಾರಲಾರಿಪು ಸೈನ್ಯದಲಿರಣ। ಮಾರಿ ಯಂತೈತಂದು ಹೊಕ್ಕನು ವೀರಸೌಮಿತ್ರ ॥ ಕ್ರೂರಖಳನಾರ್ಭಟಿಸಿಧನು ಝೇಂ। ಕಾರವಂ ಗೈದಬ್ಬರದಿನಿಜ। ಸಾರಥಿಯೊಳಿಂತೆಂದ ಘುಡುಘುಡಿ ಸುತ್ತಗಜರುತ್ತ ॥ ೧ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಭಳಿರೆಸಾರಥಿಕೇಳುರಾಮನ। ಬಳಿಗೆ ಬಿಡುರಥವನುವಲೀ ಮುಖ। ರೊಳಗೆ ನಾಬಿಲುದುಡುಕೆ ನಿಲ್ಲೈ। ತಳುವದಿಂದು ॥ ೧ ॥ ಕಲಹರಾಮನ

ಕೂಡೆಗೆಲವಿನ । ಬಲುಹುರಾಮನಕೂಡೆ ತಂದೆಯು । ಕೊಲೆಗೆಕೊಲೆ ಯನುಗೊಂಬೆನೆನಲಿಳೆ । ಯಲುಗುವಂತೆ ॥ ೨ ॥ ತುರಗವನುಚಪ್ಪರಿಸಿ ಸಾರಥಿ । ಹರಿಸಿದನುಹೊಂದೇರನಿತ್ತಲು । ತರಣಿಕುಲರಾಜೇಂದ್ರನಹಿತನ । ಬರವಕಂಡ ॥ ೩ ॥

॥ ವಾರ್ಧಕ ॥

ಕಂಡಾಕ್ಷಣಂ ರಘೂದ್ವಹನ ಮುಖಕೆಂಪೇರೆ । ಕೆಂಡದಂತರಳ್ದ ವಕ್ಷಿಗಳು ರೋಮಾಳಿಹುರಿ । ಗೊಂಡುದುಸಿರೊಳು ವಿಸ್ಫುಲಿಂಗಮೋಸರಿ ಸೆರಿಪು ಗಂಡಭೇರುಂಡ ಖಂಡ ॥ ಖಂಡಪರಶುವಿನ ಕೋದಂಡಖಂಡಂ ಕೋಪ । ಗೊಂಡುಬಿಲುಝೇಂಕರಿಸೆಸಿಂಜಿನಿಯರವ ಕಮಲ । ಜಾಂಡ ಬಿರಿವಂತಾಗಲನ್ನೆಗಂ ಮಕರಾಕ್ಷಕಂಡೆಂದಖಾತಿಯಿಂದ ॥ ೧ ॥

॥ ಭಾಮಿನಿ ॥

ಈತನೇಮುತ್ರಿತನ ಕೊಂದವ । ಸೂತಕೇಳ್ ಹಗೆಯೆಂದು ಶರಸಂ । ಘಾತದಿಂ ಮುಸುಕಿದರೆ ಕತ್ತರಿಸುತ್ತಕಿಡಿಯಿಡುತ ॥ ಭೂತನಾಥನ ವೋಲು ರಣನಿ । ಭೀತರಾಘವದೇವನಿಂದಿರ । ಲಾತಭೋರ್ಗುಡಿಸುತ್ತ ಮೂದಲಿಸುತ್ತಲಿಂತೆಂದ ॥ ೧ ॥

॥ ರಾಗ ಶಂಕರಾಭರಣ—ಅಷ್ಟತಾಳ ॥

ನೀನೆ ರಾಮನೆಂಬಮನುಜ । ಹೀನರಾಜ್ಯ ಬಿಟ್ಟುಘೋರ । ಕಾನನಕ್ಕೆ ಬಂದುಕಾಂತೆ । ತಾನೆಕಳೆದವ ॥ ೧ ॥ ಏನೆಲೊ ರಕ್ಕಸಕುನ್ನಿ । ಮಾನಿನಿಯನೀ ಗಾಡಿದಲ್ಲ। ದಾನವರ ಕುಲಕೆ ಮೃತ್ಯು। ತಾನಟ್ಟಿದವ॥ ೨ ॥ ಜಿಡುಜಿಡದನು ಕೇಳೊತನ್ನ । ಪಡೆದಪಿತನಕೊಂದ ಗರ್ವ । ನುಡಿದಪಾತ ನೆಡೆಗೆ ನಿನ್ನ । ನಡೆಸದಿರೆನೆಂದ ॥ ೩ ॥ ದಡಿಗಕೇಳ್ ಲೋಕದಿತಾತ । ನೆಡೆಗೆಮಕ್ಕಳ್ ಪೋಪನೀತಿ । ದೃಢವಿದಲ್ಪಬಗುಳಿಪ್ರಾಣ । ಗೊಡದಿರೀ ಗೆಂದ ॥ ೪ ॥ ಧಿರುರೆನೀತಿಮರುಳನೀನು । ನಿರಪರಾಧಿ ವಾಲಿಯನ್ನು । ತರಿದುದ್ಯಾಕೆಯಲ್ಪರಿಂಗೆ । ಗುರುಕಣಾಯೆಂದ ॥ ೫ ॥ ದುರುಳಕೇಳು ವಾಲಿ ತಮ್ಮ । ನರಸಿಯ ಕೂಡಿದ ಕ್ರೋಧ । ವರಿತು ಕೊಂದೆವಯ್ಯ ಭಂಡ । ರರಿಯುರದನೆಂದ ॥ ೬ ॥ ಷಂಡನೀನಸ್ಯರುತಾನೆ । ಕೊಂಡುಪೋದ ನಾರಿಗಾಗಿ । ದಂಡುಕೂಡಿ ಬಂದುದಿಂದು । ಭಂಡಾಟವಲ್ಲೈ ॥ ೭ ॥ ಪುಂಡರೀಕನೇತ್ರೆಗಾಗಿ । ಯಂಡಲೆದುಬಂದುದಲ್ಲ । ದಂಡಿತಾನರಣ್ಯಗಾಗಿ ।

ದಂಡುತಂದೆವೈ ॥ ೮ ॥ ಭಳಿರೆಲೇಸಾಯ್ತುಯ್ಯ ಮಾತಿ । ನೊಳಗೆ ಜಾಣ ನಾದಡೆನ್ನ । ಹಿಳುಕನೋಡೆನುತ್ತಲಸ್ತ್ರ । ತುಳುಕಿದಡವನು ॥ ೯ ॥ ನಳಿನ ನೇತ್ರನದರಖಂಡ । ಗೊಳಿಸಿ ಪೇಳ್ದನಿನ್ನೇನುಂಟು । ಕಳುಹುನಿನ್ನಸ್ತ್ರಗ ಳೆಂದು । ಘಳಿಲನೆಚ್ಚನು ॥ ೧ ॥

॥ ಭಾಮಿನಿ ॥

ಎಸುಗೆಯನು ಖಂಡಿಸುತಖರಸುತ। ನೆಸೆದ ಧಾರಿಣಿಯೆಲ್ಲಿ ಮೇಣಾ। ಗಸವದೆಲ್ಲಿಯೆನಲ್ಕೆಶರಮಯವಾಗೆ ಸರ್ವತ್ರ ॥ ಮುಸುಕುವರಿಖಗಸಮಿತಿ ಯನು ತುಂ। ಡಿಸುವ ನೀರಘನಾಥ ನಿಂತಾ। ಲಸಿಕೆ ದೋರದೆಸೆಣಸಿದರು ಮಿಗೆ ಜಾವಪರಿಯಂತ ॥ ೧ ॥

॥ ರಾಗ ಭೈರವಿ—ಅಷ್ಟತಾಳ ॥

ಪೂತು ಮಝುರೆ ರಾಘವ। ಸಂಗರದಿ ವಿ। ಖ್ಯಾತಕೇಳ್ ಕಮಲ ಭವ ॥ ಭೂತೇಶಾದಿಗಳೆನ್ನ । ಘಾತಿಗಂಜುವರಿದ । ನೀತಿಳಿಯದೆ ಕೆಟ್ಟೆ ಲಾ ॥ ೧ ॥ ಆಸುರಾಗ್ರಣಿಯೆ ಕೇಳು । ನೀನೆಂದ ಪ । ದ್ಮಾಸನಾದ್ಯಮರ ರೊಳು ॥ ನಾಸೇರಿದವನೆಂದು ಬಗೆವೆ ನಿನ್ನಯತಲೆ । ಮಿಾಸಲೆನ್ನಯ ಶರಕೆ॥ ೨ ॥ ಹಾರದಿರೆಲವೊರಾಮ। ಬಲ್ಲೆನುಬಡ। ಹಾರುವನನುನಿಸ್ಸೀಮ॥ ದಾರಿಯೊಳ್ ಗೆದ್ದುಮಾರೀಚಾದಿಗಳ ಗೆದ್ದ । ಶೂರವಿಕ್ರಮಸಾಕೆಲಾ॥ ೩ ॥ ಮುಂಗಯ್ಯ ಸರಪಣಿಗೆ। ನೋಡಲುದರ್ಪ । ಣಂಗಳೇಕೈಯೊಮ್ಮೆಗೆ ॥ ಅಂಗದಹನುಮಪತಂಗ ಜಾದ್ಯರಗೆದ್ದ । ತುಂಗವಿಕ್ರಮನೀನಲ್ಲೈ ॥ ೪ ॥ ಮೆಚ್ಚಿದೆಭಾಷಿತಕೆ । ಸಂಗರಮದ । ಹೆಚ್ಚಿನೀಕುಣಿಯಲೇಕೆ ॥ ಹೆಚ್ಚಿನ ಭಟನಪ್ಪೆನೆಚ್ಚಿಕೊಳ್ಳೆನುತಲಿ । ಕಿಚ್ಚಿನಶರವಚ್ಚನು ॥ ೫ ॥

॥ ರಾಗ ಅಖಂಡಮಾರವಿ—ಏಕತಾಳ ॥

ಖಗಕುಲಜನಕೇ। ಳಘಟಿತಶಿಖಿಶರ। ಭುಗುಭುಗಿಸುತಲಾ। ರಘು ಜನಮುಸುಕಲು । ವಿಗಡಪರಾಕ್ರಮ । ಬಗೆವನೆವಾರುಣ । ಖಗವಾರ್ದೆ ಸುತದ। ಮುಗಿಸಿದುಮೆರೆದ ॥ ಏನನೆಂಬೆ ॥ ೧ ॥ ಗರಳಮಯದೊಳಿಳೆ। ತುರುಗಿಪುದೆನಲ। ಬ್ಬರಿಸುತಲಹಿಶರ। ಭರದಿಂದೆಚ್ಚಡೆ। ಗರುಡಕಳಂಬದಿ। ತರಿದನು ರಘುಭೂ। ವರಹುಂಕರಿಸುತ। ಜರೆದಡೆ ಖಳನ॥ ಏನನೆಂಬೆ॥ ೨ ॥

॥ ರಾಗ ಶಂಕರಾಭರಣ— ಮಟ್ಟೆತಾಳ ॥

ಕೆರಳಿಬಳಿಕ ಯಾತುಧಾನ । ಒರೆದನೆಲವೊ ರಘುಜ ಎರಡು । ಶರವಗೆಲಿದೆಯೆಂದು ಹಿಗ್ಗ । ದಿರು ಕೇಳಿದರನು ॥ ತರಿವಡುಳ್ಳಡಿದಕೊಯೆಂದು । ದುರುಳನಧಿಕ ಕೋಪದಿಂದ । ನಿಋತಿಮೇಘ ತಿಮಿರವೆಂಬ । ಶರಗಳಿಸೆದನು ॥ ೧ ॥ ದುರುಳಕೇಳುಧುರದಿ ಹಿಗ್ಗಿ । ಮರೆವರಲ್ಲ ನಾವು ನೀವೆ । ಕುರಿಗಳಂತೆ ಕೂಗಿಯೊಮ್ಮೆ । ಹರಿಗಳಂದದಿ ॥ ಮೊರೆದುಕಡೆಗೆ ಸಾವಿರೆಂದು । ಭರದಿಬರುವಶರವ ಗೆಲಿದ । ವರಕಪರ್ದಿವಾಯು ಸೂರ್ಯ । ಸರಳೊಳುಗ್ರದಿ ॥ ೨ ॥ ಪೂತುರೇನೃಪಾಲಭಳಿರೆ । ಖ್ಯಾತನಹೆಯಯಿದಕೊಯುಮುನಾ । ಭ್ರಾತಶರವ ತೊಡುವೆ ಹರಣ । ವಾತುನಿಲ್ಲೆನ್ನ ॥ ತಾತನನ್ನುಗೆಲಿದ ಹಗೆಯ । ರೀತಿಲೇಸೆನುತ್ತಲೆಚ್ಚ । ಭೀತಿಗೊಳ್ಳಲಖಿಳಬಲಗ । ಳಾತತುಕ್ಷಣ ॥ ೩ ॥ ಚಂಡರಘುಕುಲೇಂದ್ರನದರ । ರುಂಡಮಾಲಮಂತ್ರಶರದಿ । ತುಂಡುಗೈದುಪೇಳ್ದ ಮುಗುಳು । ದ್ದಂಡಬಲನೊಳು ॥ ಷಂಡಕೇಳುನಾವುಮನುಜ । ತಂಡವಲ್ಲರೆಮ್ಮಸತ್ವ । ಕಂಡುಕೊಳ್ಳೆನುತ್ತ ರೋಷ । ಗೊಂಡು ಧುರದೊಳು ॥ ೪ ॥

॥ ಭಾಮಿನಿ ॥

ಕಿಡಿಗೆದರಿಕಲ್ಪಾಂತರುದ್ರನ । ಪಡಿಯೊಳಿನ ಕುಲತಿಲಕ ಶರವೆ । ಚ್ಚೊಡನೆ ಯಿಕ್ಕಡಿಗೈದನಾಖರಸುತನ ಖಂಡೆಯವ ॥ ಪಿಡಿಯೆಖಳ ಬೇರೊಂದು ಧನುವದ । ಕಡಿದನಿಂತೇಳ್ನೂರು ಬಿಲುಕಡಿ । ವಡೆಯಲವ ಕ್ರೋಧಾಗ್ನಿ ಭುಲ್ಲೈಸಲ್ಕೆಮತ್ತೆಂದ ॥ ೧ ॥

॥ ರಾಗ ಭೈರವಿ—ಏಕತಾಳ ॥

ಛಾಪುರೆನೀಬಲುಜಾಣ । ಪೊಸ । ಚಾಪವಧರಿಸಿದೆ ಕಠಿಣ ॥ ಆ ಪರಿಘನತೆಯುರ್ಝುಲ್ಲಿ । ಬಿಡು । ಕೋಪವ ತೋರಿದರಿಲ್ಲಿ ॥ ೧ ॥ ಸಾಕೆಲೊ ಬಾಯ್ಬೊಬ್ಬಾಟ । ಇದು । ಯಾಕೆಲೊ ನೀಕೇಳಧಟ ॥ ಆ ಕುರಿಪೆರ್ಚಿದ ರಾನೆ । ಯಹು । ದೇ ಕೆಡುಕನೆ ನುಡಿತಾನೆ ॥ ೨ ॥ ಈಶನುಪೂರ್ವದಿ ವೊಲಿದು । ಕೊ । ಟ್ಟಾಶರವೆಸುವೆನುತೆಗೆದು ॥ ಹೂಸಕವಾಡುವರಲ್ಲೈ । ಜೀವ । ದಾಸೆಯಿರಲು ನಡೆಗೊಳ್ಳೈ ॥ ೩ ॥ ಮೃಡನಕಳಂಬವೆಬರಲಿ । ಮೇಣ್ । ಮೃಡನೇ ಧುರಕ್ಕೈತರಲಿ ॥ ನಡೆಯುವ ಮಾತಂತಿರಲಿ । ಬಿಡು । ಕಡುಹನುಸೋಡೆನೆ ಕೇಳಿ ॥ ೪ ॥ ತರಿಸಿಕೊ ಸಂಜೀವನವ । ಮೇಣ್ । ಬರಿಸಿಕೊಳ್ಳುಳಿವಡೆಕಾವ ॥ ಗುರುಕುಲದೇವಿಯರುಗಳ । ನಿಂ । ದಿರುನೀ

ಬಳಿಕಿನೊಳೇಳ ॥ ೫ ॥ ದುರುಳ ನಿಮ್ಮೆಲ್ಲರತರಿದು । ಮ । ತ್ತಿರದೆ ಸಂಜೀವನ ತಂದು ॥ ಧುರದಿಮಡಿದರೆಬ್ಬಿಸುವೆ । ಮ । ದ್ಗುರುವನು ನಿತ್ಯಲು ನೆನೆವೆ ॥ ೬ ॥ ಇನಿತುಪರಾಕ್ರಮನಹೆಯು । ನೋ । ಡೆನುತಲಿ ಶಿವನಶಕುತಿಯ ॥ ಘನತರಕೋಪದೊಳೆಸೆದ । ರಘು । ಜನಪನ ಸಡಿಪಡಯೆಂದ ॥ ೭ ॥

॥ ರಾಗ ಭೈರವಿ—ತ್ರಿವುಡೆತಾಳ ॥

ನುಡಿಯಲೇನಾ । ಭಾಪುರೆ । ನುಡಿಯಲೇನಾ ॥ ಪಲ್ಲವಿ ॥ ಘಣಘಣಾಕೃತಿಯಿಂದಲಗ್ನಿಯು । ಕಣಗಳನೆಸಲೆಕಾರುತ । ಕಣುಮನವಕೋರೈಸೆಶತದಿನ । ಮಣಿಯುಲಹರಿಯಧರಿಸುತ । ಅಣದ ಜಾಂಡಗಳನ್ನು ಬೆಚ್ಚಿಸಿ । ಮಣಿಯ ದೈತರೆಕಾಣುತ । ತ್ರಿಣಯುನಸ್ತ್ರಕೆ ವಿಶ್ವಕರ್ಮನ । ಪ್ರಣಿತಶಕ್ತಿಯನೆಚ್ಚರಘುಪತಿ ॥ ೧ ॥ ಪಟುಪರಾಕ್ರಮನಹನುರಾಕ್ಷಸ । ಕಟಕದೊಳಗಿವನೆನ್ನುತ । ನಿಟಿಲಲೋಚನನಂತೆ ಖತಿಸಂ । ಘಟಿಸೆರಾಘವ ಮುಳಿವುತ । ಭಟನೆತಾಳಿದನೆಂದು ತಾನು । ತ್ಕಟದಶರಗಳಸುರಿಸುತ । ತಟನಿಪಿತಹುಂಕರಿಸಿದನು ಶಚಿ । ವಿಟಮುಖಾಮರವೃಂದನಲಿವುತ ॥ ೨ ॥

॥ ವಾರ್ಧಕ ॥

ಕೊರೆದವಂಗೋಪಾಂಗವಂ ರಾಮನಂಬುಗಳು । ತೆರೆದ ಜಾಳಂಧ್ರದಂತಾಯ್ತುಗಿದ ಬಟ್ಟೆಗಳು । ಕರೆದಪೇರ್ಮಳೆಯಿಂದ ನನೆದ ಜಾಜಿನ ಗಿರಿಯೊಳಿಳಿವಕೆಂಬೋನಲ್ಗಳ ॥ ತೆರೆದಲೆಸೆದೌರಕ್ತಧಾರೆಗಳ್ ಕಾಯದೊಳ್ । ಮರೆದನೊಡಲಂ ಖರಜರಥದಪಳವಿಗೆಯನೆ । ವ್ಮಿರೆಕಂಡು ಕಾರ್ಪಣ್ಯಮಂ ತಾಳಿ ಶ್ರೀರಾಮನೆಂದ ಖಳಸಾರಥಿಯೊಳು ॥ ೧ ॥

॥ ರಾಗ ಕಾಂಬೋಧಿ—ಅಷ್ಟತಾಳ ॥

ಭಳಿರೆಸಾರಥಿ ಕೇಳುಮಾತ । ರಣ । ದೊಳುನೊಂದನೋಡು ನಿನ್ನಾತ ॥ ಕೊಳುಗುಳದೊಳು ಬಲು । ಬಳಲಿದಾವನಕೊಲ್ವ ॥ ದಿಳೆಯವೀರರ ಧರ್ಮವಲ್ಲೈ । ತಿಳುಪೆನುಮದರಿಂದಲೊಂದನು ॥ ಭಳಿರೆ ॥ ೧ ॥ ಭುಜಬಲದೊಳು ಕುಂದುಕಾಣೆ । ಶಸ್ತ್ರ । ವ್ರಜಕೆಜೋಡಿಲ್ಲ ನಿನ್ನಾಣೆ ॥ ನಿಜಪರಾಕ್ರಮಧೈರ್ಯ । ಭುಜಗಭೂಷಣಗಿಲ್ಲ ॥ ತ್ರಿಜಗದಲಿ ಹೆಸರಾಂತ ಭಟನಿವ ಕುಜನಮಾರ್ಗದಿನಡೆವನಾದರು ॥ ೨ ॥ ನಡುಗುವುದಕೊಸರ್ವಾಂಗ । ನೋಡೆ । ಬಡವಾದುದಕಟಯೆನ್ನಂಗ ॥ ನುಡಿವಮಾತುಂಟುನಿ । ನ್ನೊಡೆಯನೊಳೆನಗೆಕೇಳ್ ॥ ತಡೆಯದೌಷಧಿಯಿಂದ ಬದುಕುವ । ಗೊಡವೆನೋಡ್ಯೆನಿನ್ನರಥಿಕನ ॥ ೩ ॥

॥ ಭಾಮಿನಿ ॥

ಕೇಳಿಸಾರಥಿಬಳಿಕ ಬಾಳದ। ಬಾಳನುಗಿದಾಗಾಯಕೌಷಧಿ। ಹೂಳಿ ಕರದಲಿ ಮತ್ತೆಕಲಶೋದಕದ ಧಾರೆಗಳ ॥ ಏಳೆನುತಕಂಗಳಿಗೆ ತಿದ್ದುತ। ಬೋಳವಿಸುವನಿತರೊಳು ಕಾರ್ಮುಕ । ತಾಳಿದುದುಕೊಂಡೆದ್ದುನಿಲಲಿನ ಕುಲಜಖಳಗೆಂದ ॥ ೧ ॥

॥ ರಾಗ ತುಜಾವಂತು—ಝಂಪೆತಾಳ ॥

ಕೇಳಸುರಕುಲಸುಧಾಂಬುಧಿಪೂರ್ಣಚಂದ್ರ । ಪೇಳುವೆನು ಮಾತೊಂದ ಚಾರುಗುಣಸಾಂದ್ರ ॥ ಪಲ್ಲವಿ ॥ ಅನುಜೆಗೋಸುಗ ಹಿಂದೆ। ದನುಜಪತಿಕೇಳ್ ನಿನ್ನ। ಜನಕನೆನ್ನೊಳುಕಾದಿ ಛಲದಿಜೀವವನು ॥ ಜಿನುಗಿಸಿದ ದಿವಸದಲಿ ತೀರಿತ್ತೆ ಪಗೆತನವು । ತನಯಗಡನೀನವಗೆ ಭಳಿರೆ ಮೆಚ್ಚಿದೆನು ॥ ಕೇಳಸುರ ॥ ೧ ॥ ನುಡಿವೆನದರಿಂದಕೇಳ್ ನಿನ್ನಕೊಲೆಗೆನ್ನ ಮನ। ಪೊಡಬಡುವುದಿಲ್ಲ ಕೃಪೆಕಡಲುಕ್ಕಿತೀಗ ॥ ಅಡಿಗೆರಗುಕಾವೆ ವಿಧಿಯುಸಿರಿಹನ್ನೆಬರತವ। ದೃಢವಪೇಳೆನಲೆಂದಕೇಳ್ದು ಖಳನಾಗ ॥ ೨ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಮಂದಮತಿಯೆಲೆರಾಮ ಮುನ್ನೈ। ತಂದಕಿವಿಯಿಂದಧಿಕವಾಮಿಗೆ। ಬಂದಕೋಡತಿ ಕಠಿಣವೆಂಬೀ। ದೊಂದನರಿಯಾ ॥ ೧ ॥ ತಂದೆವೈರದ ಕಿಚ್ಚುನಿನ್ನಲಿ । ಸಂದಿದಡೆನಂದುವುದೆತನಗೆಲೆ । ಕೊಂದುದಲ್ಲದೆವಾಣೆ ನಿಲುಧುರ। ಕಿಂದು ಮುಳಿದು ॥ ೨ ॥ ಭಳಿರೆ ರಾಘವ ದಿವ್ಯ ಬಾಣಾ। ವಳಿಯ ಜೈಸಿದೆನೆಂದು ಧಿಟಹೆ। ಕ್ಕಳಿಸದಿರುಸುರರಹಿತರದರಿಂ । ತಳುವದೀಗ ॥ ೩ ॥ ತಲೆಯುಬರಹವತೊಡೆವೆನೈಕುಂ । ಭಿಳೆಸುದತ್ತಮಹಾಸ್ತ್ರವಿದರೊಳು। ಬಲುಮೆಯನುನೀತೋರು ಘಡಹಿಂ। ಚಲಿಸದಿಂದು॥ ೪ ॥ ರಾಮಕೋರಣದಾಸುರಾಹ್ವಯ। ಭೀಮಬಾಣವ ಮರೆಯದೇತಕೆ। ಕಾಮಹರಕಮಲಾಸನರು ನಿ। ರ್ನಾಮಿಸುವರೈ ॥ ೫ ॥

॥ ವಾರ್ಧಕ ॥

ಪ್ರಾಣವಿರಲಿಕೆನೋಡಿಕೋರಾಮನಿದುವೆಗೀ ರ್ವಾಣನಿಕರದಕೊರಳ ಕತ್ತರಿಯು ಮಾನುಷ್ಯ । ಪ್ರಾಣಿಗಳೆನಿಪ್ಪವಿೂಸ್ಗಳ ಕಠಿಣಗಾಳವಿದು ಕಾಣೆನೆನ ಬೇಡಿದರೊಳು ॥ ತ್ರಾಣವಿರೆಸೆಣಸುನಿನ್ನುದರಮಂ ಬಗಿದುಬಿಸಿ।

ಶೋಣಿತವಸವಿವಸ್ತ್ರವಿದುವೆನೋಡೆನುತುಬ್ಬಿ । ಕ್ಷೋಣಿ ಮಂಡಲಬಿರಿಯು ವೋಲೆಚ್ಚನಿನಕುಲನಸಚರಾಚರಂಬೆಚ್ಚಲು ॥ ೧ ॥

॥ ರಾಗ ಭೈರವಿ—ತ್ರಿವುಡೆತಾಳ ॥

ಏನನೆಂಬೆ । ಸಾಹಸ । ವೇನನೆಂಬೆ ॥ ಪಲ್ಲವಿ ॥ ಕೋಟಿಮಿತ್ರರ ಬರ ವೊವಿಲಯಕ । ರೋಟಿಮಾಲೆಯ ಕೋಪಶಿಖಿಯುಸು । ಕೂಟವೋ ವರ್ಣಿಸುವಕವಿಯಾ । ರಾಟವೀಚರನಿಕರವದಕ । ಣ್ಣೋಟದಲೆ ಕೈವಲ್ಯ ರಾಗಲು । ದಾಟಿದುದು ಬಲುಬಾಣನಡೆದುನಿ । ಶಾಟಹರನಿದಿರಾಗಿಯೆಸು ಗೆಯ । ಸಾಟಿಗೊಳದುರುಭರದಿಭರದಲಿ ॥ ೧ ॥ ಎತ್ತನೋಡಲು ಭದ್ರ ಕಾಳಿಯು । ವೊತ್ತವೆತ್ತಲು ಮಕರಲೋಚನ । ತೆತ್ತಲುಂ ಪೆರ್ಮಳೆಯ ಸಿಡಿಲುಗ । ಳೆತ್ತಲುಂ ಸುಳಿಗಾಳಿವರಕ । ಗ್ಗತ್ತಲುಂ ಮತ್ತೆತ್ತ ಪೆರ್ಬುಲಿ । ಮೊತ್ತಮುಂ ಮರಿಸಿಂಗ ಶರಭಗ । ಳೆತ್ತಲುಂ ಕವಿವಸುರಸಂಚಯ । ಮುತ್ತಿಮೂದಲಿಸಿತ್ತು ರಘುಜನ ॥ ೨ ॥

॥ ಭಾಮಿನಿ ॥

ಅರಿಶರಕೆಬೆಚ್ಚುವನೆಸಾಕ್ಷಾ । ತ್ಕರನಲಾಮೇಣ್ ಕಪಟನಾಟಕ । ಧರನೆನಲು ರಘುಸೂನುಖತಿ ಮಸಗಿತು ಸುದರ್ಶನವ ॥ ತಿರುಗಿ ನೋಡಿದ ಡಾಗಶಿಖಿಹರಿ । ಹರಿಗಳಯುತಾಯುತ ಸಹಸ್ರದ । ಕಿರಣದಲಿ ನಿಜ ದುಗ್ರರೂಪದೊಳ್ಳೆದಿತಾರ್ಭಟಿಸಿ ॥ ೧ ॥

॥ ರಾಗ ಅಖಂಡವಾರವಿ—ಏಕತಾಳ ॥

ಜರಿದುದೊಸುರಗಿರಿ । ಧರಣಿಯು ಕುಗ್ಗಿತೊ । ಶರಧಿಗಳ್ ಬತ್ತಿತೊ । ಭರದಿಂದುರಿಯಿಂ । ದರುಹುವಡರಿಯದು । ಉರಗಕಮಠದಿ । ಕ್ಕರಿಗಳಿಗುಬ್ಬಸ । ಬರಿಸುತ ಘರ್ಜಿಸು । ತೇನನೆಂಬೆ ॥ ೧ ॥ ಹುಟ್ಟಿದ ಕಾಳಿಯು । ಥಟ್ಟುಗಳನು ಎ । ಬ್ಬಟ್ಟುತ ಖಳರನು । ಮೆಟ್ಟುತ ವಿಧವಿಧ । ಕುಟ್ಟುತಮಾಯಾ । ಬಟ್ಟೆಗರನು ಬಹ । ಳಟ್ಟಹಾಸದಿಮಿಗೆ । ಸುಟ್ಟು ರುಹಿದುದ । ಏನನೆಂಬೆ ॥ ೨ ॥ ಅರರೆಯಿದಚ್ಚರಿ । ಕರವೆನೆ ಬಳಿಕಾ । ಖರ ಸುತನೋರ್ವನ । ನಿರಿಸುತ ರಾಮನ । ಚರಣಕೆರಗೆಯೇ । ಸ್ಸರಿಮುಂ ದೆನಲದ । ಭರದಿಂ ಮನ್ನಿಸಿ । ಜರೆದನುಖಳನ ॥ ಏನನೆಂಬೆ ॥ ೩ ॥

॥ ಭಾಮಿನಿ ॥

ಅರರೆಕೇಳ್ ಖಳನಾಯಿಬಗುಳಿದೆ । ಹರದ್ರುಹಿಣಶಕ್ರಾದ್ಯರಿದರೊ ಳು । ಹರಣವಿಡಿಯರೆನುತ್ತ ಕಂಡ್ಯಾನಮ್ಮಕೈಗುಣವ ॥ ಅರಿಗಳನು ಸಂಹ

ರಿಪೆನಲ್ಲದೆ । ತಿರುಗೆವಾವ್ ಸಂಗರದಿತಿಳಿನೀ । ಖರಜಸೋ ಮೇಣ್ ಖರನೊ ಪೇಳೈಯೆನೆರಘುಪ್ರಭವ ॥ ೧ ॥

॥ ರಾಗ ಶಂಕರಾಭರಣ— ಮಟ್ಟೆತಾಳ ॥

ನೆಲನಬಿಟ್ಟ ಹೇಡಿ ಮನುಜ । ಕುಲದಿಹೇಡಿವನದಿ ತನ್ನ । ಲಲನೆಯನ್ನು ಕಳೆದ ಹೇಡಿ । ನಿಲದೆ ಕಪಿಗಳ ॥ ಬಲವನೆರದ ಹೇಡಿ ಮೋಸ । ದಲಿಸುರೇಂದ್ರ ಸುತನಕೊಂದ । ಬಲವಿಹೀನ ನಿನ್ನ ಶೌರ್ಯ । ನೆಲೆಯ ಕಾಂಬೆಲಾ ॥ ೧ ॥ ಮರುಳುಕಾಗೆ ಬಡಿದ ಹೆಮ್ಮೆ । ಧುರದಿ ಪಿತನಕೊಂದ ಹೆಮ್ಮೆ । ಶರಧಿ ಬಲಿದ ಹೆಮ್ಮೆಯಿಂದ । ಮೆರೆಯಬೇಡೆಲಾ ॥ ವರವಿಭೀಷಣಾಂಕ ಖೂಳ । ನಿರದೆ ಶರಣನಾದ ಹೆಮ್ಮೆ । ಮುರಿಯದಿರೆನಜಾಸ್ತ್ರವಿದಕೊ । ಸುರಿದೆಕೊಳ್ಳೆಲಾ ॥ ೨ ॥ ಸುರರಹವಿಯಕಳುವದ್ರೋಹಿ । ಸುರಪಸತಿಯನೆಳೆವ ದ್ರೋಹಿ । ಸುರೆಯಕುಡಿವ ದ್ರೋಹಿ ಪಿತನ । ತೊರೆದ ದ್ರೋಹಿಯೆ ॥ ಜರೆವನಮಗೆ ದ್ರೋಹಿನಾಯಿ । ಪೊರಲೆಸ್ವರ್ಗಕೆಡುಗೆ ದ್ರೋಹಿ । ಬರುವಶರವತರಿದೆ ದ್ರೋಹಿ । ಪರಮದ್ರೋಹಿಯೆ ॥ ೩ ॥

॥ ಭಾಮಿನಿ ॥

ಮುಂಚಿತೇನಿನ್ನೆಸುಗೆಸರಳಿನ । ಸಂಚಯುವನೋಡಾವಡೆನುತವಿ । ರಿಂಚಿಪಿತನೊಂದಂಬಿನಲಿರಿಪುಭಟನ ಸಾರಥಿಯ ॥ ವಂಚಿಸಿದನಾತುರಗನಾಲ್ಕರ । ಮಿಂಚಕೆಡಹಿವರೂಥವನು ಹರಿ । ಹಂಚುಮಾಡಿ ಮದಾಂಧನೆಸುಗೆಯಧನುವ ಖಂಡಿಸಿದ ॥ ೧ ॥

॥ ರಾಗ ಶಂಕರಾಭರಣ— ಮಟ್ಟೆತಾಳ ॥

ಒಡನೆ ಕಿಡಿಯನುಗುಳಿ ಖರಜ । ನುಡಿದನೆಲೆಲೆ ಮನುಜಧನುವ । ಕಡಿದಡೆಮ್ಮ ಕಲಿತನಕ್ಕೆ । ತೊಡಕದೇನೆಲಾ ॥ ಕಡಿದಡೆಮ್ಮ ಕಲಿತನಕ್ಕೆ । ತೊಡಕದೇನು ನೋಡುಗದೆಯ । ಕಡುಹನೆಂದು ಗಜರುತಿಟ್ಟ । ಪೊಡವಿಪಾಲಗೆ ॥ ೧ ॥ ವೈರಿಗದೆಯ ಕಡಿದುಸಾರು । ಸಾರುಕುನ್ನಿ ಕೂಗಬೇಡ । ತೋರುಬಲುಹನೆನ್ನೊಳೆನುತ । ಲಾರು ಭಟಿಸುತ ॥ ತೋರುಬಲುಹನೆನ್ನೊಳೆನುತ । ಲಾರುಭಟಿಸಿದನುಜನಸಿಯ । ಧಾರೆಯಿಂದತಿವಿಯೆ ಕಡಿದ । ನಾರಘೂತ್ತಮ ॥ ೨ ॥ ನಿಂದು ಖಳನು ಬಳಿಕನೊಂದ । ಹಂದಿಯಂತೆ ಪಲ್ಗಡಿಯುತ । ಲೆಂದ ಭಲರೆನರಸಮರ್ಥ । ನೆಂದು ಕೋಪದಿ ॥ ಎಂದ ಭಲರೆನರಸಮರ್ಥ । ನೆಂದು ಕೋಪದಿಂದ ಚಕ್ರ । ದಿಂದಲೆಚ್ಚಡರಿಯೆ ಮುಳಿಸಿ । ನಿಂದಲಾ ಕ್ಷಣ ॥ ೩ ॥

॥ ಭಾಮಿನಿ ॥

ಏರಿತಧಿಕಕ್ರೋಧಶಿಖಿಕಿಡಿ । ಹಾರಿದವುಕಂಗಳಲಿ ತನುಕಾ। ಹೇರಿ ದುದು ಕಾರ್ಬೊಗೆವಿಟಾಳಿಸಿತುರಿಯುಚರ್ಮಣಿಯುಲಿ ॥ ಮಾರುಗೊಂಡನು ವಿಲಯರುದ್ರನ । ತೋರಿಕೆಯ ತಮುದುಬ್ಬರವನೆನೆ । ತೂರಿಗಿಡಗಳದಿವ್ಯ ಶೂಲವನೆತ್ತಿ ಬೊಬ್ಬಿರಿದ ॥ ೧ ॥

॥ ರಾಗ ಸೌರಾಷ್ಟ್ರ—ತ್ರಿವುಡೆತಾಳ ॥

ಇದು ಕಣಾರಘುನಾಥ ನಿನ್ನಯು। ಮದಶಿಲೋಚ್ಚಯುವಜ್ರಸೀತಾ॥ ಸುದತಿಕಾಂಕ್ಷೆಯೆನಿಪ್ಪರೋಗವ । ನೊದೆವ ಮದ್ದು ॥ ೧ ॥ ಇದುಕಣಾ ಮತ್ಪಿತನ ಜಯುಫಲ । ವಿದುವೆರಿಪುವೇತಂಡ ಮೃಗಪತಿ । ಕದನದಲಿ ನೀಕೈಕೊತಪ್ಪದಿ । ರಿದಕೆಭಳಿರೆ ॥ ೨ ॥ ಸುಡುವುದಿದು ತ್ರೈಭುವನನಿನ್ನು । ಗ್ಗಡವಕೊಂಬುದೆ ಶಿವಕರಾಗ್ರದಿ । ಪಿಡಿವುದಿದು ನೋಡೆಂದು ಖಳಭೋ। ರ್ಗುಡಿಸೆ ಕೆರಳಿ ॥ ೩ ॥ ಸುಡುಸುಡಲೆನಿಶಿಚರ ಪಿಶಾಚಿಯೆ। ಬಿಡು ತ್ರಿಶೂ ಲವ ಬಗೆವೆನೇನಾ। ಸುಡುವೆ ಮುನಿದಡೆಯುಜಕಟಾಹವಿ। ದೊಡನೆ ಧಿಳಿ ಯ್ಯೆ ॥ ೪ ॥ ಆದಡಿಡಕೋ ಯೆನುತಲಾಖರ । ಸೂದನನು ಖರಸೂನು ಶೂಲದ । ಹಾದಿಗಜಶರವೆಚ್ಚತ್ರಿಜಗ । ಸ್ಮೋದಿಸಲ್ಕೆ ॥ ೫ ॥

॥ ವಾರ್ಧಕ ॥

ಉಭಯುಭಟರೆಚ್ಚಸ್ತ್ರ ಶಿಖಿಧೂಮುಜ್ವಾಲೆಗಂ । ದಭವಾದಿಸುರರಳ್ಕಿ ಹಾರಘೂತ್ತಮುನೆನನ । ಲ್ಕಭಯುಹಸ್ತವ ತೋರಿಸಚರಾಚರಾತ್ಮಕಂ ಖದ್ಯೋತತನುಭವನನು ॥ ವಿಭವದೀ ನಿಜಶರದಬೆಂಬಳಿಯನೇಮಿಸಲ್ । ರಭಸದಿಂದರಿಶೂಲಮಂ ಝುಡಿದುರಿಪುಶಿರವ । ನಭಕೇರಿಸಿತು ಕೂಡೆಸುರ ರಸುಮ್ನಾನಮುಂಪೊಗಳ್ವಕವಿಯುಂ ಕಾಣೆನು ॥ ೧ ॥

॥ ಭಾಮಿನಿ ॥

ಶರಕೆಕಾಣಿಕೆಯಿತ್ತು ನಭದಲಿ । ಕರವ ಮುಗಿದರು ಸುರರು ಸುಮನೋ । ವರುಷವನು ಸೂಸಿದರು ಸೀತಾಪ್ರಿಯುನ ಸಿರಿಮುಡಿಗೆ ॥ ಮೊರೆವದುಂದುಭಿಕಹಳೆಗಳ ಸು । ಸ್ವರದೊಳಾಗಮುರಿಯುರು ಪಾಡುತ । ನೆರೆಸುಳಿಸುತಾರತಿಯು ಜಯುವೆಂದರು ರಘೂತ್ತಮುಗೆ ॥ ೧ ॥

॥ ರಾಗ ಸಾಂಗತ್ಯ—ರೂಪಕತಾಳ ॥

ತರಳರುಕೇಳಿರಾ ಶರಬಂದು ಪುಗೆರಘು । ವರನ ಹೊಮ್ಮೊಡಿಗೆ ಗಾಗ ॥ ಇರದಿತ್ತ ಸೌಮಿತ್ರಾದ್ಯರು ಖಳಬಲವನು । ತರಿದು ಬಂದೆರಗಲು

ಬೇಗ ॥ ೧ ॥ ಬರಸೆಳೆವುತ ರಾಮ ನೊರೆದ ಸರ್ವರು ನೀವು । ದುರುಳ ರೊಳಿಂದಿನಾಹವದಿ ॥ ಪಿರಿದಾಗಿ ಬಳಲಿಬಂದಿರಿ ಬಳಿರೆನುತುಪ। ಚರಿಸಿದ ಡಾಗಸನ್ಮುದದಿ ॥ ೨ ॥ ಹರಿನಿನ್ನ ಮಹಿಮೆಯ ನೊರೆಯಲಾರಿಗೆ ಸಾಧ್ಯ। ಪರಬ್ರಹ್ಮನಹುದು ನೀನೆಂದು ॥ ತರಣಿಜಾದ್ಯರುಕೂಡಿ । ತರಣ್ಯಸ್ತಮಯ ನೋಡಿ। ಸರಿದರ್ಬೀಡಿಕೆಗೆ ರಾಜೇಂದ್ರ ॥ ೩ ॥

॥ ವಾರ್ಧಕ ॥

ಮತ್ತೆಶಕ್ರಾರಿದುರ್ವರ್ದಸು ಪಾರ್ಶ್ವಕರ ವೇ। ಲೊತ್ತಿ ರಾವಣನ ಲಂಕೆಯ ವಿಭೀಷಣಗಿತ್ತು । ಮತ್ತಕಾಶಿನಿಯಪೊಲಿಸುತ್ತನುಜ ಸಹಿತ ವರ ಪುಷ್ಪಕಾರೂಢನಾಗಿ॥ ಉತ್ತುಂಗಬಲದೊಡನೆ ಪೊಕ್ಕಯೋಧ್ಯೆಯ ಸಹಜ। ಮೊತ್ತಮಂ ಮನ್ನಿಸುತ ಕೌಸಲ್ಯೆ ಮೊದಲಾದ । ಮಾತೃಗಳಿಗೊಂದಿಸುತ ಶುಭಮಜ್ಜನದ ಮೇಲೆ ಮಾಂಗಲ್ಯಸುಮುಹೂರ್ತದಿ ॥ ೧ ॥ ಸರುವರಭಿ ಮತದಿಂದ ಪಟ್ಟಾಭಿಸೇಚನವ । ಧರಿಸಿದಂಪತಿಸಹಿತರಾಘವಂ ಮಗುಳೆ ಸುರ। ನರ ಭುಜಂಗಾದಿ ಲೋಕಾಧಿಪರು ಮುನಿವರರು ಕೈಸೇರ್ದರಾ ಸಭೆಯೊಳು ॥ ಪರತರಾನಂದ ಸ್ವರೂಪಸುಕಲಾಪಂಗೆ। ಗುರುವಸಿಷ್ಠಾದಿ ಗಳು ಮಂತ್ರಾಕ್ಷತೆಯ ತಳಿಯೆ। ಹರನರಸಿಮುಖ್ಯನಿಬಿಡಸ್ತನೆಯರಾರತಿಯ ನೆತ್ತಿದರು ಸುಸ್ವರದೊಳು ॥ ೨ ॥

॥ ರಾಗ ಧವಳಾರ—ಏಕತಾಳ ॥

ಶ್ರೀರಮಾಧವಗೆ ರಾಘವಗೆ। ನೀರಜಾಕ್ಷಗೆ ಜಗನ್ಮಯಗೆ॥ ಧಾರಿಣಿ ಸತೆ ಮುಖಕ್ಕೈರವಹರಿಗೆ। ವಾರಿಧಿ ನಿಭಗಂಭೀರವಿಕ್ರಮಗೆ ॥ ವಾರಿಧಿ ಬಂಧದಸುರಾರಿಗೆ ರಾವಣ । ವೈರಿಗೆ ತೋಷದಿ ಜಾನಕಿರಮಣಗೆ। ಮೇರು ವೆಳಾರತಿಯ ಬೆಳಗಿರೆ ॥ ಶೋಭಾನೆ ॥ ೧ ॥ ಶರಧಿಯೊಳಾಡಿ ಮಂದರವ। ಧರಿಸೂಕರನಾಗಿ ಮೆರೆವ॥ ನರಹರಿವಾಮನ ಕೊಡಲಿಯ ಪಿಡಿವ। ಧರಣಿ ಪದುರಥಗುದಿಸಿ ಶೋಭಿಸುವ ॥ ಪರಿಪರಿರೂಪದಿ । ಮೆರೆವಮಹಾತ್ಮಗೆ ಶರೀರ ಪೊರೆವ ಸು। ಸ್ಥಿರಕರರಾಮಗೆ। ಕುರುಜಿನಾರತಿಯ ಬೆಳಗಿರೆ ॥ ಶೋಭಾನೆ ॥ ೨ ॥ ಭೃಂಗಾಳಕಿಯರು ತೋಷದಲಿ। ರಂಗಧಾಮನಪದ ಪೊಗಳುತಲಿ॥ ತುಂಗಕುಚದ ಬಲುಭಾರಂಗಳಲಿ। ಸಿಂಗನವೊಲ್‌ಕಟಿ ಸಿಕ್ಕಿ ತೆನುತಲಿ॥ ತಿಂಗಳವದನೆಯು। ರಂಗಜನಯ್ಯ ಭು। ಜಂಗಶಯನ ಪಾಂಡು। ರಂಗ ಶ್ರೀರಾಮಗೆ। ಮಂಗಲಾರತಿಯ ಬೆಳಗಿರೆ ॥ ಶೋಭಾನೆ ॥ ೩ ॥

॥ ಭಾಮಿನಿ ॥

ಬಳಿಕಲಾಸುಗ್ರೀವ ಜಾಂಬವ । ನಳಹನುಮ ನೀಲಾಂಗದಾದ್ಯರ । ಕಳುಹಿದನು ಪಲವಿಧದಿ ಮನ್ನಿಸಿಮಿಗೆ ವಿಭೀಷಣನ ॥ ತಳುವದುಪಚರಿಸುತ್ತ ಮರಳಿ ಚು। ತಿಳಿಯಸುತೆ ಸಹಜಾವಳಿಗಳೊಡ । ನಿಳೆಯ ಹರುಷದೊಳಾಳುತಿರ್ದನೃಪಾಲಕುಲರನ್ನ ॥ ೧ ॥

॥ ವಾರ್ಧಕ ॥

ಈ ತೆರದಿ ವಾಲ್ಮೀಕಿ ಕುಶಲವರಿಗೆಂದ ಕಥೆ । ಭೂತಳದೊಳಧಿಕ ಬಾಯಾರಗ್ರಾಮದೊಳು ವಿ। ಖ್ಯಾತಹವ್ಯಕದ್ವಿಜೋತ್ತಮ ಜತ್ತಿಕೃಷ್ಣಯ್ಯ ಸುದರಾಬ್ಧಿ ಪೂರ್ಣಚಂದ್ರ ॥ ಜಾತನೀಶ್ವರನೆಂಬ ಬಾಲನಾಂ ವಿರಚಿಸಿದೆ। ನೀತೆರದಿ ಗುರುವಿಶ್ವನಾಥ ಪೇಳಿಸಿದಂತೆ । ಚಾತುರ್ಯಸೊಂಪಿರದಡೇನು ಹರಿನಾಮಮಿರೆ ಪೆರತೆಲ್ಲಮೆರೆಸಿಸಾಂದ್ರ ॥ ೧ ॥

॥ ರಾಗ ಸೌರಾಷ್ಟ—ಏಕತಾಳ ॥

ಮಂಗಲವೆನ್ನಿರೊ ಮಹನೀಯಗೆ । ಕಂಗಳು ಮೂರುಳ್ಳಕಮನೀಯಗೆ ॥ ಪಲ್ಲ ॥ ಗಂಗೆಯುಪೊತ್ತ ಭುಜಂಗಭೂಷಣನಿಗೆ । ರಂಗನಪ್ರಿಯಸಾಧುಸಂಗನಿಗೆ॥ ಮಂಗಲ॥ ಅನುಪಲ್ಲವಿ ॥ ಬಾಲೇಂದುಧರಸರ್ವೇಶ್ವರಗೆ। ಬಾಲಾರ್ಕತೇಜ ವಿಶ್ವೇಶ್ವರಗೆ ॥ ನೀಲಕಂಧರಗೆ ಕಪಾಲಿಗೆ ಸಾಂಬಗೆ। ಮೂಲೋಕದೊಡೆಯ ವಿಶ್ವೇಶ್ವರಗೆ ॥ ಮಂಗಲ ॥ ೧ ॥ ನಿತ್ಯನಿರಾಮಯನಿರ್ಗುಣಗೆ । ನಿತ್ಯಾತ್ಮರೂಪಚಿದಂಬರಗೆ ॥ ಸ್ತುತ್ಯಸುರಾಸುರ ಭೃತ್ಯಜನೋದ್ಧರ। ಕಾತ್ಯಾಯನಿ ಪ್ರಿಯನಿತ್ಯನಿಗೆ ॥ ಮಂಗಲ ॥ ೨ ॥ ಈಶಪಾಶನಾಶರಹಿತಗೆ ಸಂತೋಷಿಗೆ ಸುರೇಶನಿಗೆ। ಶೇಷಕುಂಡಲಗೆ ವಿಶ್ವೇಶ್ವರಗೆ ॥ ನಾಶರಹಿತಗೆ ಸಂತೋಷಿಗೆ ಮಮಗುರು । ಕಾಶಿ ವಿಶ್ವೇಶ್ವರ ಶ್ರೀಶಿವಗೆ ॥ ಮಂಗಲವೆನ್ನಿರೊ ಮಹನೀಯಗೆ ॥ ೩ ॥

ಸಂಪೂರ್ಣ